
ಸಂಪುಟ 20 ಸಂಚಿಕೆ 46
ನವೆಂಬರ್ 14, 1999 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಐಕ್ಯರಂಗ

ಬಸ್ ಪ್ರಯಾಣ ದರ ಏರಿಕೆಯ ಹೊರೆ





"ಸಿಲಿಕಾನ್ ಕಣಿವೆ"ಯಲ್ಲಿ ಧೂಳೆಬ್ಬಿಸಿದ

BANGALORE IT.COM '99 INDIA
BENEFIT FROM IT

ಶಹಪುರ ಶೇಂಗಾ ರೈತರ ಬವಣೆ

ಕೊಡಗು ಪ್ರತ್ಯೇಕತಾವಾದಿಗಳ ಹೂಟ

ಮಾಹಿತಿ ತಂತ್ರಜ್ಞಾನಕ್ಕೆ ಕುಮ್ಮಕ್ಕು ಬಡವರಿಗೆ ಗಿಮ್ಮಿಕ್ಕು

ರಾಜ್ಯದ ಮುಖ್ಯ ಮಂತ್ರಿಯಾದ ಮೇಲೆ ನೀಡಿದ ಪತ್ರಿಕಾ ಗೋಷ್ಠಿಯಲ್ಲಿ ರಾಜ್ಯೋತ್ಸವದಿನದೊಂದು ತಮ್ಮ ಸರ್ಕಾರದ ಕೆಲವು ಕಾರ್ಯ್ರ ಕ್ರಮಗಳನ್ನು ಘೋಷಿಸಲಿದ್ದೇವೆಂದು ಹೇಳಿದ್ದರು. ಕರ್ನಾಟಕದ ರಾಜ್ಯ ಸರ್ಕಾರಗಳು ರಾಜ್ಯೋತ್ಸವದಿನದೊಂದು ಹಲವು ಕಾರ್ಯಕ್ರಮಗಳನ್ನು ಘೋಷಿಸುವ ಪರಿಪಾಠವನ್ನು ಇಟ್ಟುಕೊಂಡಿವೆ. ಕರ್ನಾಟಕದ ಜನತೆಗಾಗಲಿ, ಭಾಷೆ, ಸಂಸ್ಕೃತಿಯ ಅಭಿವೃದ್ಧಿಯ ಬಗ್ಗೆಯಾಗಲಿ ಅನುಕೂಲವಾಗುವ ಕಾರ್ಯಕ್ರಮಗಳನ್ನು ನೀರೀಕ್ಷಿಸುತ್ತಿದ್ದವರಿಗೆ ನಿರಾಸೆಯಾಗಿದೆ.

ಕರ್ನಾಟಕದ ಎಲ್ಲಾ ಜನತೆಯ ಅದರಲ್ಲಿಯೂ ಬಡಜನತೆಯ ಕಲ್ಯಾಣಕ್ಕೆ ಬದಲಾಗಿ ಮುಖ್ಯಮಂತ್ರಿಗಳು ಅಂದು ಮಾಹಿತಿ ತಂತ್ರಜ್ಞಾನ ಕೈಗಾರಿಕೆಗೆ 40 ರಿಂದ 50 ಕೋಟಿ ರೂ. ದಾನ ನೀಡುವ ಘೋಷಣೆಯನ್ನು ಮಾಡಿದ್ದಾರೆ. ಮಾರಾಟ ತೆರಿಗೆ, ಪ್ರವೇಶ ತೆರಿಗೆ, ಕಂಟ್ರಾಕ್ಟ್ ತೆರಿಗೆ ಮುಂತಾದವುಗಳನ್ನು ರದ್ದು ಮಾಡಿದ್ದಾರೆ. ಬೆಂಗಳೂರು ಮಾಹಿತಿ ತಂತ್ರಜ್ಞಾನದ ಉತ್ತುಂಗಕ್ಕೇರಬೇಕು ಅದಕ್ಕೆ ಕರ್ನಾಟಕ ಸರ್ಕಾರ ಉತ್ತೇಜನ ನೀಡಬೇಕು ಎನ್ನುವುದನ್ನು ವಿರೋಧಿಸುವವರು ಯಾರೂ ಇಲ್ಲ. ಆದರೆ ಕಂಪ್ಯೂಟರ್ ಹಾಗೂ ಮಾಹಿತಿ ತಂತ್ರಜ್ಞಾನ ಯಾರಿಗಾಗಿ? ಕರ್ನಾಟಕದ ಅಭಿವೃದ್ಧಿಗಾಗಿ, ಕರ್ನಾಟಕದ ಜನತೆಯ ಸಂಕಷ್ಟಗಳನ್ನು ಪರಿಹರಿಸುವುದಕ್ಕಾಗಿ ಈ ಆಧುನಿಕ ತಂತ್ರಜ್ಞಾನದ ಸಾಧ್ಯತೆಗಳನ್ನು ಉಪಯೋಗಿಸಲಾಗುತ್ತಿದೆಯೇ?


ಕರ್ನಾಟಕ ರಾಜ್ಯದಲ್ಲಿ ಪಂಚಾಯತ್ ಮಟ್ಟದವರೆಗೂ ಕಂಪ್ಯೂಟರ್ ಮೂಲಕ ಆಡಳಿತ, ಪ್ರತಿ ಇಲಾಖೆಯ ಶೇ 5 ರಷ್ಟು ಹಣ ಇದಕ್ಕಾಗಿ, ಜಿಲ್ಲಾಧಿಕಾರಿ, ಪೋಲೀಸ್ ಅಧಿಕಾರಿ ಹಾಗೂ ಜಿಲ್ಲಾ ಪಂಚಾಯತ್ ಇವು ಕರ್ನಾಟಕದ ಎಲ್ಲಾ ಜನರ ಅನುಕೂಲಕ್ಕಾಗಿ ಎಂದು ಸರ್ಕಾರ ಹೇಳಬಹುದು. ಆದರೆ ಈ ಅಧಿಕಾರಿಗಳು ಜನರ ಸಂಕಷ್ಟಗಳಿಗೆ ಮಿಡಿದರೆ, ವಾಸ್ತವ ಪರಿಸ್ಥಿತಿಯ ಬಗ್ಗೆ ವಿವರ ನೀಡಿದರೆ ತಾನೇ ಕಂಪ್ಯೂಟರ್ ಮೂಲಕ ಸಭೆ ನಡೆಸಿದರೂ ದಿನ-ದಿನ ಚರ್ಚಿಸಿದರೂ ಪ್ರಯೋಜನಕ್ಕೆ ಬರುವುದು? ಸರ್ಕಾರ ಜನಪರ ಕಾರ್ಯಕ್ರಮಗಳನ್ನು ರೂಪಿಸಿ ಅದರ ಅನುಷ್ಠಾನವನ್ನು ಮಾಡಲು ಈ ಕಂಪ್ಯೂಟರ್ ಜಾಲವನ್ನು ಬಳಸಿದರೆ ತಾನೆ ಜನರಿಗೆ ಈ ಜಾಲದ ವೇಗ, ದಕ್ಷತೆಯಿಂದ ಪ್ರಯೋಜನವಾಗುವುದು?

ಈ ಕಡೆ ಸರ್ಕಾರದಿಂದಲೂ, ಆಕಡೆ ಅಧಿಕಾರಿ ಸಮೂಹದಿಂದಲೂ ಅಂತಹ ಯಾವುದೇ ಗುಣಾತ್ಮಕ ಬದಲಾವಣೆ ಇರದೆ, ಯಾವುದೇ ಜನಪರ ಕಾರ್ಯಕ್ರಮಗಳನ್ನು ರೂಪಿಸದೆ ಇರುವಾಗ ಈ ಕಂಪ್ಯೂಟರ್ ಜಾಲದ ಪ್ರಯೋಜನವೇನು?

ತಿಂಗಳುಗಟ್ಟಲೆ ಸಮಯ ವ್ಯಯ ಮಾಡಿ ಯಾವ ಸುಳ್ಳು ವರದಿಗಳನ್ನು ಕಳುಹಿಸುತ್ತಿದ್ದರೋ ಅದೇ ವರದಿಗಳನ್ನು ಇಂದು ಶರವೇಗದಲ್ಲಿ ಸರ್ಕಾರಕ್ಕೆ ತಲುಪಿಸಬಹುದು. ಸರ್ಕಾರದಿಂದ ಪತ್ರಿಕೆ, ಟಿ.ವಿ.ಗಳಿಗೆ ಸುಳ್ಳಿನ ಮನೆಯ ಮೇಲೆ ಆಧಾರಿತವಾದ ಮಂಕುಬೂದಿ ಎರಚುವ ಮಾಹಿತಿ ಬಹುಬೇಗನೇ ತಲುಪಬಹುದು. ಇಷ್ಟಲ್ಲದೆ ಮತ್ತೇನು ಸಾಧ್ಯ? ಆಡಳಿತದ ಮೂಲಭೂತ ನೀತಿ, ಧೋರಣೆಗಳು ಜನಮುಖಿಯಾಗದೇ ಹೋದರೆ ಇದೇ ಕಂಪ್ಯೂಟರ ಜಾಲ ಜನರನ್ನು ಜನರ ಚಳುವಳಿಯನ್ನು ನಿಗ್ರಹಿಸುವ, ಚಿವುಟಿಹಾಕುವ, ಕ್ರೂರ ದಬ್ಬಾಳಿಕೆಯ ಸಾಧನವಾಗಬಹುದು ಅಷ್ಟೇ. ಕಂಪ್ಯೂಟರ್ ಜಾಲದಿಂದ ಅಲ್ಲಿ ಇಲ್ಲಿ ಸ್ವಲ್ಪ ಆಡಳಿತಾತ್ಮಕ ಅನುಕೂಲಗಳು ಜನರನ್ನು ಈ

ಕಟುವಾಸ್ತವದ ಬಗ್ಗೆ, ಕಣ್ಣು ಮುಚ್ಚಿಕೊಳ್ಳುವಂತೆ ಮಾಡಬಹುದು. ಅದರಲ್ಲಿಯೂ ಕಾರ್ಮಿಕ, ರೈತ, ಮಹಿಳಾ, ವಿದ್ಯಾರ್ಥಿ ಯುವಜನ ಚಳುವಳಿಕಾರರು ಸದಾ ಎಚ್ಚರದಿಂದಿರಬೇಕು.

ಸಂಪಾದಕೀಯ



ಕೃಪೆ ಜನವಾಹಿನಿ

ಬರ-ನೆರೆಪರಿಹಾರ

ಆಡಳಿತ ಹಾಗೂ ವಿರೋಧ ಪಕ್ಷಗಳ ಗೋಸುಂಬೆ ನೀತಿಗಳು

ಕರ್ನಾಟಕ ರಾಜ್ಯವು ಇತ್ತೀಚಿನ ದಿನಗಳಲ್ಲಿ ಬರವನ್ನು ಹಾಗೂ ನೆರೆಯನ್ನು ಕಂಡು ಸಾಕಷ್ಟು ನಷ್ಟ ಅನುಭವಿಸಿರುವುದು ಓದುಗರಿಗೆ ವೇದ್ಯವಾದ ವಿಷಯವಾಗಿದೆ.

ವಿಧಾನಸಭೆಯ ಮೊದಲ ಅಧಿವೇಶನದ ಮೊದಲ ದಿನಗಳಲ್ಲಿಯೇ ವಿರೋಧ ಪಕ್ಷಗಳಾದ ಜನತಾದಳ(ಯು) ಹಾಗೂ ಬಿಜೆಪಿ ಪಕ್ಷಗಳು ಬರ ಹಾಗೂ ನೆರೆ ಪರಿಹಾರ ಕ್ರಮದ ಬಗ್ಗೆ ಒತ್ತಾಯಿಸಿರುವುದು ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಪ್ರಶ್ನೆಯ ಕಡೆ ಈ ಕೂಡಲೇ ರಾಜ್ಯ ಸರ್ಕಾರವು ಯುದ್ಧೋಪಾದಿಯಲ್ಲಿ ಗಮನ ಕೊಡುವುದು ಬರ ಹಾಗೂ ನೆರೆ ಪೀಡಿತರಿಗೆ ನೆರವಾಗುವುದು ಅತ್ಯಂತ ತುರ್ತಿನ ಕೆಲಸವೇ ಆಗಿದೆ. ಎಸ್.ಎಂ.ಕೃಷ್ಣರ ನಾಯಕತ್ವದ ರಾಜ್ಯ ಸರ್ಕಾರ ಶೀಘ್ರ ಈ ಕೆಲಸದಲ್ಲಿ ತೊಡಗಬೇಕಾದುದು ಅಗತ್ಯವೇ ಆಗಿದೆ. ಆದರೆ ರಾಜ್ಯದಲ್ಲಿ ಕೆಲವೇ ವಾರಗಳ ಹಿಂದೆ ಆಡಳಿತದಲ್ಲಿದ್ದ ಜನತಾದಳ (ಯು) ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ತೀವ್ರವಾಗುತ್ತಿದ್ದರೂ ಏನೂ ಮಾಡದೆ ಸುಮ್ಮನಿದ್ದುದ್ದಲ್ಲದೆ ಚುನಾವಣೆಗಳು ಮುಗಿಯುವವರೆಗೂ ಬಯಲಿಗೆ ಬೀಳದಂತೆ ಮುಚ್ಚಿಟ್ಟ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪರಿಹಾರಕ್ಕಾಗಿ ಆಗಲೇ ಒತ್ತಡ ಹಾಕಿ ಪಡೆಯದ ಬಗ್ಗೆ ಯಾವ ವಿವರಣೆ ನೀಡುತ್ತದೆ.


ಬಡಜನತೆಗೆ ಉದ್ಯೋಗ ಒದಗಿಸುವ NREP-RLEGP ಯಂತಹ ಸ್ಕೀಮುಗಳು ಬಜೆಟ್‌ನಲ್ಲಿ ಹಣ ನೀಡದೇ ಇರುವುದರಿಂದ ಕಳೆದ ಏಳೆಂಟು ವರ್ಷಗಳು ನಿರಂತರವಾಗಿ ಬರ ಪರಿಹಾರ ಕಾಮಗಾರಿ ಮಾಡಲು ಅಡ್ಡಿಯಾಗಿಲ್ಲವೇ? ಕಳೆದ ಲೋಕಸಭೆಯ 2 ವರ್ಷಗಳ ಬಜೆಟ್‌ನಲ್ಲಿ ಪ್ರಕೃತಿ ವಿಕೋಪಕ್ಕೆ ನೆರವಾಗಬೇಕಾದ ನಿಧಿಯನ್ನು ತೀವ್ರ ಕಡಿತಕ್ಕೊಳಪಡಿಸಲಿಲ್ಲವೇ? ಇದಕ್ಕೆ ಬಿಜೆಪಿ ಒಂದು ರಾಜಕೀಯ ಪಕ್ಷವಾಗಿ ಅದಕ್ಕೂ ನೀಡುವ ವಿವರಣೆ ಏನು? ಹಿಂದಿನ ಕಾಂಗ್ರೆಸ್ ಕೇಂದ್ರ ಸರ್ಕಾರವೂ ಈ ಕೆಲಸವನ್ನೇ ಮಾಡಿರಲಿಲ್ಲವೇ. ಹೊಸ ಆರ್ಥಿಕ ನೀತಿಯ ಅಂಗವಾಗಿ ಇವು ಗೊತ್ತಿದ್ದೂ ಆಡುವ ನಾಟಕವೋ - ನಾವು ಹೀಗೇ ಎಂದು ತೋರಿಸಿಕೊಳ್ಳುವ ಗೋಸುಂಬೆತನವೋ?

ಜೆ.ಹೆಚ್.ಪಟೇಲರ ಸರ್ಕಾರ ಬರಗಾಲ ಎದುರಿಸಿದ ಜನತೆಗೆ ಕೇವಲ ಅಧಿಕಾರಗಳಿಂದ ವರದಿ ತರಿಸಿಕೊಳ್ಳುವ ಮಾತುಗಳನ್ನು ಉಣಬಡಿಸಿದ್ದು ಬಿಟ್ಟರೆ ಮಾಡಿದ್ದೇನು? ಅಥವಾ ಬಿಜೆಪಿ ನಾಯಕರು ಹೋರಾಡಿ ಕೇಂದ್ರ-ರಾಜ್ಯಗಳಿಂದ ನೆರವು ಪಡೆದು ಶಾಶ್ವತ ಪರಿಹಾರಕ್ಕೆ ಒತ್ತಾಯಿಸಿದರೆ? ಮಾಡುತ್ತಿರುವುದೆಲ್ಲಾ ನಾವು ಜನಪರವೆಂದು ಹೇಳಿಕೊಳ್ಳಲು ಮಾಡುತ್ತಿರುವ ಹ... ನಾಟಕದ ಹೊಸ ತಾಲೀಮು ಎಂಬ... ಜನತೆ ಅರಿಯದ... ಮೂರ್ಖರಾಗಿರುವರೇ?

ಕಾಂಗ್ರೆಸ್-ಬಿಜೆಪಿ ಹಾ... ಜನತಾದಳ(ಯು) ಗಳು ರಾಜ್ಯ ಅ... ಕೇಂದ್ರ ಸರ್ಕಾರ ನಡೆಸಿ ಅನುಭವವಿರು... ಆಗಿದ್ದು ಸಾಮಾನ್ಯ ಜನತೆ ಸಂಕಷ್ಟದಲ್ಲಿರು... ಪ್ರಾಮಾಣಿಕ ಕಾಳಜಿ ತೋ... ನೆರವಾಗಬೇಕಾದ ಸಂದರ್ಭದಲ್ಲಿ ತಮ... ಪಕ್ಷದ ಧೋರಣೆಗಳ ಅಕ್ರಮಗ... ತೆಗೆದುಕೊಳ್ಳಲು ಅಡ್ಡವಾಗಿದೆಯೆಂಬು... ಮರೆಮಾಚಿ ಕೇವಲ ವಿರೋಧ ಪಕ್ಷದ ... ವಿರೋಧ ಮಾಡುವುದೆಂಬ ಕಾರಣಕ್ಕಾಗಿ ಇಂತಹ ಪ್ರಶ್ನೆಗಳನ್ನು ಎತ್ತುತ್ತಿದ್ದಾರೆ.

ರಾಜ್ಯ ಸರ್ಕಾರವೂ ತಕ್ಷಣ ... ಖಾತೆಯಿಂದ ನೆರವಾಗಲೀ, ಕೇಂದ್ರ... ಹೆಚ್ಚಿನ ಸಹಾಯ ಪಡೆಯಲು ಒಗ... ಹೋರಾಡುವುದು, ಶಾಶ್ವತ ಪರಿಹಾ... ವಿಧಾನಸಭೆ ಗಮನ ಹರಿಸದುದೇ ಜ... ಪರಿಹಾರವಿಲ್ಲವಾಗಿದೆ.

ಹೊಸ ಆರ್ಥಿಕ ನೀತಿಯ ಭಾಗ... ಬರ, ನೆರೆ ಪರಿಹಾರಗಳಿಗೆ ಅಗತ್ಯ... ನಿಧಿಯನ್ನು ಕಡಿತ ಮಾಡಿರುವುದ... ಹಿಂತೆಗೆದುಕೊಳ್ಳಬೇಕು ಮತ್ತು ನಿಧಿಯ... ಹೆಚ್ಚಿಸಬೇಕೆಂದು ಕೇಂದ್ರದಲ್ಲಿ ಆಡ... ನಡೆಸುತ್ತಿರುವ ತಮ್ಮ ಸರ್ಕಾರವ... ಬಿಜೆಪಿ-ಜನತಾದಳ(ಯು) ಗ... ಒತ್ತಾಯಿಸಬೇಕು. ಇದು ನಿಜ... ರಾಜಕೀಯ ಪಕ್ಷವಾಗಿ ಕೆಲಸ ಮಾ... ರೀತಿ.



"ನೀರು, ಆಸ್ಪತ್ರೆ ಇಲ್ಲದೆ ತೊಂದರೆ ಆಗ್ತಿದೆ ... ಜನ ಬಂದಿದ್ದರು. 'ನೀವೇ ಅ... ಸ್ಪಂದಿಸಿಕೊಳ್ಳಿ' ಅಂತ ಹೇಳಿ ಕಳಿಸಿದೆ ಸಾರ್ ...

ಕೃಪೆ ಪ್ರಜಾವಾ...

ಪ್ರಯಾಣ ದರಗಳ ಏರಿಕೆಯ ಹೊರೆ

ಎಸ್. ವೈ. ಗುರುಶಾಂತ್

ರಾಜ್ಯೋತ್ಸವಕ್ಕೆ ಕೊಡಬೇಕೆಂದಿದ್ದರು. ಆದರೆ ದೀಪಾವಳಿಗೆ ಮುನ್ನಾ ದಿನ ನೀಡಿದ್ದಾರೆ. ಈ ಕೊಡುಗೆಗೆ ಜನ ದುಂಬಾಲು ಬೀಳಲಿಲ್ಲ. ಪಡಿತರ ಅಂಗಡಿಯಲ್ಲಿ ಸಕ್ಕರೆ ಅಗತ್ಯದಷ್ಟು ಸಿಗಲಾರದೇ, ಮಾರುಕಟ್ಟೆಯಲ್ಲಿದ್ದರೂ ಬೆಲೆ ನೀಡಲಾಗದೇ ಬೆಳಕಿನ 'ದೀಪಾವಳಿ ಹಬ್ಬ' ಏಗ 'ಕಹಿ' ಎಂದು ಪತ್ರಿಕಾ ವರದಿಗಳು ಮೆದುಳು ನಾಲಿಗೆಯನ್ನು ಸಿದ್ಧಗೊಳಿಸುತ್ತಿವೆ. ಈ ಆತಂಕ ಅನುಭವಿಸುತ್ತಿದ್ದ ಜನರಿಗೆ ನೆತ್ತಿಯ ಮೇಲೆ ಹೊಡೆದಂತೆ, ಬಯಸದೇ ಬಂದ ಕೊಡುಗೆಯೇ ಬಸ್ ಪ್ರಯಾಣ ದರ ಹೆಚ್ಚಳ. ಇದಕ್ಕಿದ್ದಂತೆ ಪ್ರತಿಯೊಬ್ಬ ಪ್ರಯಾಣಿಕನೂ ತೆರಬೇಕಾದ ಹೆಚ್ಚು ಹಣ ಶೇ.35 ರಿಂದ 40 ರಷ್ಟು. ಹತ್ತು-ಇಪ್ಪತ್ತಾರು ಕೀ.ಮೀ. ಗಳ ಪ್ರಯಾಣ ಮಾಡಿ ದಿನನಿತ್ಯವೂ ದುಡಿದು ಬರುವ ಕೆಲಸಗಾರರೇ ಅತ್ಯಧಿಕ. ಅವರು ಪಡೆಯುವ 600-700 ಸಂಬಳದಲ್ಲಿ ಬಸ್ ಪ್ರಯಾಣಕ್ಕೆ ಕೊಡಬೇಕಾದದು ಅರ್ಧಕ್ಕಿಂತ ಹೆಚ್ಚಿನ ಸಂಬಳ. ಬಸ್ ದರಗಳೋ ಹೆಚ್ಚಿದಾವು. ಆದರೆ ಸಂಬಳ ಹೆಚ್ಚಬೇಕಲ್ಲಾ? ಇದು ಆಡಳಿತ ವರ್ಗಕ್ಕೆ, ಸರಕಾರಕ್ಕೆ ಸಂಬಂದಿಸಿದ ವಿಷಯವೆಂದೇ ಕೈ ಚೆಲ್ಲಿ ಕುಳಿತಿದ್ದಾರೆ: ಒಬ್ಬರು ಇನ್ನೊಬ್ಬರ ಮೇಲೆ:

ಇಷ್ಟೊಂದು ಪ್ರಯಾಣದ ದರಗಳ ಹೆಚ್ಚಳ ಯಾಕೆಂದು ಕೇಳಿದರೆ ಡೀಸಲ್ ಬೆಲೆ ಹೆಚ್ಚಿಸಲಾಗಿದೆ ಎಂಬುದು ಸಾರಿಗೆ ಸಚಿವರ ಉತ್ತರ. ಡೀಸೆಲ್ ಬೆಲೆ ಇಳಿಸಲು ಕೋರಿ ಪ್ರಧಾನಿ ಮಂತ್ರಿಗಳಿಗೆ ಪತ್ರ ಬರೆದು ಒಂದೆರಡು ದಿನ ಕಾದೆವು. ಉತ್ತರ ಬರಲಿಲ್ಲ. ಹೀಗಾಗಿ ಏರಿಕೆ ಅನಿವಾರ್ಯ ಎಂಬ ಸಬೂಬು ನೀಡಿ ಮಗ್ದನಂತಿರುವ ಮುಖ್ಯಮಂತ್ರಿ ಕೇಂದ್ರದತ್ತ ಬೆರಳು ಮಾಡುತ್ತಾರೆ. ಕೇಂದ್ರ ಸರ್ಕಾರವೋ...ವಿಶ್ವ ಮಾರುಕಟ್ಟೆಯತ್ತ ತೋರಿಸುತ್ತಿದೆ. ವಿಶ್ವ ಮಾರುಕಟ್ಟೆಯವರು ಜನಸಾಮಾನ್ಯರ ಸಂಕಷ್ಟಕ್ಕೆ ಸಿಗುವುದಿಲ್ಲ. ಸಿಕ್ಕಿದರೆ ಅವರೂ ಒಂದು ದಾರಿತೋರಿಸುತ್ತಿದ್ದರೇನೋ. ಇಲ್ಲಿ ಮುಖ್ಯ ಪ್ರಶ್ನೆ ಒಬ್ಬರು ಇನ್ನೊಬ್ಬರ ಮೇಲೆ ಕಾರಣ ಹಾಕುವುಧಕ್ಕೆ ಜನರಿಗೆ ಬೆನ್ನು ತೋರಿಸುವುದಕ್ಕೆ ಇವರುಗಳನ್ನು ಆರಿಸಿ ಸರ್ಕಾರಿ ಪೀಠದಲ್ಲಿ ಕೂಡಿಸಲಾಗಿದೆಯೇ? ಎಂಬುದು ಅಥವಾ ಜನ ಸಾಮಾನ್ಯರ ಗೋಳನ್ನು ಕೊನೆಗಾಣಿಸುವ ನಿಟ್ಟಿನಲ್ಲಿ ಕಿಂಚಿತ್ ಆದರೂ ಪ್ರಾಮಾಣಿಕವಾಗಿ ಪ್ರಯತ್ನಿಸಲೆಂದೇ?. ಇದರಿಂದ ಸಾರಿಗೆ ಸಂಸ್ಥಗೆ 110 ಕೋಟಿ ನಷ್ಟವಾಗುತ್ತಿದೆ ಎನ್ನುತ್ತಾರೆ ಸಾರಿಗೆ ಸಚಿವ ಸಗೀರ್ ಅಹಮ್ಮದ್, ನಷ್ಟದ ಪ್ರಮಾಣ ದಿನವೊಂದಕ್ಕೆ ಒಂದು ಕೋಟಿ (ಅಂದರೆ ವರ್ಷಕ್ಕೆ 365 ಕೋಟಿ) ಎಂದು ಹಿಗ್ಗಿಸುತ್ತಾರೆ, ಮುಖ್ಯಮಂತ್ರಿಗಳು. ಇದರಲ್ಲಿ ಯಾರ ಮಾತ್ತನ್ನು ನಂಬುವುದು?. ಆದರೆ ಇಬ್ಬರದೂ ಒಂದೇ ತರ್ಕದ ಲೆಕ್ಕಾಚಾರ... ಡೀಸೆಲ್ ಬೆಲೆ ಹೆಚ್ಚಳ ತೋರಿಸಿ ಮನಸೋ ಇಚ್ಛೆ ಪ್ರಯಾಣ ದರಗಳನ್ನು ಹೆಚ್ಚಿಸುವುದೆ?. ಬೆಲೆ ಹೆಚ್ಚಿಸಿದರೆ ಸಾಕು ಎನ್ನುವ ಅತೀ ಪ್ರಯಾಸದ ಪರಿಹಾರ(!) ಕಂಡು ಹಿಡಿಯಲು ಒಬ್ಬ ಸಾರಿಗೆ ಸಚಿವನ ಅಗತ್ಯವಿದೆಯೇ? ಅಂತಹ ಹೊರೆಗಳಿಂದ ಜನರನ್ನು ರಕ್ಷಿಸುವುದು ಹೇಗೆ?. ಸಾರಿಗೆ ಸಂಸ್ಥೆ ಉಳಿಸುವುದು ಹೇಗೆ ಎಂದು ಬದಲೀ ಮಾರ್ಗಗಳನ್ನು ಹುಡುಕುವುದು ಇವರ ಕರ್ತವ್ಯ ಅಲ್ಲವೇ?. ಆರಂಭದಿಂದಲೂ ಅದರ ವರ್ತನೆ ಹಾಗೂ ಕ್ರಮಗಳನ್ನು ಗಮನಿಸಿದರೆ ಇದೆಲ್ಲಾ ಪುನರ್ ನಿರ್ಧಾರಿತ ಎಂಬುದು ತಿಳಿಯುತ್ತಿದೆ. ಕೇಂದ್ರದ ಜನವಿರೋಧಿ ನೀತಿಗಳೆದುರು ಧ್ವನಿ ಎತ್ತದೇ ಮಂಡಿಯೂರುವುದು 'ಸಜ್ಜನಿಕೆಯೇ' ಅಥವಾ ವಿಶ್ವ ಬ್ಯಾಂಕ್‌ನ ಮನವೊಲಿಕೆಯೇ?.

ಪ್ರಶ್ನಾರ್ಹ ಚಿತ್ರಣ:

ಸಾರಿಗೆ ಸಂಸ್ಥೆಯ ನಷ್ಟದ ಬಗ್ಗೆ ನೀಡುವ ಚಿತ್ರಣ ಪ್ರಶ್ನಾರ್ಹ? ಡೀಸೆಲ್ ಗಾಗಿ ಸಂಸ್ಥೆ ತನ್ನ ಒಟ್ಟು ಖರ್ಚಿನಲ್ಲಿ ಶೇ. 25 ನೀಡುತ್ತದೆ ಎನ್ನುತಾರೆ. ಇದು ನಿಜವಾದ ಸಂಗತಿಯಲ್ಲ. ಅದಕ್ಕೆ ತಗುಲುವುದು ಕೇವಲ ಶೇಕಡಾ 6 ರಿಂದ 8 ರಷ್ಟು ಎನ್ನುತ್ತಿವೆ ಸಮೀಕ್ಷೆಗಳು. ಶೇ. 14 ರಿಂದ 16 ರಷ್ಟು ದರಗಳನ್ನು ಹೆಚ್ಚಿಸಲಾಗಿದೆ ಎಂದು ವಿವರಿಸುತ್ತಿದೆ. ಸರ್ಕಾರ, ಆದರೆ ವಾಸ್ತವವಾಗಿ 20 ರಿಂದ 40 ರ ವರೆಗೂ ಹೆಚ್ಚಿಸಲಾಗಿದೆ. ನಗರ ಮತ್ತು ಗ್ರಾಮಾಂತರ ಸಾರಿಗೆಯಲ್ಲಿ ಅನುಭಸುತ್ತಿರುವ ಗೋಳಿಗೆ ಎಣೆಯಿಲ್ಲ. ಪುಷ್ಪಕ್ ಎಂಬ ಬಿಳಿಯಾನೆ ಸವಾರಿ ಅದೇ ದುಬಾರಿ. ನಗರದ ಸಾಮಾನ್ಯ ಬಸ್‌ಗಳ ಸಂಖ್ಯೆ ಕಮ್ಮಿ ಮಾಡಿ ಬರೀ ಪುಷ್ಪಕ್ ಗಳನ್ನು ಓಡಿಸಿ, ಪ್ರಯಾಣಿಕರ ಪರಿಸ್ಥಿತಿಯ ದುರ್ಲಾಭ ಬೇರೆ ಮಾಡಲಾಗುತ್ತಿದೆ. ಅದರಲ್ಲಿ ಪ್ರಯಾಣವೋ ನರಕಯಾತನೆ.

ದರ ಹೆಚ್ಚಿಸುವುದೊಂದೇ ದಾರಿಯೇ:

ಸಾರಿಗೆ ಸಂಸ್ಥೆಯಲ್ಲಿನ ನಷ್ಟ ನಿಲ್ಲಿಸಲು ಹಲವಾರು ಶಿಫಾರಸ್ಸುಗಳ ವರದಿ ಸಿದ್ಧವಾದವು. ಅವಾವು ಜಾರಿಯಾಗಲಿಲ್ಲ. ನಷ್ಟದ ಮಾತು ನಿಲ್ಲಲಿಲ್ಲ. ಸೋರಿಕೆ ತಡೆಯಲಿಲ್ಲ. ಅದಕ್ಷತೆ, ಕಡಿಮೆಯಾಗಲಿಲ್ಲ. ಭ್ರಷ್ಟಾಚಾರವೂ ಮಿತಿ ಮೀರಿ ಸಂಸ್ಥೆಯನ್ನು, ಸಚಿವ ಸಂಪುಟವನ್ನು ಆಳುತ್ತಿದೆ. ದಕ್ಷತೆ, ಮತ್ತು ಉತ್ತಮ ವ್ಯವಸ್ಥೆ ಕಲ್ಪಸಲೆಂದೇ ಹೇಳಿಕೊಂಡು ತಂದ ಸಾರಿಗೆ ಸಂಸ್ಥೆಯ ವಿಭಜನೆ ಏನೂ ಫಲ ನೀಡಲಿಲ್ಲ. (ಉದ್ದೇಶ ಕಾರ್ಮಿಕ ಚಳವಳಿಯನ್ನು ನಾಶ ಮಾಡುವುದು ಎಂಬುದು ಬಯಲಾಗುತ್ತಿದೆ. ಚಳುವಳಿ ದುರ್ಬಲವಾದರೆ ಮನಬಂದಂತೆ ಮೇಯಬಹುದಲ್ಲ!) ಈಗಲೂ ಖೊಟ್ಟಿ ಟಿಕೇಟ್‌ಗಳ ಚಲಾವಣೆ, ಸಂಸ್ಥೆಯ ವಾಹನಗಳ ಉಪಕರಣ ಖರೀದಿಯಲ್ಲಿ ಅಪರಾತಪರ! ಅವ್ಯವಹಾರ, ಹುದ್ದೆ ನೇಮಕಾತಿಗೆ ಕಾಂಚಾಣ ಬಿಚ್ಚಬೇಕು. ಇವುಗಳಲ್ಲೆಲ್ಲಾ ಕೆಳಗಿನ ಅಧಿಕಾರಿಗಳಿಂದ ಮೇಲಿನ ಸಚಿವರವರೆಗೂ ತಪ್ಪದೆ ಸಲ್ಲುವ ಕಪ್ಪ ಕಾಣಿಕೆ.... ಇವುಗಳನ್ನು ತಡೆಯುವುದು ಸಾರಿಗೆ ಸಚಿವರ ಮುಖ್ಯಮಂತ್ರಿಗಳ ಕೆಲಸ ಅಲ್ಲವೇ?. ಇವರೇನೋ ಇಲ್ಲಎನ್ನುವುದಿಲ್ಲ, ಆದರೆ ಯಾವುದೂ ನಡೆಯುವುದಿಲ್ಲ. ಕಾರ್ಮಿಕರ ಸಂಘಕ್ಕೆ ಪೂರ್ತಿ ಸುರಿದು ಬಿಡಲಾಗಿದೆಯೆಂದು ಕೈ ಚೆಲ್ಲಿ ಬಿಡುತ್ತಾರೆ ಅಷ್ಟೇ.



ಸಿಪಿಐ(ಎಂ) ರಾಜ್ಯ ಸಮಿತಿ ಕರೆಯ ಮೇರೆಗೆ ನವೆಂಬರ್ 5 ರಂದು ಬೆಂಗಳೂರು ಜಿಲ್ಲಾ ಸಮಿತಿ ಕಾರ್ಯಕರ್ತರು ಬಸ್ ದರ ಏರಿಕೆಯ ವಿರುದ್ಧ ಪ್ರತಿಭಟನೆ ವ್ಯಕ್ತಪಡಿಸಿದರು.

ಜನರ ಆಶಯಗಳಿಗೆ ಕವಡೆ ಕಿಮ್ಮತ್ತಿಲ್ಲ:

ರಾಜ್ಯದಲ್ಲಿ ಈ ಬಾರಿ ಸಕಾಲಿಕ ಮಳೆ ಇಲ್ಲದೇ ಬೆಳೆ ಹಾನಿಯಾಗಿ ರೈತರು ಕಂಗಾಲಾಗಿದ್ದಾರೆ. ಹೆಚ್ಚುತ್ತಿರುವ ಬೆಲೆಗಳಿಂದ, ಕೂಲಿಕೆಲಸದವೂ ಸಿಗದೇ ಕೂಲಿಕಾರರು ಬದುಕಿದರೆ ಸಾಕಪ್ಪೋ ಎನ್ನುತ್ತಿದ್ದಾರೆ. ಹೆಚ್ಚುತ್ತಿರುವ ಜೀವನ ವೆಚ್ಚ, ಹೆಚ್ಚದ ಸಂಬಳ, ಕೈಗಾರಿಕಾ ಬಿಕ್ಕಟ್ಟು, ನಿರುದ್ಯೋಗ.... ಗಳಿಂದ ಕಾರ್ಮಿಕರು, ಹಾಗೂ ಮಧ್ಯಮ ವರ್ಗದವರು ತತ್ತರಿಸುತ್ತಿದಾರೆ ಆದ್ದರಿಂದಲೇ ತಮ್ಮನ್ನು ರಕ್ಷಿಸದ ಪಟೇಲರ ಜನತಾದಳ ಸರ್ಕಾರವನ್ನು ಬಿಜೆಪಿ ಹುನ್ನಾರವನ್ನು ಜನತೆ ಸೋಲಿಸಿ, ಕಾಂಗ್ರೆಸ್ ಬೆಂಬಲಿಸಿದರು.

ಈ ಸರ್ಕಾರವಾದರೂ ನಮ್ಮನ್ನು ರಕ್ಷಿಸಲಿ ಎಂದು ಆಶಿಸಿದರು. ಆದರೆ ಜನರನ್ನು ರಕ್ಷಿಸಲು ಈ ಸರ್ಕಾರ ಕಿಂಚಿತ್ತೂ ಮುಂದಾಗುತ್ತಿಲ್ಲ. ತನ್ನ ನೀತಿಗಳಲ್ಲಿ ಜನಪರವಾದ ಮೂಲಭೂತ ಬದಲಾವಣೆಗಳನ್ನು ಮಾಡಿಕೊಳ್ಳಲು ಸಿದ್ಧರಿಲ್ಲ ಎಂಬಂತೆ ವರ್ತಿಸುತ್ತಿದ್ದಾರೆ. ಡೀಸೆಲ್ ಬೆಲೆಯನ್ನು ವಾಜಪೇಯಿ ಹೆಚ್ಚಿಸಿದ ಮರುದಿನವೇ ದೆಹಲಿಯ ಕಾಂಗ್ರೆಸ್ ಸರಕಾರವು ಪ್ರಯಾಣ ದರಗಳನ್ನು ಏರಿಸಿ ಬಿಟ್ಟಿತು.

ಕರ್ನಾಟಕ ಸರ್ಕಾರ ಒಂದು ಹತ್ತು ದಿನ ವಿಳಂಭಿಸಿದೆ ಅಷ್ಟೇ.

ಖಾಸಗೀಯವರ ಅಟ್ಟಹಾಸ:

ಈ ದರಗಳ ಹೆಚ್ಚಳದ ಪರಿಣಾಮ ಇನ್ನೂ ಆಳವಾಗುತ್ತಿದೆ. ಪ್ರಯಾಣ ಕಡಿಮೆಯಾಗಬಹುದು. ಅಥವಾ ಸರ್ಕಾರಿ ಬಸ್ ಗಳನ್ನು ಬಿಟ್ಟು ಖಾಸಗಿಯತ್ತ ಜನ ವಾಲಬಹುದು ಎಂಬ ಅಂದಾಜಿದೆ. ಹೀಗೆ ಮುಂದುವರಿದಲ್ಲಿ ಈಗಾಗಲೇ ಕೆಲವು ಬಸ್ ಮಾರ್ಗಗಳು ಮಾತ್ರವಲ್ಲ ಸಂಸ್ಥೆಯನ್ನು ಸಹ ಖಾಸಗಿಯವರ ಕೈಗೆ ಒಪ್ಪಿಸುವುದು ಸುಲಭವಾಗುತ್ತದೆ. ಇವೆಲ್ಲವುಗಳನ್ನ ಬಳಸಿ, ಖಾಸಗಿ ಸಂಸ್ಥೆಗಳು ಮನಬಂದಂತೆ ದರಗಳನ್ನು ಹೆಚ್ಚಿಸುತ್ತಿವೆ. ಹೀಗೆ ಕೊಬ್ಬುತ್ತಿರುವ ಮಾಲೀಕರು ಸಾಮಾಜಿಕ ಅಶಾಂತಿಗೂ, ಕ್ರಿಮಿನಲ್ ಕಾರ್ಯಕ್ರಮಗಳಿಗೂ ಪ್ರೋತ್ಸಾಹಕ ರಾಗುತ್ತಿದ್ದಾರೆ ಎಂಬುದು ಗಂಭೀರದ ವಿಷಯ.

ಕೆಲಸವಿಲ್ಲದೆ ಅಲೆದಾಡುವ ಯುವಕರನ್ನು ತಮ್ಮ ವ್ಯಾಪಾರಕ್ಕೆ ವ್ಯಾಪಕವಾಗಿ ಬಳಸಿಕೊಂಡು ಕ್ರಿಮಿನಲ್ ಗ್ಯಾಂಗ್‌ಗಳನ್ನು ಸೃಷ್ಟಿಸುತ್ತಿದ್ದಾರೆ. ಅವರಿಗೆ ಹಿಂದೂ-ಮುಂದೂ ಸೇನೆಗಳನ್ನು ಕಟ್ಟಿಕೊಟ್ಟು, ದಾಂಧಲೆಗಳಿಗೆ ಪ್ರಾಯೋಜಕರಾಗುತ್ತಿದ್ದಾರೆ.

ಅಪಘಾತಗಳಿಗೆ ಲೆಕ್ಕವಿಲ್ಲ, ದ.ಕನ್ನಡ, ದಾವಣಗೆರೆಗಳಲ್ಲಿ ನಡೆದ ಖಾಸಗಿ ಬಸ್ಸುಗಳ ಅಪಘಾತಗಳು ಆಘಾತಕಾರಿಯಾಗಿವೆ. ಅಲ್ಲಿ ಜೀವಗಳಿಗೆ ಬೆಲೆಯಿಲ್ಲ.

ಅಧಿಕಾರಿಗಳನ್ನು ಒಳಗೊಂಡು ಎಲ್ಲವನ್ನೂ, ಎಲ್ಲರನ್ನೂ ಸುಲಭವಾಗಿ ಮ್ಯಾನೇಜ್ ಮಾಡಲಾಗುತ್ತಿದೆ. ಕೋಮುವಾದಿಗಳ ಹೂಟಗಳಿಗೆ ತುಪ್ಪ ಹಾಕಲಾಗುತ್ತಿದೆ. ಖಾಸಗಿ ಸರ್ವೀಸ್ ಇರುವ ದ.ಕನ್ನಡ, ಶಿವಮೊಗ್ಗ ಮುಂತಾದ ಕಡೆ ಹೋದವರು ಪ್ರತ್ಯಕ್ಷ ಅನುಭವಿಸಿಯೇ ತೀರಬೇಕು.

ಜನಚಳುವಳಿಯ ಉತ್ತರ;

ಕಳೆದ ಎರಡು ವರ್ಷಗಳ ಹಿಂದೆ ಬಸ್ ಪ್ರಯಾಣ ದರಗಳನ್ನು ಹೆಚ್ಚಿಸಿದಾಗ ಕಾಂಗ್ರೆಸ್ ಅದರ ವಿರುದ್ಧ ಧ್ವನಿ ಎತ್ತಿತ್ತು. ಬಿಜೆಪಿಯೂ ಚೀರಾಡಿತ್ತು. ಆದರೆ ಈಗ ಬಿಜೆಪಿ ವಾಜಪೇಯಿ ಮಾಡಿದ್ದೆಲ್ಲಾ ದೇಶೋದ್ಧಾರಕ್ಕೆ ಎಂದು ತೋರಿಸಲು ಹೆಣಗುತ್ತಿದ್ದರೆ, ಕೊನೆಗಾದರೂ ಮಂತ್ರಿಸ್ಥಾನ ಸಿಗಬಹುದೇ ಎಂದು ಜನತಾದಳ(ಯು), ಲೋಕಶಕ್ತಿ ಇಷ್ಟೆಲ್ಲಾ ಮುಖಭಂಗ ಅನುಭವಿಸಿದರೂ ಮಿತ್ರನ ಮನವೊಲಿಕೆಗೆ ನೋವುಣ್ಣುತ್ತಾ ಯತ್ನಿಸುತ್ತಲೇ ಇದೆ.

ಇಂತಹ ಸಂದರ್ಭದಲ್ಲಿ ವಿಧಾನ ಸಭೆಯಲ್ಲಿ ಧ್ವನಿ ಎತ್ತುವವರಾರು? ಜನತಾದಳ(ಎಸ್) ಚಕಾರವೆತ್ತಿದೆ. ಇದಷ್ಟೇ ಸಾಲದು. ರಾಜ್ಯಾದ್ಯಂತ ಕೇಂದ್ರ- ರಾಜ್ಯ ನೀತಿಗಳ ವಿರುದ್ಧ ಪ್ರಬಲ ಚಳುವಳಿ ಬೆಳೆಯಬೇಕು. ಒಂದಾಗಿ ವಿಶಾಲ ಚಳುವಳಿ ಕಟ್ಟಬೇಕು. ಹೆಚ್ಚಿಸಿರುವ ಡೀಸಲ್ ವೆಚ್ಚ ಹಾಗೂ ಸಾರಿಗೆ ದರಗಳನ್ನು ಇಳಿಸಬೇಕೆಂದು ಹೋರಾಟಸಾಗಬೇಕು.

ಬಿಜೆಪಿ ಜನಪ್ರಿಯತೆ - ಸುಳ್ಳಿನ ಕಂತೆ

ಬಿಜೆಪಿ ನೇತೃತ್ವದ ವಾಜಪೇಯಿ ಸರಕಾರ ಅಧಿಕಾರಕ್ಕೆ ಬಂದರೂ ಜನರ ಮೇಲಿನ ಅದರ ಪ್ರಭಾವ ಜಾಸ್ತಿಯಾಗಿಲ್ಲ, ಬದಲಿಗೆ ಕಡಿಮೆಯಾಗುತ್ತಿದೆ ಎನ್ನುವುದಕ್ಕೆ ಅಕ್ಟೋಬರ್ 28 ರಂದು ನಡೆದ 6 ಲೋಕಸಭಾ ಚುನಾವಣೆಗಳ ಫಲಿತಾಂಶವೇ ಸಾಕ್ಷಿ. ಸ್ಪರ್ಧಿಸಿದ ಯಾವ ಸ್ಥಾನದಲ್ಲೂ ಬಿಜೆಪಿಗೆ ಜಯ ಗಳಿಸಲು ಸಾಧ್ಯವಾಗಲಿಲ್ಲ.

ಅದರ ಮಿತ್ರ ಪಕ್ಷವಾದ ಜನತಾದಳ(ಯು) ಮಾತ್ರ ಒಂದು ಸ್ಥಾನ ಗಳಿಸಿದೆ. ಅದು ಕೂಡ ಜಾತ್ಯಾತೀತ ಶಕ್ತಿಗಳ ಮತಗಳು ಹರಿದುಹಂಚಿ ಹೋದುದರಿಂದಾಗಿ. ಬಿಹಾರ ರಾಜ್ಯದ ಖಗಾರಿಯಾ ಲೋಕಸಭಾ ಕ್ಷೇತ್ರದಲ್ಲಿ ಜನತಾದಳ(ಯು), ಆರ್.ಜೆ.ಡಿ. ಅಭ್ಯರ್ಥಿಯ ವಿರುದ್ಧ 32000 ಮತಗಳ ಅಂತರದಿಂದ ಗೆಲುವು ಸಾಧಿಸಿತು. ಆದರೆ ಹೊಂದಾಣಿಕೆ ಆಗದೆ ಇದ್ದುದರಿಂದ ಸ್ಪರ್ಧಿಸಿದ ಸಿಪಿಐ ಅಭ್ಯರ್ಥಿ 72,000 ಮತಗಳನ್ನು ಪಡೆದರು.

ಅಧಿಕಾರ ವಹಿಸಿಕೊಂಡ 15 ದಿನಗಳಲ್ಲೇ ಹೀನಾಯ ಸೋಲು ಅನುಭವಿಸಿದ ಬಿಜೆಪಿ, ತಾನು ಅಧಿಕಾರಕ್ಕೆ ಬಂದುದು ಮಿತ್ರ ಪಕ್ಷಗಳ ಮೈತ್ರಿಯಿಂದಾಗಿ ಎಂಬುದನ್ನು ಸಾಬೀತು ಮಾಡಿದೆ. ಆದ್ದರಿಂದಲೇ 1998 ರಲ್ಲಿ ಗಳಿಸಿದ್ದ 182 ಸ್ಥಾನಗಳಿಗಿಂತ ಒಂದು ಸ್ಥಾನವನ್ನು ಹೆಚ್ಚು ಮಾಡಲು ಸಾಧ್ಯವಾಗಿಲ್ಲ.

ಉಸ್ತುವಾರಿ ಸರಕಾರವಾಗಿದ್ದುಕೊಂಡು, ಚುನಾವಣಾ ಮತಗಳ ಎಣಿಕೆ ನಡೆಯುತ್ತಿರುವಾಗಲೇ ವಂಚನೆಯಿಂದ ಡೀಸೆಲ್ ಬೆಲೆಯನ್ನು ಹೆಚ್ಚಿಸಿ, ಎಲ್ಲಾ ಬೆಲೆಗಳ ಏರಿಕೆಗೆ ಕಾರಣವಾದ ಬಿಜೆಪಿ ಇನ್ನಷ್ಟು ಬರ್ಬರ ಹೊರೆಗಳನ್ನು ಜನಸಾಮಾನ್ಯರ ಮೇಲೆ ಹೇರಲಿದೆ. ಎಡ, ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ಶಕ್ತಿಗಳು ಒಂದಾಗಿ ಜನ ವಿರೋಧಿ ಕೃತ್ಯಗಳನ್ನು ಹಿಮ್ಮೆಟ್ಟಿಸಿ ಜನರ ಹಿತಾಸಕ್ತಿಗಳನ್ನು ರಕ್ಷಿಸಬೇಕಾಗಿದೆ. ಈ ಮಹಾನ್ ಕೆಲಸದಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳು ಮುಂಚೂಣಿಯಲ್ಲಿರಬೇಕಾಗುತ್ತದೆ.

ಸಿಪಿಐ(ಎಂ) ಗೆ ಅಭೂತಪೂರ್ವ ವಿಜಯ:

ಬಿಹಾರ ರಾಜ್ಯದ ಬಾಗಲ್ಪುರ ಲೋಕಸಭಾ ಕ್ಷೇತ್ರದಿಂದ ಕಾಂ. ಸುಭೋದ್ ರಾಯ್ ಗೆದ್ದುದರಿಂದಾಗಿ ಲೋಕಸಭೆಯಲ್ಲಿ ಪಕ್ಷದ ಬಲ ೩೨ ರಿಂದ ೩೩ ಕ್ಕೆ ಏರಿದೆ. ಹತ್ತಾರು ವರ್ಷಗಳಿಂದ ಸಣ್ಣ ರೈತರು, ಕೃಷಿ ಕೂಲಿಕಾರರು ಸೇರಿ ಭೂಮಾಲಕರ ಸೇನಾ ಪಡೆಯ ವಿರುದ್ಧ ಸಮರ ಶೀಲ ಹೋರಾಟ ನಡೆಸಿದುದರ ಫಲವಾಗಿ ಸಿಪಿಐ(ಎಂ) ಅಭ್ಯರ್ಥಿ ಗೆದ್ದು ಬಂದರು. ಹಾಗೆ ನೋಡಿದಲ್ಲಿ ಬಿಹಾರದ ಇನ್ನೊಂದು ಲೋಕಸಭಾ ಕ್ಷೇತ್ರ ಪೂರ್ಣಿಯದಲ್ಲಿ ಸಿಪಿಐ(ಎಂ) ಅಭ್ಯರ್ಥಿ ಗೆಲ್ಲಬೇಕಾಗಿತ್ತು. ಆದರೆ ರಾಜ್ಯದ ಹೆಸರಾಂತ ಮಾಫಿಯಾ ದೊರೆ ಪಪ್ಪು ಯಾದವ್‌ನ ಕುಖ್ಯಾತ ಪಡೆಗಳು ಸಿಪಿಐ(ಎಂ) ಬೆಂಬಲಿಗರನ್ನು ಓಟು ಹಾಕಲು ಬಿಡದಿದ್ದುದರಿಂದಾಗಿ ಆ ಕ್ಷೇತ್ರವನ್ನು ಕಳೆದುಕೊಳ್ಳಬೇಕಾಯಿತು.

'ಸಮೃದ್ಧ ಕರ್ನಾಟಕ'ದ ಕನಸು - ಎಂದಾಗುವುದು ನನಸು

ಜಿ.ಎನ್.ನಾಗರಾಜ್

ಕರ್ನಾಟಕ ರಾಜ್ಯೋತ್ಸವಗಳ ಮತ್ತೊಂದು ಸರಣಿಗೆ ಕರ್ನಾಟಕದ ರಾಜಧಾನಿ ಸಿದ್ಧಗೊಂಡಿದೆ. ಮತ್ತಷ್ಟು ಯೋಜನೆಗಳ ಭರವಸೆ ನೀಡಲು ಕರ್ನಾಟಕದ ಮುಖ್ಯಮಂತ್ರಿಗಳು ಸಜ್ಜುಗೊಂಡಿದ್ದಾರೆ. 35-40 ವರ್ಷಗಳ ದೀರ್ಘ ಹಾರೈಕೆ, ಕನಸುಗಳು, ಚಳುವಳಿ, ಹೋರಾಟಗಳು ಕರ್ನಾಟಕ ರಾಜ್ಯದ ಉದಯಕ್ಕೆ ಕಾರಣವಾದ ಸಂದರ್ಭವನ್ನು ನೆನೆಯುವುದು, ಅಂದು ಕನ್ನಡದ ಎಲ್ಲ ಸಾಹಿತಿಗಳು ಸ್ವಾತಂತ್ರ್ಯ ಚಳುವಳಿಗಾರರು ಒಗ್ಗೂಡಿ ಕಟ್ಟಿದ ಕರ್ನಾಟಕದ ಕನಸನ್ನು ಪುನಃ ಮನಸ್ಸಿನ ಮುಂದೆ ತಂದುಕೊಳ್ಳುವುದು, ಅಂದಿನ ಹಲವು ಕೋಟಿ ಕನ್ನಡಿಗರ ಆಕಾಂಕ್ಷೆಯನ್ನು ಗೌರವಿಸುವ ಕೆಲಸ. 44ನೇ ರಾಜ್ಯೋತ್ಸವ ನಡೆಸುವ ಸಂದರ್ಭದಲ್ಲಿ ಅಂದಿನ ಕನಸು, ಕಲ್ಪನೆ, ಹಂಬಲಗಳು ಸಾಕ್ಷಾತ್ಕಾರವಾಗಿವೆಯೇ ಎಂದು ವಿಮರ್ಶಿಸುವ ಸಂದರ್ಭ. ಇಂದಿನ ನಮ್ಮ ಸ್ಥಿತಿಯನ್ನು ಪರೀಕ್ಷೆ ಮಾಡಿಕೊಂಡು ಮುನ್ನಡೆಯುವ ದಾರಿಯನ್ನು ಹಾಕಿಕೊಳ್ಳುವ ಸಮಯ.

ಇಂದಿನ ಕರ್ನಾಟಕದ ಮುಂದಿರುವ ಸವಾಲುಗಳು

'ಕರ್ನಾಟಕದ ಏಕೀಕರಣ'ದ ಚಳುವಳಿಯಲ್ಲಿ ಅಂತರ್ಗತವಾದ ಸಮೃದ್ಧ ಕರ್ನಾಟಕದ ಕಲ್ಪನೆಗೆ ಇಂದು ಧಾಳಿಗಳ ಮೇಲೆ ಧಾಳಿ. ಕನ್ನಡ ಭಾಷೆ, ಸಂಸ್ಕೃತಿಯ ಮೇಲೆ ಧಾಳಿಗಳು ಒಂದು ಮಗ್ಗುಲಾದರೆ, ಕರ್ನಾಟಕದ ಉಳಿವಿಗೇ ಧಾಳಿ ಆರಂಭವಾಗಿದೆ. ಕರ್ನಾಟಕದ ಉಳಿವಿಗೆ ರಾಷ್ಟ್ರೀಯ-ಅಂತರ್ರಾಷ್ಟ್ರೀಯ ಮಟ್ಟದಿಂದ ರಭಸದ, ಬಿರುಸಾದ ಧಾಳಿಗಳು ನಡೆಯುತ್ತಿವೆ. ಅದನ್ನು ಕರ್ನಾಟಕವೆಲ್ಲಾ ಒಗ್ಗೂಡಿ ಕರ್ನಾಟಕವನ್ನು, ಕರ್ನಾಟಿಗರ ಬದುಕನ್ನು ಉಳಿಸಿಕೊಳ್ಳಲು ದೃಢತೆಯಿಂದ, ತೀವ್ರತೆಯಿಂದ ಎದುರಿಸಬೇಕಾಗಿದೆ. ಆದರೆ ಅದಕ್ಕೆ ಬದಲಾಗಿ ಕರ್ನಾಟಕ ಒಳಗಿನಿಂದಲೇ ಕುಸಿಯುತ್ತದೇನೋ ಎಂಬ ಆತಂಕವುಂಟಾಗಿದೆ.

ಕರ್ನಾಟಕದೊಳಗೇ ಕರ್ನಾಟಕದಿಂದ ಪ್ರತ್ಯೇಕವಾಗಬೇಕೆನ್ನುವ ಪ್ರವೃತ್ತಿಗಳು ತೀವ್ರವಾಗಿ ಬೆಳೆಯಲಾರಂಭಿಸಿವೆ. ಉತ್ತರ ಕರ್ನಾಟಕ ಪ್ರತ್ಯೇಕವಾಗಬೇಕು, ಅದರೊಳಗೇ ಇರುವ ಹೈದರಾಬಾದ್ ಕರ್ನಾಟಕ ಪ್ರತ್ಯೇಕವಾಗಬೇಕು ಎನ್ನುವ ಕೂಗುಗಳು ಮತ್ತೆ ಮತ್ತೆ ಕೇಳಿಬರುತ್ತಿವೆ. ಕೊಡಗು ಪ್ರತ್ಯೇಕತೆ ಸುಸಂಘಟಿತವಾದ ಪ್ರತ್ಯೇಕವಾದಿ ಸಿದ್ಧಾಂತ, ಸಂಘಟನೆಯನ್ನು ರೂಪಿಸಿಕೊಂಡು ಮತ್ತಷ್ಟು ಮುಂದಕ್ಕೆ ಸಾಗಿದೆ. ಇಂತಹ ಸಂದರ್ಭದಲ್ಲಿ ಕನ್ನಡದ ಸಾಹಿತಿಗಳಲ್ಲಿ ಹಿರಿಯಣ್ಣ ಎಂದು ಹೆಸರಾದ ಮಾಸ್ತಿಯವರು ಕರ್ನಾಟದ ಏಕೀಕರಣವಾಗುವ ಮೊದಲು ಬರೆದ

"ನನ್ನದು ಧಾರ್ವಾಡ, ನನ್ನೂರು ಮೈಸೂರು
ನನ್ನೂರು ಎಂಕಾಡು' ಎಂದೆನ್ನದಿರು ಬಂಧು

ಎಂದು ಮತ್ತೆ ಹಾಡಿದ್ದೇ ಹಾಡುವ ಪರಿಸ್ಥಿತಿ ಬಂದೊದಗಿದೆ. 'ಕರ್ನಾಟಕತ್ವ'ವನ್ನು ಮತ್ತೆ ಉದ್ದೀಪನಗೊಳಿಸಲು ತುಡಿಯುವ, ದುಡಿಯುವ ಅವಶ್ಯಕತೆ ಬಂದೊದಗಿದೆ. ಕರ್ನಾಟಕದ ಈ 43 ವರ್ಷಗಳಲ್ಲಿ 'ಕರ್ನಾಟಕತ್ವ' ಹಿನ್ನಡೆಯಾಗಿಸಲು ಕಾರಣವೇನು ಎಂಬ ಬಗ್ಗೆ ಆಳವಾದ ಚಿಂತನೆ ಬೇಕಾಗಿದೆ.

ಕರ್ನಾಟಕತ್ವದ ಹಿನ್ನಡೆ:

'ಕರ್ನಾಟಕತ್ವ' ಎಂದಕೂಡಲೆ ಕನ್ನಡ ಚಳುವಳಿಗಾರರೂ ಕನ್ನಡ ಕನ್ನಡ ಎಂದು ಹೊಡೆಯುವ ಬೊಬ್ಬೆಯಲ್ಲ, ತೊಂದರೆಯಲ್ಲಿರುವ, ಇತರ ದೇಶ ಭಾಷೆಗಳ, ದೇಶಿವಾಸಿಗಳ ಮೇಲೆ ಕನ್ನಡವನ್ನು ಹೇರುವ ಭಾಷಾಂಧತೆಯೂ ಅಲ್ಲ. ಆಲೂರವೆಂಕಟರಾವ್, ಬಿ.ಎಂ.ಶ್ರೀ, ಕುವೆಂಪು ಮುಂತಾದ ಕವಿ ಸಾಹಿತಿಗಳು ಕರ್ನಾಟಕದ ಏಕೀಕರಣದ ಬಗ್ಗೆ ಕಟ್ಟಿದ ಕನಸು, ಕರ್ನಾಟಕದ ಎಲ್ಲೆಡೆಯ ಕನ್ನಡಿಗರೊಂದಾಗಿ ಬಾಳುವ ಕರ್ನಾಟಕವನ್ನು ಸಮೃದ್ಧಿಯನಾಡಾಗಿ ಕಟ್ಟುವ ಕನಸು. ಆ ಆರೋಗ್ಯಕರ ಪ್ರಜಾಸತ್ತಾತ್ಮಕ ಭಾವನೆಯೇ ಕರ್ನಾಟಕತ್ವ".

ಕರ್ನಾಟಕ ಸಮೃದ್ಧವಾಗಿ ಬೆಳೆಯದಿರುವುದು, ಕರ್ನಾಟಕದ ಎಲ್ಲ ಪ್ರದೇಶಗಳೂ ಒಂದಾಗಿ ಸಮಾನವಾಗಿ ಬೆಳೆಯದಿರುವುದು ನಾವೆಲ್ಲರೂ ಒಂದಾಗಿ ಅಭಿವೃದ್ಧಿಯನ್ನು ಸಾಧಿಸಬೇಕು ಎನ್ನುವ ಹಂಬಲ ಕಡಿಮೆಯಾಗಿರುವುದಕ್ಕೆ ಕಾರಣ. "ಕರ್ನಾಟಕತ್ವ" ಹಿನ್ನಡೆಯಾಗಿರುವುದರಿಂದ ಕರ್ನಾಟಕ ಸಮೃದ್ಧವಾಗಿ ಬೆಳೆಯಬೇಕಾದರೆ ಕರ್ನಾಟಕದ ಸಂಪನ್ಮೂಲಗಳನ್ನು ಪ್ರಾಕೃತಿಕ ಹಾಗೂ ಮಾನವ ಸಂಪನ್ಮೂಲಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳಬೇಕು ಅದನ್ನು ಬಳಸಿಕೊಳ್ಳುವುದಕ್ಕೆ ಬೇಕಾದ ಧನ ಸಂಪನ್ಮೂಲವನ್ನು ಕ್ರೋಢೀಕರಿಸಬೇಕು. ಇದರಿಂದ ಕೃಷಿ, ಕೈಗಾರಿಕೆಗಳನ್ನು ಬೆಳೆಸಿ ಉದ್ಯೋಗ ನಿರ್ಮಾಣ ಮಾಡಬೇಕು. ಕರ್ನಾಟದಲ್ಲಿ ಲಭ್ಯವಿರುವ ಎಲ್ಲ ದುಡಿಯುವ ಕೈಗಳಿಗೆ ಉದ್ಯೋಗವನ್ನು ಒದಗಿಸಬೇಕು. ಉದ್ಯೋಗದಿಂದ ಉತ್ತಮ ಜೀವನ ನಡೆಸಲು ಬೇಕಾದ ಆದಾಯ ಲಭ್ಯವಾಗಬೇಕು. ಕೃಷಿ ಅಭಿವೃದ್ಧಿಯಲ್ಲಿ ತೊಡಗಲು ಹಾಗೂ ಕೈಗಾರಿಕೆಗಳಲ್ಲಿ ಉದ್ಯೋಗ ಮಾಡುವಂತಾಗಲು ಬೇಕಾದ ಶಿಕ್ಷಣ ಸಿಗಬೇಕು ಹಾಗೂ ಆರೋಗ್ಯದ ವ್ಯವಸ್ಥೆಗಳೂ ರೂಪುಗೊಳ್ಳಬೇಕು. ಇದರಿಂದ ಮಾತ್ರವೇ ಮಾನವ ಸಂಪನ್ಮೂಲದ ಪೂರ್ಣ ಪ್ರಯೋಜನ ಪಡೆಯಲು ಸಾಧ್ಯ. ಈ ಎಲ್ಲಾ ಪ್ರದೇಶಗಳಿಗೂ ಸಮಾಜದ ಎಲ್ಲಾ ಹಂತಗಳಿಗೂ ಸಮಾನವಾಗಿ ಇರಬೇಕಾದ್ದು ಅವಶ್ಯಕ.

ಸಮೃದ್ಧಗೊಳಿಸುವ ಅಧಿಕಾರವೇ ಇಲ್ಲ:

ಇಂತಹ ಸಮೃದ್ಧ ಕರ್ನಾಟಕವನ್ನು ಈ 43 ವರ್ಷಗಳಲ್ಲಿ ಏಕೆ ರೂಪಿಸಲಾಗಲಿಲ್ಲ?. ಇದು ನಮ್ಮ ಮುಂದಿರುವ ಯಕ್ಷ ಪ್ರಶ್ನೆ.

ಈ ಸಮಸ್ಯೆಯ ಮೂಲದಲ್ಲಿ ಹಲವು ಪ್ರಶ್ನೆಗಳಿವೆ. ಮೊತ್ತಮೊದಲಾಗಿ ಇಂತ ಕರ್ನಾಟಕವನ್ನು ರೂಪಿಸುವ ಅಧಿಕಾರ ಕರ್ನಾಟಕದ ಜನತೆಗೆ, ಅವರು ಆರಿಸುವ ಸರ್ಕಾರಕ್ಕೆ ಲಭ್ಯವಾಗಿಲ್ಲ. ನಮ್ಮ ದೇಶದ ಸಂವಿಧಾನವನ್ನು ರೂಪಿಸಿದವರು, ಭಾಷಾವಾರು ರಾಜ್ಯಗಳ ವಿರುದ್ಧವೇ ಸಮರ ಸಾರಿದ ಶಕ್ತಿಗಳೇ, ಹೀಗಾಗಿ ಆಯಾ ರಾಜ್ಯದ ಸಂಪನ್ಮೂಲಗಳ ಮೇಲೆ, ಅದನ್ನು ರೂಢಿಸುವ, ಸಂಪತ್ತನ್ನು ಹೆಚ್ಚಿಸುವ ಅಧಿಕಾರ ಲಭ್ಯವಾಗಲಿಲ್ಲ. ಕೈಗಾರಿಕೆಗಳನ್ನು ಸ್ಥಾಪಿಸುವ ಅಧಿಕಾರವು ಇಲ್ಲ. ಆದರಿಂದ ಬರುವ ಆದಾಯದ ಮೇಲೆಯೂ ಅಧಿಕಾರವಿಲ್ಲ. ಅದೆಲ್ಲವೂ ಕೇಂದ್ರ ಸರ್ಕಾರಕ್ಕೆ. ದೇಶದ ಎಲ್ಲಾ ಆದಾಯವೂ ಅಲ್ಲಿ ಕೇಂದ್ರೀಕೃತವಾಗಲಿ ಅದನ್ನು ನಮ್ಮ ಅನುಕೂಲಕ್ಕೆ ಬೇಕಾದಂತೆ ಬಳಸಿಕೊಳ್ಳೋಣವೆಂದು ಯೋಚಿಸಿದ ನಮ್ಮ ದೇಶ ಗುತ್ತೇದಾರಿ ಬಂಡವಾಳಶಾಹಿಗಳ ಹುನ್ನಾರವಿದು. ಹೀಗಾಗಿ ರಾಜ್ಯೋದಯವಾಯಿತು. ಅದರ ಎಲ್ಲಾ ಭಂಡಾರದ ಕೀಲಿ ಕೈ ಮಾತ್ರ ಸಿಗಲಿಲ್ಲ. ಅದು ದೆಹಲಿಯಲ್ಲಿಯೇ ಉಳಿಯಿತು. ಆಧುನಿಕ ಯುಗದಲ್ಲಿ ಸಂಪತ್ತಿನ ವೃದ್ಧಿ ಉದ್ಯೋಗಗಳ ನಿರ್ಮಾಣವಾಗುವುದೇ ಕೈಗಾರಿಕೆಗಳ ಮೂಲಕ. ಅಂತಹ ಪ್ರಮುಖ ವಿಷಯದ ಮೇಲೆ ರಾಜ್ಯ ಸರ್ಕಾರಗಳಿಗೆ ಅಧಿಕಾರವಿಲ್ಲದ್ದು, ಭೂಮಿಯ ಮೇಲೆ, ಕೃಷಿಯ ಮೇಲೆ ಮಾತ್ರ ಅಧಿಕಾರವಿರುವುದು ರಾಜ್ಯಗಳ ಅಭಿವೃದ್ಧಿಗೆ ಬೇಕಾದ ಮೂಲಧನವನ್ನೇ ವಂಚನೆ ಮಾಡಿತು. ಇದರಿಂದಾಗಿ ರಾಜ್ಯ ಸರ್ಕಾರಗಳ ಆದಾಯ ಕುಗ್ಗುತ್ತಾ ಹೋಯಿತು. ಸ್ವಾತಂತ್ರ್ಯಾನಂತರದ ಹಲವು ವರ್ಷಗಳಲ್ಲಿ ರಾಜ್ಯ ಸರ್ಕಾರದ ಅನೇಕ ಆದಾಯ ಮೂಲ ಹಾಗೂ ಅಧಿಕಾರಗಳನ್ನು ಕಸಿಯಲಾಯಿತು. ಹೀಗಾಗಿ ಶಿಕ್ಷಣ, ಆರೋಗ್ಯ, ವಿದ್ಯುತ್, ನೀರಾವರಿ, ರಸ್ತೆ, ಸೇತುವೆಗಳನ್ನೆಲ್ಲಾ ಒದಗಿಸುವ ಜವಾಬ್ದಾರಿ ರಾಜ್ಯ ಸರ್ಕಾರಗಳಿಗೆ. ಅದಕ್ಕೆ ಬೇಕಾದ ಹಣ ಮಾತ್ರ ಇಲ್ಲ. ಬಡತನ ಹೋಗಲಾಡಿಸುವುದು ರಾಜ್ಯ ಸರ್ಕಾರದ ಜವಾಬ್ದಾರಿ. ಅದಕ್ಕೆ ಬೇಕಾದ ಉದ್ಯೋಗ ನಿರ್ಮಾಣ ಮಾಡುವ ಅಧಿಕಾರವಿಲ್ಲ. ರಾಜ್ಯದ ಜನರ ಹಣವನ್ನೇ ಸಂಗ್ರಹಿಸಿ ಅದರಿಂದ ಅಭಿವೃದ್ಧಿ ಮಾಡುವ ಅಧಿಕಾರವೂ ಇಲ್ಲ. ಖಾಸಗೀಯವರು ಬೇಕಾದರೆ ಬ್ಯಾಂಕ್ ಸ್ಥಾಪಿಸಬಹುದು. ಆದರೆ ರಾಜ್ಯ ಸರ್ಕಾರಗಳು ಅದನ್ನು ಮಾಡುವಂತಿಲ್ಲ.

ಈ ಅತಂತ್ರ ಸ್ಥಿತಿ ಅನೇಕ ದಶಕಗಳ ಕಾಲ ರಾಜ್ಯದ ಜನಕ್ಕೆ ತಿಳಿಯಲೇ ಇಲ್ಲ. ಕರ್ನಾಟಕದಲ್ಲಿ 1983 ರಲ್ಲಿ ಅಧಿಕಾರಕ್ಕೇ ಬಂದ ಮೊತ್ತಮೊದಲ ಕಾಂಗ್ರೆಸ್ಸೇತರ ಸರ್ಕಾರ-ಜನತಾಪಕ್ಷದ ಸರ್ಕಾರ ಮಾತ್ರ ಈ ಪ್ರಶ್ನೆಯನ್ನೆತ್ತಿತು. ಅಂದರೆ ಕರ್ನಾಟಕ ರಾಜ್ಯ ಉದಯವಾದ 27 ವರ್ಷಗಳನಂತರ. ಅದು ಕೂಡ ಮತ್ತು ಅದರ ಎಲ್ಲಾ ಅರ್ಥ, ವ್ಯಾಪ್ತಿಗಳಲ್ಲಿ ಕರ್ನಾಟಕದ ಎಲ್ಲಾ ಜನರಿಗೆ ಇಂದೂ ಕೂಡಾ ತಿಳಿದಿಲ್ಲ. ನೆರೆಯ ಕೇರಳದಲ್ಲಿ 1956 ಕ್ಕೆ ಕೇರಳ ರಾಜ್ಯವೂ ಉದಯವಾಯಿತು. 1957 ರಲ್ಲಿಯೇ ಕೇರಳದ ಎಲ್ಲ ಜನರಿಗೆ ತಮ್ಮ ರಾಜ್ಯ ಉದಯಕ್ಕೆ ಇರುವ ಅರ್ಥವೇನು ಎಂಬುದು ಅರ್ಥವಾಯಿತು. ಪ.ಬಂಗಾಳದಲ್ಲಿ 1967 ರಲ್ಲಿಯೇ ಇಡೀ ರಾಜ್ಯದ ಜನತೆ ಈ ಬಗ್ಗೆ ಹೋರಾಟ ಆರಂಭಿಸಿದರು.

ಇರುವ ನಾಲ್ಕು ರೊಟ್ಟಿಗಾಗಿ ಹತ್ತು ಜನರ ಕಿತ್ತಾಟ

ರಾಜ್ಯೋದಯವಾದರೂ ರಾಜ್ಯದ ಪೂರ್ಣ ಅಧಿಕಾರ ಸಿಗಲಿಲ್ಲ ಎನ್ನುವ ಕಾರಣಕ್ಕಾಗಿ, ಎಲ್ಲಕ್ಕಿಂತ ಮುಖ್ಯವಾದ ಬೊಕ್ಕಸದ ಕೀಲಿಕೈ ಸಿಗಲಿಲ್ಲ ಎನ್ನುವ ಕಾರಣಕ್ಕಾಗಿ 30-40000 ಕೋಟಿ ಇರಬೇಕಾಗಿದ್ದ ರಾಜ್ಯಸರ್ಕಾರದ ಆದಾಯ ಕೇವಲ 10-12000 ಕೋಟಿ ರೂ. ಮಾತ್ರ ಇದೆ. ಹೀಗಾಗಿ ಇಂದು ರಾಜ್ಯ ಬೊಕ್ಕಸದಲ್ಲಿ ಯಾವುದಕ್ಕೂ ಹಣವಿಲ್ಲ. ಹೊಸ ಶಾಲೆ, ಆಸ್ಪತ್ರೆ, ಇರುವ ಶಾಲೆ, ಆಸ್ಪತ್ರೆಗಳಿಗೆ ಕಟ್ಟಡ, ವೈದ್ಯರು, ಉಪಾಧ್ಯಾಯರು, ಉಪಕರಣಗಳು ಯಾವುದಕ್ಕೂ ಹಣವಿಲ್ಲ. ರಸ್ತೆಗಳು ಹಾಳಾಗಿವೆ. ಸೇತುವೆಗಳಿಲ್ಲ ಯಾವುದಕ್ಕೂ ಹಣವಿಲ್ಲ. ಹೀಗಾಗಿ ಇರುವ ಹಣಕ್ಕಾಗಿ ಎಲ್ಲರ ಕಿತ್ತಾಟ. ಹತ್ತು ಜನರಿರುವ ಮನೆಯಲ್ಲಿ ನಾಲ್ಕು ಜನರಿಗೆ ಮಾತ್ರ ಊಟವಿದ್ದರೆ ಆಗುವ ಸ್ಥಿತಿಯೆ.

ಕೈಗಾರಿಕೆಗಳನ್ನು ಸ್ಥಾಪಿಸುವ ಅಧಿಕಾರ ರಾಜ್ಯ ಸರ್ಕಾರಕ್ಕಿಲ್ಲ ಎಂದ ಮಾತ್ರಕ್ಕೆ ಕೈಗಾರಿಕೆಗಳು ರಾಜ್ಯದಲ್ಲಿ ಸ್ಥಾಪಿತವಾಗುತ್ತಿಲ್ಲವೇ? ಆಗುತ್ತಿವೆ. ಯಾರಿಂದ? ಎಲ್ಲಿ? ಹೇಗೆ? ಕೈಗಾರಿಕೆಗಳು ಸ್ಥಾಪನೆಯಾಗುತ್ತಿವೆ. ಬಂಡವಾಳಶಾಹಿಗಳಿಂದ, ಅವರ ಇಚ್ಛೆಗೆ, ಅನುಕೂಲಕ್ಕೆ ಲಾಭಕ್ಕೆ ತಕ್ಕಂತೆ. ಈ ಬಂಡವಾಳಶಾಹಿಗಳ ಹಣದ ಮೂಲ ಬ್ಯಾಂಕ್, ಎಲ್.ಐ.ಸಿ.ಗಳ ಮೂಲಕ ಸಂಗ್ರಹಿತವಾದ ಕೇಂದ್ರ ಸರ್ಕಾರದಿಂದ ತೆರಿಗೆಗಳ ಮೂಲಕ ವಸೂಲಿಯಾದ ರಾಜ್ಯದ ಜನರ ಹಣವೇ. ಹೆಚ್ಚೆಂದರೆ ಸರ್ಕಾರಕ್ಕೆ ಅವರು ಕೊಡಬೇಕಾದ ಆದಾಯ, ಮಾರಾಟ ಕರಗಳನ್ನು ವಂಚಿಸಿ ಬೆಳೆಸಿದ ಲಾಭಕ್ಕೆ ತಕ್ಕಂತೆ. ರಾಜ್ಯದ ಜನತೆಯ ಒಟ್ಟು ಅವಶ್ಯಕತೆಗೆ ತಕ್ಕಂತಲ್ಲ. ಹೀಗಾಗಿ ವಿವಿಧ ಪ್ರದೇಶಗಳ ಬೆಳವಣಿಗೆಯಲ್ಲಿ ತೀವ್ರ ಅಸಮಾನತೆಗಳು. ಹಲವು ಹಳ್ಳಿಗಳು ಧಿಡೀರನೆ ಪಟ್ಟಣಗಳಾಗಿ ಬೆಳೆಯುವುದನ್ನು ಪಟ್ಟಣಗಳು ಬೆಳವಣಿಗೆಯಿಲ್ಲದೆ ಸ್ಥಗಿತವಾಗಿರುವುದು, ಈ ಪಟ್ಟಣ, ನಗರಗಳಲ್ಲಿ ಇದ್ದಕ್ಕಿದ್ದಂತೆ ಒಂದು ಪ್ರದೇಶವೆಲ್ಲಾ ಜವಳಿ ಅಂಗಡಿಮಯವಾಗುವುದು ಮತ್ತೆ ಯಾವುದೇ ಪ್ರದೇಶ ಕಬ್ಬಿಣದ ಅಂಗಡಿಗಳಾಗಿ [illegible] ಇವ ನಾವ ಕಣ್ಣಾರೆ ನೋಡುತ್ತಿರುವಂತೆಯೇ ಅವ್ಯವಸ್ಥಿತವಾಗಿ, ಅರಾಜಕವಾಗಿ ಯಾವುದೇ ಯೋಜನೆಯಿಲ್ಲದೆ. ಬಂಡವಾಳಶಾಹಿ ಪ್ರಪಂಚದಾದ್ಯಂತ ಹೀಗೆಯೇ ಆಗಿದೆ. ಭಾರತದಲ್ಲಿಯೂ ಹೀಗೆ ನಡೆಯಲು ಅವಕಾಶ ನೀಡಿದೆ. ಆದ್ದರಿಂದ ಪ್ರಾದೇಶಿಕ ಅಸಮಾನತೆಯೆಂಬುದು ಬಂಡವಾಳಶಾಹಿ ದಾರಿಯ, ಭಾಗವೇ ಅಲ್ಲದೆ ಮತ್ತೇನಲ್ಲ. ಕಲ್ಕತ್ತಾ, ಮದ್ರಾಸ್‌ಗಳ ಬೆಳವಣಿಗೆಯಾದದ್ದು ಹೀಗೆಯೇ. ಕಲ್ಕತ್ತಾ ಬೆಳವಣಿಗೆ ಕುಂಠಿತವಾಗಿ ಮುಂಬಯಿ ಬೆಳೆಯತೊಡಗಿದ್ದು ಹೀಗೆಯೇ.

ಮುಂಬಯಿ ಹಿನ್ನಾಡು-ಪೂನಾದಿಂದ ಧಾರವಾಡದವರೆಗೆ ಸ್ವಾತಂತ್ರ್ಯಪೂರ್ವದಲ್ಲಿ ಬೆಳೆದದ್ದು ವಿಧರ್ಭ, ಮೊದಲಾದ ಪ್ರದೇಶಗಳು ಹಿಂದುಳಿದದ್ದು ಹೀಗೆಯೇ.

5ನೇ ಪುಟಕ್ಕೆ

ಕರ್ನಾಟಕದ ಬಿಹಾರ

ಕರ್ನಾಟಕ ರಾಜ್ಯದಲ್ಲಿ ಅಭಿವೃದ್ಧಿ ದುಸ್ಥಿತಿಯಿಂದ ನರಳುತ್ತಿರುವ ಐದು ಜಿಲ್ಲೆಗಳು ಸಾಮಾಜಿಕ- ಆರ್ಥಿಕ- ರಾಜಕೀಯ ವಿಷಯಗಳಲ್ಲಿ ಬಿಹಾರ ರಾಜ್ಯವನ್ನು ಸಂಪೂರ್ಣವಾಗಿ ಹೋಲುತ್ತವೆ.

ಆದರೆ ಈ ಜಿಲ್ಲೆಗಳ ಅಭಿವೃದ್ಧಿ ದುಸ್ಥಿತಿಯ ಮೂಲದಲ್ಲಿ ಜಮೀನುದಾರಿ-ಊಳಿಗಮಾನ್ಯ ಪಾಳೆಗಾರಿಕೆ ಕ್ರಿಯಾಶೀಲವಾಗಿರುವ ಸಂಗತಿಯನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ.

ಭೂಮಾಲಿಕತ್ವದಲ್ಲಿ ಅಸಮಾನತೆ

ರಾಜ್ಯದ ಹಿಂದುಳಿದ ಐದು ಜಿಲ್ಲೆಗಳಲ್ಲಿರುವ ಭೂಹಿಡುವಳಿಗಳ ಸಂಖ್ಯೆ 16.11 ಲಕ್ಷ. ಈ ಹಿಡುವಳಿಗಳ ವಿಸ್ತೀರ್ಣ 51.31 ಲಕ್ಷ ಹೆಕ್ಟೇರುಗಳು. ಒಟ್ಟು ಹಿಡುವಳಿಗಳಲ್ಲಿ ರೈತಾಪಿ ಹಿಡುವಳಿಗಳ (ಅತಿಸಣ್ಣ, ಸಣ್ಣ ಮತ್ತು ಅರೆ ಮಧ್ಯಮ ಗಾತ್ರದ ಹಿಡುವಳಿಗಳು) ಪ್ರಮಾಣ ಶೇ.76.35 ಮತ್ತು ಜಮೀನ್ದಾರಿ ಹಿಡುವಳಿಗಳ (ಮಧ್ಯಮ ಮತ್ತು ದೊಡ್ಡ ಹಿಡುವಳಿಗಳು) ಪ್ರಮಾಣ ಶೇ. 23.65. ಆದರೆ ಈ ಐದು ಜಿಲ್ಲೆಗಳನ್ನು ಬಿಟ್ಟು ಉಳಿದ 15 ಜಿಲ್ಲೆಗಳಿಗೆ ಸಂಬಂಧಿಸಿದಂತೆ ರೈತಾಪಿ ಹಿಡುವಳಿಗಳ ಪ್ರಮಾಣ ಶೇ. 90.78 ಮತ್ತು ಜಮೀನ್ದಾರಿ ಹಿಡುವಳಿಗಳ ಪ್ರಮಾಣ ಕೇವಲ ಶೇ. 9.22.

ಅಭಿವೃದ್ಧಿ ದುಸ್ಥಿತಿಯಲ್ಲಿರುವ ಐದು ಜಿಲ್ಲೆಗಳಲ್ಲಿ ಶೇ. 76.35 ರಷ್ಟಿರುವ ರೈತಾಪಿ ಜನರು ಸಾಗುವಳಿ ಭೂಮಿಯ ಶೇ. 43.10 ರಷ್ಟನ್ನು ಹೊಂದಿದ್ದರೆ ಶೇ.23.65 ರಷ್ಟಿರುವ ಜಮೀನ್ದಾರರು ಶೇ. 56.90 ರಷ್ಟು ಸಾಗುವಳಿ ಭೂಮಿಯ ಮೇಲೆ ಮಾಲಿಕತ್ವ ಹೊಂದಿದ್ದಾರೆ.

ಈ ಐದು ಜಿಲ್ಲೆಗಳನ್ನು ಬಿಟ್ಟು ಉಳಿದ 15 ಜಿಲ್ಲೆಗಳಲ್ಲಿ ಶೇ90.78 ರಷ್ಟಿರುವ ರೈತಾಪಿ ಜನರು ಶೇ. 60.77 ರಷ್ಟು ಸಾಗುವಳಿ ಭೂಮಿ ಪಡೆದಿದ್ದರೆ ಶೇ.9.22 ರಷ್ಟಿರುವ ಜಮೀನ್ದಾರರು ಶೇ. 39.23 ರಷ್ಟು ಸಾಗುವಳಿ ಭೂಮಿಯ ಮೇಲೆ ಮಾಲಿಕತ್ವ ಸಾಧಿಸಿದ್ದಾರೆ.

ಅಭಿವೃದ್ಧಿ ದುಸ್ಥಿತಿಯಿಂದ ನರಳುತ್ತಿರುವ ಜಿಲ್ಲೆಗಳಲ್ಲಿ ಅಭಿವೃದ್ಧಿಗೆ ಕಂಟಕವಾಗಿರುವ ಬಹುಮುಖ್ಯ ಸಂಗತಿಯೆಂದರೆ ಆ ಜಿಲ್ಲೆಗಳಲ್ಲಿರುವ ಜಮೀನ್ದಾರಿ ಪಾಳೆಗಾರಿಕೆಯಾಗಿದೆ. ಸರ್ಕಾರದ ಮಲತಾಯಿ ಧೋರಣೆ, ಚಾರಿತ್ರಿಕ ಸಂಗತಿಗಳು, ಭ್ರಷ್ಟಾಚಾರ, ಭೌಗೋಳಿಕ ಲಕ್ಷಣಗಳು ಮುಂತಾದ ವಿವರಗಳಿಗಿಂತ ಈ ಜಿಲ್ಲೆಗಳ ಹಿಂದುಳಿದಿರುವಿಕೆಯ ಹಿಂದೆ ಅನೇಕ ರಾಜಕೀಯ ಸಂಗತಿಗಳು ಇರುವುದನ್ನು ಗುರುತಿಸಬೇಕಾಗಿದೆ. ಈ ಕಾರಣಕ್ಕೆ ಈ ಐದು ಜಿಲ್ಲೆಗಳಲ್ಲಿ ಮಾತ್ರ ಒಟ್ಟು ದುಡಿಮೆಗಾರ ವರ್ಗದಲ್ಲಿ ಭೂರಹಿತ ಕೃಷಿ ಕಾರ್ಮಿಕರ ಪ್ರಮಾಣ ಶೇ. 45 ರಷ್ಟಿದೆ. ಉಳಿದ 15 ಜಿಲ್ಲೆಗಳಲ್ಲಿ ಕೃಷಿ ಕಾರ್ಮಿಕರ ಪ್ರಮಾಣ ಕೇವಲ ಸರಾಸರಿ ಶೇ. 25 ರಷ್ಟಿದೆ.

ಈ 5 ಜಿಲ್ಲೆಗಳ ಜನಸಂಖ್ಯೆಯಲ್ಲಿ ಕೃಷಿ ಕಾರ್ಮಿಕರ ಪ್ರಮಾಣ ಶೇ. 20.65 ರಷ್ಟಿದೆ. ಉಳಿದ 15 ಜಿಲ್ಲೆಗಳ ಜನಸಂಖ್ಯೆಯಲ್ಲಿ ಕೃಷಿ ಕಾರ್ಮಿಕರ ಪ್ರಮಾಣ ಶೇ. 8.67.

ರಾಜ್ಯದ ಜನಸಂಖ್ಯೆಯಲ್ಲಿ ಕೇವಲ ಶೇ. 20.44 ರಷ್ಟಿದ್ದರೆ ರಾಜ್ಯದ ಕೃಷಿ ಕಾರ್ಮಿಕರಲ್ಲಿ ಹಿಂದುಳಿದ ಐದು ಜಿಲ್ಲೆಗಳಲ್ಲಿ ಮಡುಗಟ್ಟಿಕೊಂಡಿರುವುದು ಈ ಜಿಲ್ಲೆಗಳಲ್ಲಿನ ಜಮೀನ್ದಾರಿ ಪಾಳೆಗಾರಿಕೆಯ ಅಟ್ಟಹಾಸಕ್ಕೆ ಸ್ಪಷ್ಟ ಸೂಚನೆಯಾಗಿದೆ. ಈ ಜಿಲ್ಲೆಗಳ ಅಭಿವೃದ್ಧಿಗೆ ಕಂಟಕವಾಗಿರುವ ಸಂಗತಿಯು ಇದೇ ಆಗಿದೆ. ಅಭಿವೃದ್ಧಿಯಲ್ಲಿನ ಪ್ರಾದೇಶಿಕ ಅಸಮಾನತೆ ಬಗ್ಗೆ ಮಾತನಾಡುವವರು ಮೇಲೆ ತಿಳಿಸಿದ ಸೂಕ್ಷ್ಮ ರಾಜಕೀಯ ಸಂಗತಿಗಳನ್ನು ಗಮನಿಸಬೇಕಾಗಿದೆ.

ಡಾ. ಟಿ.ಆರ್. ಚಂದ್ರಶೇಖರ್, ಹಂಪಿ ವಿ.ವಿ.

ಯಾಜಮಾನಿಕೆ ಬೇಡ

ಕನ್ನಡಕ್ಕೆ ಆದ್ಯತೆ ಇರಬೇಕೆಂಬ ಬಗ್ಗೆ ಎರಡು ಮಾತಿಲ್ಲವಾದರೂ ಆದ್ಯತೆ ಎಂದರೆ ಯಾಜಮಾನಿಕೆ ಎಂದು ತಿಳಿಯಬೇಕಾಗಿಲ್ಲ. ಕನ್ನಡದ ಮೂಲಕ ಸಂಸ್ಕೃತಿ-ಉಪಸಂಸ್ಕೃತಿಗಳನ್ನು ಒಳಗೊಳ್ಳುವ ಆದ್ಯತೆ, ಪ್ರಜಾಪ್ರಭುತ್ವದ ಆಶಯಗಳಿಗೆ ಸಿಗುವ ಆದ್ಯತೆ- ಎಂದು ಗ್ರಹಿಸಬೇಕಾಗಿದೆ.

ಕನ್ನಡ ಚಳವಳಿಗಳ ಇಂದಿನ ರೂಪ

ಮುಂದೆ, ಕನ್ನಡ ಚಳವಳಿಗಳಿಗೆ ಎದುರಾಗುವ ಮುಖ್ಯ ಅಪಾಯವೆಂದರೆ- ಆರ್ಥಿಕ ಉದಾರೀಕರಣ ನೀತಿ. ಜಾಗತೀಕರಣ ಮತ್ತು ಖಾಸಗೀಕರಣಗಳನ್ನು ಒಳಗೊಂಡ ಈ ನೀತಿಯು ತನ್ನದೇ ಆದ ಏಕರೂಪ ವ್ಯಾಪಾರೀ ಸಂಸ್ಕೃತಿಯನ್ನು ಬೆಳೆಸುತ್ತದೆ. ಜಾಗತೀಕರಣದ ನೆಪದಲ್ಲಿ ಪ್ರಾಂತೀಯ ಭಾಷೆ ಮತ್ತು ಸಂಸ್ಕೃತಿಗಳನ್ನು ನಿರ್ಲಕ್ಷಿಸುತ್ತದೆ. ಜಾಹೀರಾತನ್ನೇ ತನ್ನ ಸಂಸ್ಕೃತಿಯ ಮುಖ್ಯ ಸಾಧನವಾಗಿ ಬಳಸುವ ಈ ಉದಾರೀಕರಣ ನೀತಿಯು ದೂರದರ್ಶನದ ಖಾಸಗಿ ಚಾನೆಲ್ ಗಳ ಮೂಲಕ ಒದಗಿಸುವ ವಿನ್ಯಾಸಗಳು ಯುವಜನರಲ್ಲಿ ಬೇರೆಯದೇ ಜೀವನವಿಧಾನವನ್ನು ಉತ್ತೇಜಿಸುತ್ತವೆ. ಉದ್ಯೋಗದ ವಿಷಯದಲ್ಲೂ ಕನ್ನಡಿಗರಿಗೆ ಆದ್ಯತೆ ಇರುವುದಿಲ್ಲ. ಇವತ್ತು ಕನ್ನಡವನ್ನು ನಂಬಿರುವ ಕನ್ನಡವು ನಂಬಿರುವ ಜನವರ್ಗಗಳು ಪ್ರಧಾನವಾಗಿ ಗ್ರಾಮೀಣ ಪ್ರದೇಶದಲ್ಲಿವೆ. ಹಿಂದುಳಿದ ಹಾಗೂ ದಲಿತ ಸಮಾಜಿಕ ವಲಯಕ್ಕೆ ಸೇರಿವೆ. ಹೀಗಾಗಿ ಆರ್ಥಿಕ ಉದಾರೀಕರಣವು ಏಕಕಾಲಕ್ಕೆ ಪ್ರಾದೇಶಿಕ ಜನಭಾಷೆ-ಸಂಸ್ಕೃತಿಗಳಿಗೆ ಮತ್ತು ಸಾಮಾಜಿಕ ನ್ಯಾಯ ನೀತಿಗೆ ವಿರುದ್ಧ ವಾತಾವರಣವನ್ನು ರೂಪಿಸುತ್ತದೆ. ಆದ್ದರಿಂದ ನಾಳಿನ ಕನ್ನಡ ಚಳವಳಿಗಳು ಆರ್ಥಿಕ ಉದಾರೀಕರಣ ನೀತಿಯನ್ನು ವಿರೋಧಿಸಬೇಕು. ಕನ್ನಡ ಚಳವಳಿಯು ತನ್ನ ಸಮಾಜಿಕ-ಆರ್ಥಿಕ ಸೈದ್ಧಾಂತಿಕತೆಯನ್ನು ಗುರುತಿಸಿಕೊಂಡು ಆ ಮೂಲಕ ಕ್ರಿಯಾಶೀಲವಾದರೆ ಮಾತ್ರ ಅರ್ಥಪೂರ್ಣವಾದೀತು. ಇಲ್ಲದಿದ್ದರೆ, ಮೂಲಭೂತವಾದಿಗಳ, ಬಂಡವಾಳಶಾಹಿಗಳ 'ವಾಹಕ'ವಾಗುವ ಅಪಾಯವಿದೆ.

ಬರಗೂರು ರಾಮಚಂದ್ರಪ್ಪ
ಖ್ಯಾತ ಬಂಡಾಯ ಸಾಹಿತಿ

ಕಲ್ಕತ್ತ ಹೈಕೋರ್ಟ್ ಅಂದಿನ ಮುಖ್ಯ ್ಯಾಯಾಧೀಶರು ಹೀಗೆ ಹೇಳಿದರು "ಈ ಆಪಾದನೆಗಳಲ್ಲಿ ರ್ಯವಿರುವುದಾದಲ್ಲಿ ಸರ್ಕಾರದ ಭದ್ರತೆಯೊಂದೇ ಷ್ಯಯವಾದರೆ ಅವರು ದೇಶದ ವಿರುದ್ಧ ಕೆಲಸ ಡುತ್ತಿದ್ದಾರೆಂದು ನೀವು ಭಾವಿಸಿದರೆ ನೀವು ಯಾರನ್ನು ೇಕಾದರೂ ದೇಶದ ಯಾವುದೇ ಭಾಗದಲ್ಲಿ ಂಧಿಸಬಹುದು ಎಂಬುದನ್ನು ಒಪ್ಪುತ್ತೇನೆ. ಆಗ ಾವುದೇ ಪಕ್ಷ ಚುನಾವಣೆಗಳಲ್ಲಿ ಪಾಲ್ಗೊಳ್ಳುವಂತಿಲ್ಲ. ಗೂ ಅಂಥ ಪಕ್ಷಗಳು ಮತ್ತು ವ್ಯಕ್ತಿಗಳು ನ್ಯಾಯಾಲಯ ಿಂದ ನ್ಯಾಯವನ್ನು ನಿರೀಕ್ಷಿಸಲಾಗದು.

ಮೂರು ತಿಂಗಳ ನಂತರ ನನ್ನ ಬಿಡುಗಡೆ ಯಾಯಿತು. ದೇ ರೀತಿ ಇತರ ಅನೇಕ ಜನರನ್ನು ಕೂಡ ಪರಿಶೀಲನೆ ಮಿತಿಯ ಶಿಫಾರಸು ಅಥವಾ ಹೇಬಿಯಸ್ ಕಾರ್ಪಸ್ ರ್ಜಿಗಳ ಆಧಾರದಲ್ಲಿ ಬಿಡುಗಡೆ ಮಾಡಲಾಯಿತು. ಾನು ರೈಲ್ವೆ ಕಾರ್ಮಿಕರ ಸಂಘದ ಚಟುವಟಿಕೆಗಳಲ್ಲಿ ಮುಕಿದೆ. ಆಗಿನ್ನೂ ಕಮ್ಯುನಿಸ್ಟ್ ಪಕ್ಷ ಕಾನೂನು ಬಾಹಿರ ಾಗಿತ್ತು. ಯಾವತ್ತು ಪೋಲೀಸರು ನನ್ನ ಬೆನ್ನ ಹಿಂದೆ ರುತ್ತಿದ್ದರು. ನನ್ನ ಪ್ರತಿಯೊಂದು ಚಲನವಲನದ ಮೇಲೂ ವರ ಕಣ್ಣಿರುತ್ತಿತ್ತು. ಪೋಲೀಸರ ಅನುಮತಿಯಿಲ್ಲದೆ ನಾನು ಮನೆಯನ್ನು ಬದಲಾಯಿಸುವಂತಿಲ್ಲ ಎಂದು 'ಹುಕುಂ' ಮಾಡಲಾಯಿತು!


ಪಕ್ಷದ ನಿಷೇಧದ ವಿರುದ್ಧ ಪ್ರಬಲ ದನಿಯೆತ್ತಿದವರಲ್ಲಿ ಅಂದಿನ ಬಿ.ಪಿ.ಟಿ.ಯು.ಸಿ. ಅಧ್ಯಕ್ಷ ಮೃಣಾಲ್ ಕಾಂತಿ ಬೋಸ್ ಕೂಡ ಒಬ್ಬರು. ನಾವು ಆಗಾಗ ತೀರಾ ರ್ಲಕ್ಷ್ಯದಿಂದ ಇರುತ್ತಿದ್ದೆವು ಎಂದು ಮೃಣಾಲ್‌ಬಾಬು ಭಾವಿಸಿದ್ದರಿಂದ ಕ್ರಮೇಣ ಅವರ ಜತೆ ನಾವು ಭಿನ್ನಾಭಿಪ್ರಾಯ ತಳೆದವು. ಅವರು ಬಿ.ಪಿ.ಟಿ.ಯು.ಸಿ. ತೊರೆದು ಹೊಸದಾಗಿ ರಚಿತವಾದ ಯು.ಟಿ.ಯು.ಸಿ. ಸಂಗಾಮಿ ಅಧ್ಯಕ್ಷರಾದರು.

ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ (AITUC) ಸಮ್ಮೇಳನಕ್ಕೆ ರಂಗ ಸಜ್ಜುಗೊಂಡಿತ್ತು. ನಾನು ಅದರಲ್ಲಿ ಪಾಲ್ಗೊಳ್ಳಲಿದ್ದೆ. ಬ್ಯಾರಿಸ್ಟರ್ ಮಿತ್ರರಾದ ನಿರೇನ್ ಡೇ ಮೊದಲಾದವರ ಜತೆ ಈ ವಿಷಯ ಚರ್ಚಿಸಿದೆ. ಮುಂಬಯಿಗೆ ಪ್ರವಾಸ ಮಾಡುವ ಸಾಹಸಕ್ಕೆ ಕೈ ಹಾಕಬಹುದೇ ಎಂದು ನಾನವರನ್ನು ಕೇಳಿದೆ. ಅವರು ನನಗೆ ಗ್ರೀನ್ ಸಿಗ್ನಲ್ ತೋರಿಸಿದರು. ಮೃಣಾಲ್ ಕಾಂತಿ ಬೋಸ್ ನೇತೃತ್ವದ ನಮ್ಮ ನಿಯೋಗ ಹೌರಾದಿಂದ ರೈಲಿನಲ್ಲಿ ಪ್ರಯಾಣ ಬೆಳೆಸಿತು. ಆದರೆ ನಾವು ಇನ್ನೂ ತುಂಬಾ ದೂರ ಸಾಗಿರಲಿಲ್ಲ; ಅಷ್ಟರಲ್ಲಿ ಖರಗ್‌ಪುರದಲ್ಲಿ ರೈಲು ನಿಂತಾಗ ಅಧಿಕಾರಿಯೊಬ್ಬರ ನೇತೃತ್ವದ ಪೋಲೀಸ್ ಪಡೆ ಬೋಗಿಗಳಿಗೆ ನುಗ್ಗಿ ನನ್ನ ಬಗ್ಗೆ ವಿಚಾರಿಸತೊಡಗಿತು.

ಅಧಿಕಾರಿ ನನ್ನ ಬಳಿ ಬಂದು ಬಂಧನದ ವಾರಂಟ್ ಇದೆಯೆಂದ - ಯಾಕೆಂದು ನಾನು ಪ್ರಶ್ನಿಸಿದೆ. ತನಗೆ ಆ

ಸ್ವಾತಂತ್ರ್ಯಗಳಿಸಿದ ನಂತರದ ಆರಂಭದ ದಿನಗಳಲ್ಲಿ ಕಮ್ಯುನಿಸ್ಟ್ ಪಕ್ಷದ ಬೆಳವಣಿಗೆಯನ್ನು ತಡೆಯುವ ಭಾಗವಾಗಿ, ಕಮ್ಯುನಿಸ್ಟ್ ಪಕ್ಷ ಮತ್ತು ಅದರ ಸದಸ್ಯರ, ನಾಯಕರ ಮೇಲೆ ಸುಳ್ಳು ಮೊಕ್ಕದ್ದಮೆಗಳನ್ನು ಹಾಕಲಾಯಿತು. ಇಂತಹ ಸುಳ್ಳು ಮೊಕದ್ದಮೆಯೊಂದರಲ್ಲಿ ಜ್ಯೋತಿಬಸು ಜೈಲಿಗೆ ಸೇರಿದ ಬಗ್ಗೆ ಹಿಂದಿನ ಸಂಚಿಕೆಯಲ್ಲಿ ಓದಿದ್ದೀರಿ. ಒಂದು ಬಾರಿ ಬಿಡುಗಡೆಯಾಗಿ, ಮುಂಬಯಿಗೆ ಎಐಟಿಯುಸಿ ಸಮ್ಮೇಳನ ಪ್ರಮಾಣ ....., ಬಂದನಕ್ಕೊಳಗಾಗಿ ಬಿಡುಗಡೆಯಾಗುವ ಬಗ್ಗೆ, ಪೋಲಿಸರು - ಕೋರ್ಟುಗಳ ವಿಚಾರಣೆಯ ನಾಟಕದ ಬಗ್ಗೆ ಈ ಬಾರಿ ಓದಿ.

ಮಾಸದ ನೆನಪುಗಳು



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಹೊಟ್ಟೆಪಾಡಿಗಾಗಿ ಯುವಕರ ಡಕಾಯತಿ

ಬಗ್ಗೆ ಏನೂ ಸುಳಿವು ಇಲ್ಲವೆಂದೂ, ಕಲ್ಕತ್ತದಿಂದ ಬಂದ ಐ.ಜಿ.ಯ ಟೆಲಿಗ್ರಾಂ ಸಂದೇಶವಷ್ಟೇ ತನ್ನ ಬಳಿ ಇದೆಯೆಂದೂ ಆತ ಉತ್ತರಿಸಿದ.

ನಾನು ರೈಲಿನಿಂದ ಇಳಿದೆ. ಖರಗಪುರ ನಿಲ್ದಾಣ ದಲ್ಲಿ ಕಾಯುವಂತೆ ಮಾಡಲಾಯಿತು ಹಾಗೂ ಮುಂದೆ ಮಿಡ್ನಾಪುರಕ್ಕೆ ಹೋಗಬೇಕಾಗುತ್ತದೆ ಎಂದು ಸೂಚಿಸಲಾಯಿತು. ಸ್ವಲ್ಪ ಹೊತ್ತಿನ ಬಳಿಕ ನಾವು ಪ್ರಯಾಣಿಕರ ರೈಲೊಂದನ್ನು ಹತ್ತಿದೆವು. ನನ್ನನ್ನು ನೇರವಾಗಿ ಮಿಡ್ನಾಪುರ ನ್ಯಾಯಾಲಯಕ್ಕೆ ಕರೆದೊಯ್ದರು. ನನ್ನ ಪೂರ್ವಾಪರಗಳು ತಿಳಿದಾಗ ವಕೀಲರು ಅವಾಕ್ಕಾದಂತೆ ಕಂಡುಬಂತು. ನಾನು ಯಾಕೆ ನ್ಯಾಯಾಲಯದಲ್ಲಿದ್ದೇನೆಂದು ನನಗೇ ಗೊತ್ತಿಲ್ಲ ಎಂದು ಹೇಳಿದೆ.

ನಿರುತ್ತರ ಪೋಲೀಸರು

ನನ್ನನ್ನು ಮ್ಯಾಜಿಸ್ಟ್ರೇಟ್ ಮುಂದೆ ಹಾಜರು ಪಡಿಸಲಾಯಿತು. ಮ್ಯಾಜಿಸ್ಟ್ರೇಟ್ ಕೇಳಿದ ಪ್ರಶ್ನೆಗಳಿಗೆ ಪೋಲೀಸರ ಬಳಿ ಉತ್ತರವಿರಲಿಲ್ಲ. ತಕ್ಷಣವೇ ನನ್ನನ್ನು ಕಲ್ಕತ್ತಕ್ಕೆ ಕಳಿಸಬೇಕೆಂದು ಮ್ಯಾಜಿಸ್ಟ್ರೇಟ್ ಆದೇಶ ನೀಡಿದರು. ಮಿಡ್ನಾಪುರ ಕೋರ್ಟ್‌ನ ವಕೀಲರ ಗ್ರಂಥಾಲಯದಲ್ಲಿ ನಾನು ಕಾಯುತ್ತಾ ಕುಳಿತೆ. ಅನಂತರ ಮ್ಯಾಜಿಸ್ಟ್ರೇಟ್ ನನ್ನನ್ನು ಕರೆದು ಸರಕಾರದ ಆದೇಶವೊಂದನ್ನು ತೋರಿಸಿದರು.

ಕಮ್ಯುನಿಸ್ಟ್ ಕೈದಿಗಳನ್ನು ಸಶಸ್ತ್ರ ಪೋಲೀಸರು ಕಾವಲಿನಲ್ಲಿ ಕರೆದುಕೊಂಡು ಹೋಗಬೇಕು ಎಂಬುದು ಆಜ್ಞೆಯ ಸಾರಾಂಶ. ಆಗ ಸಂಜೆಯಾಗಿ ಹೋಗಿತ್ತು. ಪೋಲೀಸ್ ತಡೆ ಸಿಗುವಂತಿರಲಿಲ್ಲ. ನಾನು ರಾತ್ರಿ ಮಿಡ್ನಾಪುರದಲ್ಲೇ ಇರಬೇಕಾಯಿತು.

ಬೆಳಿಗ್ಗೆಯ ಮೊದಲ ರೈಲಿನಲ್ಲೇ ನಾನು ಕಲ್ಕತ್ತಕ್ಕೆ ಹೋಗುವುದನ್ನು ಖಾತರಿಪಡಿಸುವುದಾಗಿ ಮ್ಯಾಜಿಸ್ಟ್ರೇಟ್ ನನಗೆ ತಿಳಿಸಿದರು.

ನನ್ನನ್ನು ಮಿಡ್ನಾಪುರ ಸೆಂಟ್ರಲ್ ಜೈಲ್‌ಗೆ ಕರೆದು ಕೊಂಡು ಹೋಗಲಾಯಿತು. ರಾತ್ರಿ ನಾನು ಅಲ್ಲೇ ಉಳಿದೆ. ಅಲ್ಲಿ ನಾನು ಅನೇಕ ಸಂಗಾತಿಗಳನ್ನು ಭೇಟಿಯಾದೆ. ನನ್ನನ್ನು ಕಂಡು ಪ್ರತಿಯೊಬ್ಬರೂ ಖುಷಿಯಾದರು. ಮರುದಿನ ಬೆಳಿಗ್ಗೆ ಸಶಸ್ತ್ರ ಪೋಲೀಸ್ ಕಾವಲಿನಲ್ಲಿ ಮೊದಲ ಟ್ರೈನಿನಲ್ಲಿ ಕಲ್ಕತ್ತಕ್ಕೆ ಕರೆದೊಯ್ದರು; ಅಲ್ಲಿ ನೇರವಾಗಿ ಆಲಿಪುರ ನ್ಯಾಯಾಲಯಕ್ಕೆ.

ನಾನು ವಕೀಲರ ಗ್ರಂಥ ಭಂಡಾರದಲ್ಲಿ ಕುಳಿತೆ. ಜಮೀನಿಗೆ ಮನವಿ ಮಾಡುವುದೆಂದು ನಾನು ನಿರ್ಧರಿಸಿದೆ. ನನ್ನ ಮೊಕದ್ದಮೆಯನ್ನು ವಿಚಾರಿಸುವ ನ್ಯಾಯಾಧೀಶರು ತಾತ್ಕಾಲಿಕವಾಗಿ ಬಂದಿರುವು ದರಿಂದ ನನಗೆ ಜಾಮೀನು ಸಿಗಲಾರದೆಂದು ಕೆಲ ವಕೀಲರು ಹೇಳಿದರು. ಈ ನ್ಯಾಯಾಧೀಶ ಸರಕಾರಕ್ಕೆ ಅತೃಪ್ತಿಯುಂಟಾಗುವಂಥ ಯಾವ ಕೆಲಸವನ್ನು ಮಾಡಲಾರರು ಎಂದೆಲ್ಲಾ ತಿಳಿಸಿದರು.

ಶೀಘ್ರವೇ ಸ್ನೇಹಾಂಗ್ಶು ಆಚಾರ್ಯ ಬಂದರು. ಆಲಿಪುರ ನ್ಯಾಯಾಲಯದಲ್ಲಿ ಹಲವು ಪರಿಚಿತ ಮುಖಗಳನ್ನು ನೋಡಿದೆ. ನನ್ನ ಸೋದರ ಕೂಡ ಹಾಜರಿದ್ದ; ಆತ ಬೇರೊಂದು ಮೊಕದ್ದಮೆ ಸಂಬಂಧ ಅಲ್ಲಿದ್ದ ನನ್ನನ್ನು ನ್ಯಾಯಾಲಯಕ್ಕೆ ಕರೆಯಲಾಯಿತು. ನನ್ನ ಜತೆ ಸ್ನೇಹಾಂಗ್ಶು ಕೂಡ ಬಂದರು.

ಕಣ್ಣೆತ್ತಿಯೂ ನೋಡದ ನ್ಯಾಯಾಧೀಶ

'ನಮ್ಮನ್ನು ಕಣ್ಣಲ್ಲಿ ಕಣ್ಣಿಟ್ಟು ಯಾಕೆ ನೋಡುವುದಿಲ್ಲ' ಎಂದು ನಾನವರನ್ನು ಪ್ರಶ್ನಿಸಿದೆ. ಆಗಲೂ ಅವರು ನೋಡಲಿಲ್ಲ.

ನನ್ನನ್ನು ಆಲಿಪುರ ಸೆಂಟ್ರಲ್ ಜೈಲಿಗೆ ಕಳಿಸಿದರು. ಅಂದು ಗುರುವಾರವಾಗಿತ್ತು. ಡಕಾಯತಿ ಆರೋಪಕ್ಕೆ ಒಳಗಾದ ಕೆಲವು ಯುವಕರು ನನ್ನ ಜತೆಗಿದ್ದರು. ನೀವು ಯಾಕೆ ಅಪರಾಧ ಕೃತ್ಯಗಳಿಗೆ ಕೈ ಹಾಕಿದಿರಿ ಎಂದು ನಾನವರನ್ನು ಪ್ರಶ್ನಿಸಿದೆ. ಜೀವನೋಪಾಯಕ್ಕೆ ಬೇರೆ ದಾರಿಯಿಲ್ಲದಿರುವುದರಿಂದ ಕಾನೂನುಬಾಹಿರ ಕೃತ್ಯಗಳಿಗೆ ಇಳಿಯುವ ಅನಿವಾರ್ಯತೆ ಉಂಟಾಯಿತು ಎಂದವರು ಉತ್ತರಿಸಿದರು.

ಎಂ.ಗುಹಾ ರಾಯ್ ನ್ಯಾಯಾಲಯದಲ್ಲಿ ಜಾಮೀನು ಕೋರಲು ಸ್ನೇಹಾಂಗ್ಶು ನಿರ್ಧರಿಸಿದರು. ಆ ನ್ಯಾಯಾಲಯ ದಲ್ಲಿ ಸೋಮವಾರ ನನ್ನನ್ನು ಹಾಜರುಪಡಿಸಲಾಯಿತು. ಈ ಸಲ ನನಗೆ ಜಾಮೀನು ಸಿಕ್ಕಿತು. ಆದರೆ ಪೋಲೀಸರು ಕೆಲವು ನಿರ್ಬಂಧಗಳನ್ನು ವಿಧಿಸಿದರು. ಬೆಲ್ಲಲ ಪೋಲೀಸ್ ಠಾಣೆಯಲ್ಲಿ ವಾರಕ್ಕೊಮ್ಮೆ ಹಾಜರಿಹಾಕುವಂತೆ ಸೂಚಿಸ ಲಾಯಿತು. ಇದು ಪೂರ್ಣವಾಗಿ ಹೊಸ ಅನುಭವವಾ ದ್ದರಿಂದ ಹೇಗೆ ಪ್ರತಿಕ್ರಿಯಿಸುವುದೆಂದೇ ನನಗೆ ತೋಚಲಿಲ್ಲ.

ನ್ಯಾಯಾಲಯದಲ್ಲಿ ಮೊಕದ್ದಮೆ ವಿಚಾರಣೆಗೆ ಬಂತು. ನಾನು ಆಜ್ಞೆಗಳನ್ನು ಉಲ್ಲಂಘಿಸಿದ್ದೇನೆ ಎಂದು ಪೋಲೀಸರು ಆಪಾದಿಸಿದರು. ಪೋಲೀಸರಿಗೆ ತಿಳಿಸದೆ ಮುಂಬಯಿಗೆ ಹೊರಟಿದ್ದಾಗಿ ಹೇಳಿದರು. ಹಾಗೆ ಮಾಡಿದ್ದರಿಂದ 'ನಿವಾಸ ಬದಲಾವಣೆ ಮಾಡಿದಂತೆ ಆಯಿತು' ಎಂಬುದು ಪೋಲೀಸರ ವಾದವಾಗಿತ್ತು. ಕೆಲ ತಿಂಗಳ ಕಾಲ ಈ ಮೊಕದ್ದಮೆ ಮುಂದುವರಿಯಿತು.

ಈ ಮೊಕದ್ದಮೆಯಲ್ಲಿ ಮೃಣೇನ್ ಸೇನ್ ಎಂಬ ಗೆಳೆಯ ತುಂಬಾ ನೆರವು ನೀಡಿದರು. ಹಾಗಂತ ಸ್ನೇಹಾಂಗ್ಶು ಯಾವಾಗಲೂ ಮಾಡಿದ ನೆರವನ್ನು ಮರೆಯುವುದು ಎಂದರ್ಥವಲ್ಲ. ವಿಚಾರಣೆಯ ಕೊನೆ ದಿನ ನಾನು ಮೃಣೇನ್‌ರೊಂದಿಗೆ ಕೋರ್ಟ್‌ಗೆ ಬಂದೆ. ಅವರು ಹೋಂವರ್ಕ್ ಮಾಡಿಕೊಂಡು ಸಿದ್ಧರಾಗಿಯೇ ಬಂದಿದ್ದರು.

ಪ್ರಾಸಿಕ್ಯೂಷನ್ ವಕೀಲ ನನ್ನ ಹತ್ತಿರ ಬಂದ್ರು, 'ನಿಮ್ಮ ವಿರುದ್ಧ ನಾನು ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಆದರೆ ಇದು ಅನಿವಾರ್ಯ; ನಿಮ್ಮನ್ನು ಜೈಲಿಗೆ ಕಳಿಸುವಂತೆ ನಾನು ಕೋರ ಬೇಕಾಗಿದೆ. ಅಷ್ಟೇ; ತೀರ್ಪು ಕೇಳಲು ನಾನು ನ್ಯಾಯಾಲಯದಲ್ಲಿ ಇರಬಾರದು' ಎಂದು ಹೇಳಿದರು.

45 ನಿಮಿಷ ಕಾಲ ಕಲಾಪ ಮುಂದುವರಿಯಿತು. ಮೃಣೇನ್‌ಸೇನ್‌ನೆರವಿನಿಂದಾಗಿ ನಾನು ಬೇಷರತ್ತಾಗಿ ಬಿಡುಗಡೆಗೊಂಡೆ. ನಾನು ಮನೆಗೆ ಮರಳಿದೆ.

(ಮುಂದುವರಿಯುವುದು)

ನೇ ಪುಟದಿಂದ

ರಾಜ್ಯದಲ್ಲಿಯೂ ಈ ಕಾರಣವಾಗಿವೇ ಬೆಂಗಳೂರು ಮತ್ತು ಅದರ ಸುತ್ತಮುತ್ತಲಿನ ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶದ ಭಾಗಗಳಲ್ಲಿ ಬಂಡವಾಳದ ಕೂಡಿಕೆಯಾಗುತ್ತಿವೆ. ರಾಜ್ಯದ ಬೇರೆ ಭಾಗಗಳಲ್ಲಿ ಈ ಬಂಡವಾಳ ಬರುತ್ತಿಲ್ಲ ಅದು ಬರುವಂತೆ ಮಾಡಲು ರಾಜ್ಯ ಸರ್ಕಾರಗಳು ಪಟ್ಟ ಪ್ರಯತ್ನ, ದೇಶದ ಪ್ರಮುಖ ಬಂಡವಾಳಶಾಹಿಗಳ ಮುಂದೆ ಗೋಗರೆದದ್ದು ಅವರ ಅಲಕಸದಂತೆ ತಿರಸ್ಕರಿಸಲ್ಪಟ್ಟಿತು. ಏಕೆಂದರೆ ರಾಜ್ಯ ಸರ್ಕಾರಕ್ಕೆ ಈ ಬಗ್ಗೆ ಅಧಿಕಾರವಿಲ್ಲ.

"ಬನ್ನಿ ಸ್ವಾಮಿ ಬನ್ನಿ, ನಮ್ಮ ರಾಜ್ಯಕ್ಕೆ ಬನ್ನಿ"

ಇಲ್ಲಿಯವರೆಗೂ ವಿವರಿಸಿದ್ದು ಸ್ವಾತಂತ್ರಾನಂತರ, ಕರ್ನಾಟಕದ ಏಕೀಕರಣಾನಂತರ ನೆಹರೂ-ಇಂದಿರಾಗಾಂಧಿಗಳ ಸಮಾಜವಾದಿ ಎಂದು ಅವರು ಕರೆದುಕೊಂಡ, ಸರ್ಕಾರದ ಪಾತ್ರಕ್ಕೆ ಯೋಜಿತ ಅಭಿವೃದ್ಧಿಗೆ ಸ್ವಲ್ಪ ಹೆಚ್ಚು ಅವಕಾಶವಿದ್ದ ಕಾಲದ ಮಾತು. 1991 ರಿಂದ ದೇಶದಲ್ಲಿ ಹರಿಯಬಿಟ್ಟ ಉದಾರೀಕರಣ, ಜಾಗತೀಕರಣ, ಖಾಸಗೀಕರಣದ ಹುಚ್ಚು ಹೊಳೆಯ ನಂತರ!

ಇಂದು ಬಂಡವಾಳ ಶಾಹಿಗಳದ್ದೇ ಸಾಮ್ರಾಜ್ಯ. ಅವರು ಮಾಡಿದ್ದೇ ಮಾಟ, ಕುಣಿದದ್ದೇ ಕೂಟ. ನಮ್ಮ ದೇಶದ ಅತ್ಯಂತ ಶ್ರೀಮಂತ ಬಂಡವಾಳಶಾಹಿಗಳು - ಗುತ್ತೇದಾರಿ ಬಂಡವಾಳಶಾಹಿಗಳ ಕೈಯಲ್ಲಿ ದೇಶದ - ರಾಜ್ಯದ ಅಭಿವೃದ್ಧಿ ಲುಕಿದೆ. ನಮ್ಮ ರಾಜ್ಯ ಸರಕಾರದ ಕೈಯಲ್ಲಿರುವುದಕ್ಕಿಂತ ಸಾವಿರಪಟ್ಟು ಹತ್ತು ಸಾವಿರ ಪಟ್ಟು ಹಣದ ಮೇಲೆ ಕುಳಿತಿರುವ ಇವರು ಬಾಯಿಬಿಟ್ಟರೆ ಅದೇ ಪ್ರಸಾದ ಎಂದು ಅವರ ಮುಂದೆ ಕೈಚಾಚಿ ಕುಳಿತಿರುವ ಗತಿ ರಾಜ್ಯ ಸರ್ಕಾರಕ್ಕಿದೆ.

ನಮ್ಮ ರಾಜ್ಯಕ್ಕೆ ಬನ್ನಿ ಸ್ವಾಮಿ ನಮ್ಮ ರಾಜ್ಯಕ್ಕೆ ಬನ್ನಿ ಎಂದು ನಡೆಮುಡಿಗೆ ಹಾಸಿ ಹಾರ, ತುರಾಯಿ ಹಿಡಿದು ಪ್ರಾರ್ಥಿಸುತ್ತಿದ್ದಾರೆ. ರಾಜ್ಯಗಳ ಮುಖ್ಯಮಂತ್ರಿಗಳು. ಈ ಬಹುರಾಷ್ಟ್ರೀಯ ಕಂಪನಿಗಳ - ಒಡೆಯರಲ್ಲ ಅವರ ಮೂರನೇ ದರ್ಜೆ ನೌಕರರ ಮುಂದೆ, ಇವರೆಲ್ಲರ ಅಧಿಪತಿಯಾದ ಅಮೇರಿಕಾ, ಜಪಾನುಗಳ ಮುಂದೆ ಬಿಕ್ಕಿಸಿ, ತಮ್ಮ ರಾಜ್ಯದ ಬೇಡಗನ್ನು ವಿವರಿಸಿ ಅವರನ್ನು ಒಲಿಸಿಕೊಳ್ಳುವುದೇ ಅವರ ಇಂದಿನ ಪ್ರಮುಖ ಕೆಲಸವಾಗಿದೆ. ಯಾವ ಮುಖ್ಯಮಂತ್ರಿಯ ಕಡೆಗೆ ಈ ಅಧಿಪತಿಗಳು ಕಣ್ಣು ಹಾಯಿಸಿ ಕಿರುನಗೆದೋರಿದರೋ ಅವರೇ ಯಶಸ್ವಿ ಮುಖ್ಯಮಂತ್ರಿ, ದಕ್ಷ, ಸಮರ್ಥ ಮುಖ್ಯಮಂತ್ರಿ ಇದು ಇಂದಿನ ಲೆಕ್ಕಾಚಾರ. ಇದು ಕರ್ನಾಟಕದ 5 ಕೋಟಿ ಜನತೆಯ ಪ್ರತಿನಿಧಿಗೆ ಒದಗಿರುವ ಗತಿ. ಅದನ್ನೇ ನಮ್ಮ ರಾಜ್ಯದ ಹೊಸ ಮುಖ್ಯಮಂತ್ರಿ ಸುಂದರ ಮಾತುಗಳಲ್ಲಿ ಅನುದಿನವೂ ಮುಚ್ಚಿಡುತ್ತಿರುವುದು.

ಹೀಗೆ ನಮ್ಮ ರಾಜ್ಯದ ಕಡೆಗೆ ಕಣ್ಣು ಹಾಯಿಸಿದರೆ ಸಾಕು ಎಂದು ಕಾದಿರುವಾಗ. ಎಲ್ಲಿಗೋ ನಮ್ಮ ರಾಜ್ಯದಲ್ಲಿ ಒಂದು ಕಡೆಗೆ ಬಂದರೆ ಸಾಕು ಎಂದು ಹಂಬಲಿಸುತ್ತಿರುವಾಗ ನಮ್ಮ ರಾಜ್ಯದ ಹಿಂದುಳಿದ ಪ್ರದೇಶಗಳಿಗೆ - ರಸ್ತೆ, ಏಕೆ ಶೌಚಾಲಯಗಳೇ ಇಲ್ಲದ ಕಡೆಗಳಿಗೆ ಬನ್ನಿ ಎಂದು ಅವರನ್ನು ಕರೆಯುವ ಧೈರ್ಯವಾದರೂ ಎಲ್ಲಿ? ಸರ್ಕಾರವೇ ಎಲ್ಲ ಕಡೆ ಶಾಲೆ, ಕಾಲೇಜು ಆಸ್ಪತ್ರೆ, ರಸ್ತೆಗಳನ್ನು ನಿರ್ಮಾಣ ಮಾಡುತ್ತಿದ್ದ ಸಮಯದಲ್ಲಿ ಎಲ್ಲ ಪ್ರದೇಶಗಳಿಗೂ ಸಮನಾಗುವಂತೆ ನೋಡಿಕೊಳ್ಳಲು ಪ್ರಯತ್ನ ಮಾಡುತ್ತಿತ್ತು. ಈಗ ಎಲ್ಲವೂ ಖಾಸಗೀಯವರ ಕೈಯಲ್ಲಿ ಲಾಭದ ಲೆಕ್ಕದಲ್ಲಿ. ಪರಿಣಾಮವಾಗಿ ಪ್ರಾದೇಶಿಕ ಅಸಮಾನತೆ ಮತ್ತಷ್ಟು ತೀವ್ರವಾಗುತ್ತಿದೆ. ತೀವ್ರವಾಗುತ್ತಿದೆ. ಜೊತೆಗೆ ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸುವ ಯಾವುದೇ ಸಾಧನವಿಲ್ಲ. ಅಷ್ಟೇ ಅಲ್ಲ ಪ್ರಾದೇಶಿಕ ಅಸಮಾನತೆ ಮತ್ತಷ್ಟು ತೀವ್ರವಾಗುತ್ತಿದೆ. ಹೀಗಾಗಿಯೇ ಈ ಉದಾರೀಕರಣ, ಜಾಗತೀಕರಣ, ಖಾಸಗೀಕರಣದ ಯುಗದಲ್ಲಿಯೇ ಪ್ರಾದೇಶಿಕ ಅಸಮಾನತೆಯ ವಿರುದ್ಧ ಧ್ವನಿ ಎದ್ದಿರುವುದು.

ಭೂಮಿ ಮತ್ತು ಕೃಷಿ ಸಮೃದ್ಧಿ

ಇಲ್ಲಿಯವರೆಗೆ ರಾಜ್ಯದ ಜನತೆಗೆ ಅಧಿಕಾರ ವಂಚನೆಯ ಮೂಲಕ, ರಾಜ್ಯ ಸರ್ಕಾರಗಳಿಗೆ ಕೈಗಾರಿಕೆಯ ಮೇಲೆ ಅಧಿಕಾರವನ್ನು ನಿರಾಕರಿಸುವ ಮೂಲಕ ರಾಜ್ಯದ ಸಮೃದ್ಧಿಗೆ ಕೊಡಲಿಪೆಟ್ಟಾಗಿದೆ. ಹಾಗೂ ಪ್ರಾದೇಶಿಕ ಅಸಮಾನತೆಗೆ ಕಾರಣವಾಗಿದೆ ಎಂಬುದನ್ನೂ ವಿವರಿಸಲಾಯಿತು. ಹಾಗಾದರೆ ರಾಜ್ಯ ಸರ್ಕಾರದ ಕೈಯಲ್ಲಿ ಏನೂ ಅಧಿಕಾರವಿಲ್ಲವೇ?

ರಾಜ್ಯ ಸರ್ಕಾರದ ಅಳಿವಿನೊಳಗೆ ಇದ್ದ ಅಧಿಕಾರವನ್ನು ಬಳಸಿ ಸಾಧಿಸಬಹುದಾಗಿದ್ದ ರಾಜ್ಯದ ಜನತೆಯ ಬದುಕಿನ ಸಮೃದ್ಧಿಯನ್ನು ಸಾಧಿಸಲಾಗಿದೆಯೆ? ... ಪ್ರಶ್ನೆ ಏಳುತ್ತದೆ.

ರಾಜ್ಯ ಸರ್ಕಾರದ ಆಳವಿನಲ್ಲಿ ಭೂಸುಧಾರಣೆ, ಕೃಷಿ ಅಭಿವೃದ್ಧಿ ಮೊದಲಾದ ಹಲವು ಪ್ರಮುಖ ವಿಷಯಗಳು ಇವೆ. ರಾಜ್ಯದಲ್ಲಿ ಬಡತನ, ನಿರುದ್ಯೋಗವನ್ನು ಹೋಗಲಾಡಿಸಲು ಇವು ಪ್ರಮುಖ ಸಾಧನವೇ. ಗ್ರಾಮೀಣ ಪ್ರದೇಶದ ಉದ್ಯೋಗ ಹಾಗೂ ಜೀವಿತದ ಮೂಲಭೂಮಿ.ಆದ್ದರಿಂದ ನೈಜವಾದ ಭೂಸುಧಾರಣೆ, ಭೂಹಂಚಿಕೆ ಗ್ರಾಮೀಣ ಪ್ರದೇಶದಲ್ಲಿ ವ್ಯಾಪಕವಾಗಿರುವ ನಿರುದ್ಯೋಗವನ್ನು ನಿವಾರಿಸುತ್ತದೆ. ಸಾಮಾಜಿಕ ಅಸಮಾನತೆಯನ್ನು ಜಾತಿ ಬೇಧವನ್ನು ಹೋಗಲಾಡಿಸುವ ಪ್ರಥಮ ಹೆಜ್ಜೆಯೂ ಆಗುತ್ತದೆ.

ಕರ್ನಾಟಕದಲ್ಲಿ ಭೂಸುಧಾರಣೆಯೆಂಬ ಮೂರು ದಶಕಗಳ ದೀರ್ಘ ನಾಟಕವೊಂದು ನಡೆದಿದೆಯೇನೋ ನಿಜ. ಆದರೆ ನೈಜವಾಗಿ, ವಾಸ್ತವದಲ್ಲಿ ಪರಿಣಮಿಸಿದ್ದು ಬಹಳ ಕಡಿಮೆ. ಭೂಸುಧಾರಣೆ ಎಲ್ಲಿ ಪರಿಣಾಮಕಾರಿಯಾಗಿದೆಯೋ ಅಲ್ಲಿನ ಅನುಭವವನ್ನೇ ನೋಡಿದರೂ ಈ ಮಾತು ಸ್ಪಷ್ಟವಾಗುತ್ತದೆ. ದ.ಕನ್ನಡ ಜಿಲ್ಲೆಯಲ್ಲಿ ಅತ್ಯಂತ ಗರಿಷ್ಠ ಮಟ್ಟದ ಭೂಸುಧಾರಣೆಯ ಜಾರಿಯನ್ನು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಅತ್ಯಂತ ಕನಿಷ್ಠ ಮಟ್ಟದ ಜಾರಿಯನ್ನು ಕಾಣುತ್ತೇವೆ. ಅದೇ ಪ್ರದೇಶಗಳ ವ್ಯತ್ಯಾಸವನ್ನು ಗಮನಿಸಿದರೆ ದ.ಕ. ಅತ್ಯಂತ ಹೆಚ್ಚು ಸಾಕ್ಷರತೆ, ಶಿಕ್ಷಣ ಹಾಗೂ ದೇಶಾದ್ಯಂತ ಉದ್ಯೋಗ ಸಾಧ್ಯತೆಯನ್ನು ಉತ್ತಮ ಆದಾಯಮಟ್ಟವನ್ನೂ ಪಡೆದುಕೊಂಡಿದ್ದರೆ ಗುಲ್ಬರ್ಗ, ರಾಯಚೂರು ಜಿಲ್ಲೆಗಳಲ್ಲಿ ಅತ್ಯಂತ ಕನಿಷ್ಟ ಗ್ರಾಮೀಣ ಸಾಕ್ಷರತೆ, ಬಡತನ, ನಿರುದ್ಯೋಗಗಳನ್ನು ಕಾಣುತ್ತೇವೆ.

ದ.ಕನ್ನಡ ಮಾನವ ಅಭಿವೃದ್ಧಿ ಸೂಚ್ಯಾಂಕದ ಕರ್ನಾಟಕದ ಕೇರಳವಾದರೆ, ಹೈದರಾಬಾದ್ ಕರ್ನಾಟಕ ಕರ್ನಾಟಕದ ಬಿಹಾರವಾಗಿದೆ (ಬಾಕ್ಸ್ 3 ನೋಡಿ) ಭೂಸುಧಾರಣೆ, ಭೂಹಂಚಿಕೆಯೂ ಪ್ರಾದೇಶಿಕ ಅಸಮಾನತೆಗೆ ಎಷ್ಟೊಂದು ಪ್ರಮುಖ ಎಂಬುದು ಇದರಿಂದ ಅರಿವಾಗಬೇಕು.

ಭೂಸುಧಾರಣೆಯನ್ನು ಕೇರಳ 1957 ರಿಂದ ಪ.ಬಂಗಾಳ 1967 ರಿಂದ ನೈಜವಾಗಿ ಸಾಧಿಸಿದ್ದರಿಂದ ರಾಜ್ಯದ ಜನತೆಯು ಉತ್ತಮ ಅಭಿವೃದ್ಧಿ ಸಾಧಿಸಲು, ಪ್ರಾದೇಶಿಕ ಅಸಮಾನತೆ ತೀವ್ರಗೊಳ್ಳದಂತೆ ತಡೆಯಲು ಸಾಧ್ಯವಾಗಿದೆ. ಇಂದು ಪ.ಬಂಗಾಳ ಕೃಷಿ ಉತ್ಪಾದನೆಯಲ್ಲಿ ಪಂಜಾಬ್-ಹರ್‍ಯಾಣಗಳನ್ನು ಮೀರಿಸಿ ಪ್ರಥಮ ಸ್ಥಾನ ಪಡೆದಿದೆ.

ಕನ್ನಡ ರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸುವಾಗ ಕರ್ನಾಟಕದ ಸಮೃದ್ಧಿಯನ್ನು ಸಾಧಿಸುವ, ಪ್ರಾದೇಶಿಕ ಅಸಮಾನತೆಯನ್ನು ತೊಡೆಯುವ ಬಗ್ಗೆ ಚಿಂತಿಸಬೇಕು.

ರಾಜ್ಯಗಳ ಸ್ವಾಯತ್ತತೆ, ಆರ್ಥಿಕ ರಾಜಕೀಯ ಅಧಿಕಾರಗಳ ಬಗ್ಗೆ, ಜಾಗತೀಕರಣ, ಖಾಸಗೀಕರಣ ನೀತಿಯ ಹಾವಳಿಯ ಬಗ್ಗೆ ಜಾರಿಯಾಗದ ಭೂಸುಧಾರಣೆಯ ಬಗ್ಗೆ ಚಿಂತಿಸಬೇಕು.

ರಾಜಕೀಯ ಪಕ್ಷಗಳು ಹಾಗೂ ಕರ್ನಾಟಕದ ಸಮೃದ್ಧಿ

ರಾಜ್ಯವನ್ನು ಆಳುತ್ತಿರುವ ಹಾಗೂ ಹಲವು ವರ್ಷ ಆಳಿದ ಕಾಂಗ್ರೆಸ್ 'ಸಮೃದ್ಧ ಕರ್ನಾಟಕ' ಯಾತ್ರೆ ನಡೆಸಿದ ಬಿಜೆಪಿ ಇದನ್ನು ಸಾಧಿಸಲು ಸಾಧ್ಯವೇ ಯೋಚಿಸಬೇಕು.

ಏಕೆಂದರೆ ಕಾಂಗ್ರೆಸ್ ನಿರಂತರವಾಗಿ ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ನೀಡುವುದನ್ನು ವಿರೋಧಿಸಿದ, ರಾಜ್ಯಗಳ ಅಧಿಕಾರವನ್ನು ಕಿತ್ತುಕೊಂಡ ಪಕ್ಷ. ಜಾಗತೀಕರಣ, ಖಾಸಗೀಕರಣವನ್ನು ಆರಂಭ ಮಾಡಿದ ಪಕ್ಷ. ಎಡ ಚಳುವಳಿಯ ಒತ್ತಡಕ್ಕೊಳಗಾಗಿ ಭೂಸುಧಾರಣೆಯ ಮಾತನ್ನಾಡಿದರೂ ಅದನ್ನೊಂದು ಸೋಗಸನ್ನಾಗಿ ಪರಿವರ್ತಿಸಿದ ಪಕ್ಷ.

ಇನ್ನು ಬಿಜೆಪಿ ಕಾಂಗ್ರೆಸ್ಸಿಗಿಂತ ತೀವ್ರವಾಗಿ ರಾಜ್ಯಗಳ ಅಧಿಕಾರವನ್ನು ಭೂಸುಧಾರಣೆಯನ್ನು ವಿರೋಧಿಸಿದ, ವಿರೋಧಿಸುತ್ತಿರುವ ಪಕ್ಷ ಹಾಗೂ ರಭಸದಿಂದ ಜಾಗತೀಕರಣ, ಖಾಸಗೀಕರಣವನ್ನು ಜಾರಿಗೆ ತರುತ್ತಿರುವ ಪಕ್ಷ.

ಜನತಾದಳ ರಾಜ್ಯಗಳಿಗೆ ಹೆಚ್ಚು ಅಧಿಕಾರವನ್ನು ಆರ್ಥಿಕ ಸಂಪನ್ಮೂಲಗಳ ವರ್ಗಾವಣೆಯನ್ನು ಪ್ರತಿಪಾದಿಸಿದರೂ ಭೂಸುಧಾರಣೆಯನ್ನು ವಿರೋಧಿಸುವ ಹಾಗೂ ಜಾಗತೀಕರಣ, ಖಾಸಗೀಕರಣವನ್ನು ಪ್ರತಿಪಾದಿಸುವ ಪಕ್ಷ.

ಆದ್ದರಿಂದ ಈಪಕ್ಷಗಳು ಸಮೃದ್ಧ ಕರ್ನಾಟಕವನ್ನು ಕಟ್ಟಲು ವಿಫಲವಾಗಿವೆ. ಮತ್ತು ಮುಂದೆಯೂ ಸಫಲವಾಗಲು ಸಾಧ್ಯವಿಲ್ಲ.

ಆದ್ದರಿಂದ ರಾಜ್ಯಗಳ ಸ್ವಾಯತ್ತತೆ, ಭೂಸುಧಾರಣೆ ಗಳಿಗಾಗಿ ಜಾಗತೀಕರಣ, ಖಾಸಗೀಕರಣದ ವಿರುದ್ಧ ನಡೆಯುವ ಜನರ ಚಳುವಳಿ ಮಾತ್ರ ಸಮೃದ್ಧ ಕರ್ನಾಟಕವನ್ನು ರೂಪಿಸಬಲ್ಲದು. ಅದು ಮಾತ್ರ ನಿಜವಾದ ಕನ್ನಡ ಚಳುವಳಿ.

ಸಿಲಿಕಾನ್ ಕಣಿವೆಯಲ್ಲಿ ಧೂಳೆಬ್ಬಿಸಿದ

ಬೆಂಗಳೂರು ಈ ವಾರ ಇಡೀ ಜಗತ್ತಿನ ಕಣ್ಸೆಳೆದಿತ್ತು. ಇದಕ್ಕೆ ಕಾರಣ ನ IT.COM 99 ಎಂಬ ಮಾಹಿತಿ ತಂತ್ರಜ್ಞಾನದ ಅಂತರಾಷ್ಟ್ರೀಯ ಸಮ್ಮೇ ತಂತ್ರಜ್ಞಾನದ ರಾಜಧಾನಿ ಎಂದು ಹೆಸರಾಗಿತ್ತು. ಈಗ ಭಾರತದ ಮಾ ಇದನ್ನು ಭಾರತದ 'ಸಿಲಿಕಾನ್ ಕಣಿವೆ' ಎನ್ನಲಾಗುತ್ತದೆ. ಬೆಂಗಳೂ ತಂತ್ರಜ್ಞಾನ ಕಂಪನಿ ನ್ಯೂಯಾರ್ಕ್‌ನ ಶೇರು ಮಾರುಕಟ್ಟೆ ಪ್ರವೇಶಿಸಿದ ಭಾರತದ ಸಾಫ್ಟ್ ವೇರ್ ರಫ್ತಿನ ಮೂರನೇ ಒಂದು ಭಾಗಕ್ಕೂ ಹೆಚ್ಚು ಮಾಹಿತಿ ತಂತ್ರಜ್ಞಾನ ಎಂದರೇನು? 'ಸಿಲಿಕಾನ್ ಕಣಿವೆ' ಎಂದರೇನ ಕರ್ನಾಟಕದ ಶ್ರೀಸಮಾನ್ಯನಿಗೆ ಅರ್ಥಪೂರ್ಣವೇ?. ಅಥವಾ 'ಹೊಟ್ಟೆ ಹೆಗ್ಗಳಿಕೆಯೆ?. ಕರ್ನಾಟಕದಲ್ಲಿ ಮತ್ತು ಭಾರತದ ಬೆಳವಣಿಗೆಯಲ್ಲಿ ಮಾ ಉತ್ತರ ಕಂಡುಕೊಳ್ಳಲು ಪ್ರಯತ್ನಿಸುವ ಲೇಖನ.

BANGALORE IT.COM '99 INDIA
BENEFIT FROM IT

ಬೆಂಗಳೂರನ್ನು ಭಾರತದ ಮಾಹಿತಿ ತಂತ್ರಜ್ಞಾನದ ರಾಜಧಾನಿ ಎನ್ನುತ್ತಾರೆ. ಮಾಹಿತಿ ತಂತ್ರಜ್ಞಾನವೆಂದರೆ ಕಂಪ್ಯೂಟರ್ ಮತ್ತು ಅದಕ್ಕೆ ಸಂಬಂಧಿಸಿದ ಜ್ಞಾನ, ತಂತ್ರಜ್ಞಾನ, ಉಪಕರಣಗಳು, ಸೇವೆಗಳು, ಇವೆಲ್ಲಕ್ಕೂ ಒಟ್ಟಿಗೆ ಇಟ್ಟಿರುವ ಹೆಸರು.

ಇಂಗ್ಲೀಷ್‌ನಲ್ಲಿ ಇನ್‌ಫರ್ಮೇಶನ್ ಟೆಕ್ನಾಲಜಿ ಅಂತಾರೆ. ಚಿಕ್ಕದಾಗಿ 'ಐಟಿ' ಅಂತಾರೆ. ಕಂಪ್ಯೂಟರ್, ಕಂಪ್ಯೂಟರ್ ಬಳಸುವ ಸಾಫ್ಟ್‌ವೇರ್, ಪ್ರಿಂಟರ್, ಫ್ಯಾಕ್ಸ್, ಕಂಪ್ಯೂಟರ್‌ಗಳನ್ನು ಜಗತ್ತಿನ್ಯಾದ್ಯಂತ ಜೋಡಿಸುವ ವಿಶ್ವ ವ್ಯಾಪಿಜಾಲ ಇಂಟರ್ ನೆಟ್- ಇವೆಲ್ಲಾ ಮಾಹಿತಿ ತಂತ್ರಜ್ಞಾನದ ಭಾಗಗಳೇ(ಮಾಹಿತಿ ತಂತ್ರಜ್ಞಾನವನ್ನು ಇನ್ನು ಮುಂದೆ ಈ ಲೇಖನದಲ್ಲಿ 'ಐಟಿ' ಎಂದು ಕರೆಯಲಾಗುವುದು. ವಿವರಗಳಿಗೆ ಬಾಕ್ಸ್ ನೋಡಿ.

ಐಟಿ ಈಗ ಜಗತ್ತಿನಾದ್ಯಂತ ಒಂದು ಪ್ರತ್ಯೇಕವಾದ ಪ್ರಬುದ್ಧ ಕೈಗಾರಿಕಾ ಕ್ಷೇತ್ರ. ಸ್ಟೀಲ್, ಸಿಮೆಂಟ್, ಬಟ್ಟೆ, ಇಂಜಿನೀಯರಿಂಗ್ ಕೈಗಾರಿಕೆಗಳಂತೆ. ಐಟಿ ತನ್ನಿಂದತಾನೇ ಒಂದು ಕೈಗಾರಿಕಾ ಕ್ಷೇತ್ರ ಮಾತ್ರವಲ್ಲ, ಎಲ್ಲಾ ಇತರ ಕೈಗಾರಿಕಾ ಕ್ಷೇತ್ರಗಳಲ್ಲಿ ಆಧುನೀಕರಣಕ್ಕೆ, ದಕ್ಷತೆ ಹೆಚ್ಚಿಸುವ ತಂತ್ರಜ್ಞಾನದ ಬೆಳವಣಿಗೆಗೆ ಊರುಗೋಲು. ಈಗ ನಮ್ಮ ದೇಶದಲ್ಲಿ ಐಟಿ ರಂಗದ ವಾರ್ಷಿಕ ವಹಿವಾಟು 25 ಸಾವಿರ ಕೋಟಿ ರೂ: ನಷ್ಟು. ಇದರಲ್ಲಿ (ಸುಮಾರು ಅರ್ಧದಷ್ಟು) ಸಿಂಹಪಾಲು ಸ್ವಾಫ್ಟ್ ವೇರ್ ರಫ್ತಿನದ್ದು. ದೇಶದ ಐಟಿ ವಹಿವಾಟಿನಲ್ಲಿ ಸಿಂಹಪಾಲು ಕರ್ನಾಟಕದ್ದು. ಅದರಲ್ಲೂ ಹೆಚ್ಚು ಕಡಿಮೆ ಬೆಂಗಳೂರಿನದ್ದು. ಸಾಫ್ಟ್ ವೇರ್ ರಫ್ತು ಉದ್ಯಮ ಬೆಂಗಳೂರಿನಲ್ಲಿ 90 ರ ದಶಕದಲ್ಲಿ ನಾಗಾಲೋಟದಿಂದ ಸಾಗಿದೆ. 1991 ರಲ್ಲಿ 13 ಘಟಕಗಳು ಐದುವರೆ ಕೋಟಿ ರೂ. ರಫ್ತಿನಿಂದ ಆರಂಭಿಸಿ, ಈಗ 347 ಘಟಕಗಳು 3500 ಕೋಟಿ ರೂ. ಮೌಲ್ಯದ ರಫ್ತು ಮಾಡುತ್ತಿವೆ. ಐಟಿ ಉದ್ಯಮದಲ್ಲಿ ನಮ್ಮ ರಾಜ್ಯದಲ್ಲಿ 35 ಸಾವಿರ ಉದ್ಯೋಗಿಗಳು ಕೆಲಸ ಮಾಡುತ್ತಿದ್ದಾರೆ. ನಮ್ಮ ರಾಜ್ಯದ ಎಲ್ಲಾ ಸಣ್ಣ ಕೈಗಾರಿಕೆಗಳ ಒಟ್ಟು ವಹಿವಾಟ(ಸುಮಾರು 3300 ಕೋಟಿ ರೂ.) ಗಿಂತ ಇದು ಹೆಚ್ಚು ಎಂದಾಗ ಈ ಉದ್ಯಮದ ಗಾತ್ರದ ಬಗ್ಗೆ ಗೋಚರವಾಗುತ್ತದೆ. ಬೆಂಗಳೂರಿನಲ್ಲಿರುವ ಸಾರ್ವಜನಿಕ ಕ್ಷೇತ್ರದಲ್ಲಿರುವ ಕೇಂದ್ರೀಯ ಕೈಗಾರಿಕಾ ಘಟಕಗಳ ಒಟ್ಟು ವಹಿವಾಟು ಸುಮಾರು 3500 ಕೋಟಿ ರೂ. ಎಂದಾಗಲೂ ಈ ಉದ್ಯಮದ ಒಂದು ಚಿತ್ರಣ ಸಿಗುತ್ತದೆ.

'ಐಟಿ ಉದ್ಯಮ ಭಾರತಕ್ಕೆ ಹೇಳಿ ಮಾಡಿಸಿದ್ದು'

ಐಟಿ ಉದ್ಯಮ ದೇಶದ ಮಟ್ಟದಲ್ಲೂ ಭಾರಿ ವೇಗವಾಗಿ ಬೆಳೆದಿದೆ. ಉಳಿದ ಕೈಗಾರಿಕಾ ಕ್ಷೇತ್ರಗಳ ಬೆಳವಣಿಗೆ ದರ ವಾರ್ಷಿಕವಾಗಿ 5-10 ಶೇಕಡಾ ಇದ್ದರೆ, 90 ರ ಇಡೀ ದಶಕದಲ್ಲಿ ಸರಾಸರಿ ಶೇಕಡಾ 35 ರ ದರದಲ್ಲಿ ಬೆಳೆಯುತ್ತಿದೆ. ಅದರಲ್ಲೂ ಸಾಫ್ಟ್ ವೇರ್ ರಫ್ತು ಉದ್ಯಮ ಶೇಕಡಾ 50 ರ ದರದಲ್ಲಿ ಏರುತ್ತಿದೆ. ಪ್ರತಿ ಎರಡು ವರ್ಷಕ್ಕೊಮ್ಮೆ ಇಮ್ಮಡಿ ಯಾಗುತ್ತದೆ. ಇಂತಹ ನಾಗಾಲೋಟದ ಬೆಳವಣಿಗೆ, ವಿದೇಶಿ ವಿನಿಮಯ ಗಳಿಸುವ ಅಪಾರ ಸಾಧ್ಯತೆಯಿಂದ, ಮತ್ತು ಇತರ ಅನೇಕ ಕಾರಣಗಳಿಂದ ಐಟಿ ಉದ್ಯಮಕ್ಕೆ ಹಲವು ವರ್ಷಗಳಿಂದ ವಿಶೇಷ ಮಹತ್ವ, ಗಮನ ನೀಡಿದೆ -ಕೇಂದ್ರ ಮತ್ತು ರಾಜ್ಯ ಸರ್ಕಾರಗಳು. ಇತರ ಕೈಗಾರಿಕಾ ಕ್ಷೇತ್ರದಲ್ಲಿ ನಾವ ತಂತ್ರಜ್ಞಾನದಲ್ಲಿ ಹಿಂದೆ ಬಿದಿದ್ದೇವೆ. ಅಲ್ಲದೆ ಇತರ ಹೆಚ್ಚಿನ ಕ್ಷೇತ್ರದಲ್ಲಿ ಅಗಾಧ ಬಂಡವಾಳ, ವಿಶೇಷ ಸಾಮಗ್ರಿ, ಉಪಕರಣಗಳು, ಅದಕ್ಕೆ ಬೇಕಾದ ದೊಡ್ಡ ಮಾರುಕಟ್ಟೆಯಿಂದಾಗಿ ನಮಗೆ ರಫ್ತು ಮಾಡುವ ಪೈಪೋಟಿಯಲ್ಲಿ ವಿಶಿಷ್ಟ ಅವಕಾಶವಿಲ್ಲ. ಇವ್ಯಾವುದೂ ಐಟಿ ಕ್ಷೇತ್ರದಲ್ಲಿ ವಿಶಿಷ್ಟ ಅವಶ್ಯಕತೆಗಳಲ್ಲ. ಅಲ್ಲದೆ ಗಣಿತದಲ್ಲಿ ಯಾವಾಗಲೂ ಭಾರತೀಯರು ಮುಂದಿದ್ದರು. ಮಾನಸಿಕ ಶಕ್ತಿಯಲ್ಲಿ ಈಗಲೂ ಜಗತ್ತಿನಲ್ಲೇ ಗಟ್ಟಿಗರು. ಇವೆಲ್ಲಾ ಕಾರಣಗಳಿಂದ ಮಾಹಿತಿ ತಂತ್ರಜ್ಞಾನ ಅದರಲ್ಲೂ ಅದರ ಸಾರವಾದ ಸಾಫ್ಟ್ ವೇರ್‌ನಲ್ಲಿ ಭಾರತೀಯರು ಮೇಲುಗೈ ಸಾಧಿಸಬಹುದು ಎಂಬುದು ಸರ್ಕಾರಗಳ ಲೆಕ್ಕಾಚಾರ. ಐಟಿ ಕ್ಷೇತ್ರದಲ್ಲಿ ನಾಗಾಲೋಟದ ಬೆಳವಣಿಗೆ ಇದು ಬಹಳ ಮಟ್ಟಿಗೆ ನಿಜ ಎಂದೂ ತೋರಿಸಿದೆ. ಇದರರ್ಥ ಭಾರತ ಐಟಿ ಕ್ಷೇತ್ರದಲ್ಲಿ ನಂಬರ್ ಒನ್ ಅಂತಲ್ಲ. ಬೇರೆ ಕ್ಷೇತ್ರಗಳಿಗೆ ಹೋಲಿಸಿದರೆ ವಿಶೇಷ ಪ್ರಗತಿ ಸಾಧಿಸಿದೆ. ನಮ್ಮ ಐಟಿ ವಹಿವಾಟು ಜಗತ್ತಿನ ಐಟಿ ರಂಗದ ವಹಿವಾಟಿನ ಸುಮಾರು ಐನೂರರಲ್ಲಿ ಒಂದು ಭಾಗವಷ್ಟೆ. ಆದರೆ ಅಂತರ್‌ರಾಷ್ಟ್ರೀಯ ಸಾಫ್ಟ್‌ವೇರ್ ರಫ್ತಿನಲ್ಲಿ ಹತ್ತು ಅಗ್ರಣಿ ದೇಶಗಳಲ್ಲಿ ಒಂದೆಂದು ಹೆಸರು ಪಡೆದಿದೆ. ಮೂರನೇ ಜಗತ್ತಿನಲ್ಲೇ ಇಂಗ್ಲೀಷು ವ್ಯಾಪಕವಾಗಿ ಬಲ್ಲ ಇಂಜಿನಿಯರುಗಳು ನಮ್ಮ ದೇಶದಲ್ಲಿರುವುದು ಮತ್ತು ಐಟಿ ಕ್ಷೇತ್ರದಲ್ಲಿ ಇಂಗ್ಲೀಷಿಗೆ ಅಗ್ರಪಂಕ್ತಿ ಇರುವುದು ಭಾರತಕ್ಕೆ ಒಂದು ವರವಾಗಿದೆ.

ಐಟಿ ಡಾಟ್ ಕಾಮ್ 98 ರ 'ಬೆಂಗಳೂರು ಘೋಷಣೆ'

ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಸರಕಾರಗಳು ಐಟಿ ಉದ್ಯಮಕ್ಕೆ ಹಲವಾರು ಉತ್ತೇಜನಗಳು, ವಿಶೇಷ ಸವಲತ್ತುಗಳನ್ನು ನೀಡಿದೆ. ಇವುಗಳಿಂದ ಅಲ್ಲದೆ ಭಾರೀ ಬೆಳವಣಿಗೆಯ ದರ ವಿದೇಶಿ ವಿನಿಮಯದಲ್ಲಿ ಲಾಭಗಳಿಕೆ, ಭಾರಿ ಭಾರಿ ಲಾಭ ಗಳಿಕೆಯಿಂದ ಈ ಕ್ಷೇತ್ರಕ್ಕೆ ಭಾರಿ ದೇಶಿಯ ಹಾಗೂ ವಿದೇಶಿಯ ಖಾಸಗಿ ಬಂಡವಾಳ ಹರಿದು ಬಂದಿದೆ. ಐಟಿ ಉದ್ಯಮದ ಕ್ಷೇತ್ರದಲ್ಲಿ ಈವರೆಗೆ ಕಂಡಿರುವ ಈ ಸಫಲತೆಯನ್ನು ಮುಂದೆ ಕೊಂಡೊಯ್ಯಲು ರಾಜ್ಯ ಸರ್ಕಾರಗಳು ಪ್ರತ್ಯೇಕ ಐಟಿ ಖಾತೆಯನ್ನು ರಚಿಸಿವೆ. ನಮ್ಮ ರಾಜ್ಯ ದಲ್ಲೂ ಹಲವು ವರ್ಷಗಳಿಂದ ಪ್ರತ್ಯೇಕ ಐಟಿ ಖಾತೆ ಕೆಲಸ ಮಾಡುತ್ತಿದೆ. ಈ ವಾರ ನಡೆದ 'ಐಟಿ ಡಾಟ್-ಕಾಮ್' ಸಮ್ಮೇಳನವನ್ನು ಮುಖ್ಯವಾಗಿ ನಡೆಸುತ್ತಿರುವುದು ಈ ಖಾತೆಯೇ. ಕಳೆದ ವರ್ಷ ಮೊದಲ ಅಂತರ್‌ರಾಷ್ಟ್ರೀಯ ಸಮ್ಮೇಳನ ಮಾಡಿದ್ದು ಯಶಸ್ವಿಯಾಗಿತ್ತು. ಈ ಸಮ್ಮೇಳನದ ಭಾಗವಾಗಿ ನಡೆದ ಪ್ರದರ್ಶನದಲ್ಲಿ 15 ಸಾವಿರ ಉದ್ಯಮ ನಿರತರಾಗಿದ್ದರೂ ಸುಮಾರು ಒಂದುವರೆಲಕ್ಷ ಜನ ಪ್ರದರ್ಶನಗಳಿಗೆ ಭೇಟಿ ನೀಡಿದ್ದರು. ಈ ಸಮ್ಮೇಳನದಲ್ಲಿ ಐಟಿ ಕ್ಷೇತ್ರಕ್ಕೆ ಹೊಸ ಉತ್ಪನ್ನಗಳು, ತಾಂತ್ರಿಕ ಬೆಳವಣಿಗೆಗಳು ಅಲ್ಲದೆ ಐಟಿಗಿರುವ ಮತ್ತು ಸಾಮಾಜಿಕ-ಆರ್ಥಿಕ ಬೆಳವಣಿಗೆಗಿರುವ ಸಂಬಂಧ (ಅದೂ ಮೂರನೆ ಜಗತ್ತಿನ ಬೆಳೆಯುತ್ತಿರುವ ದೇಶಗಳ ಸಂದರ್ಭದಲ್ಲಿ) ಗಳ ಬಗೆಗೂ ಚರ್ಚೆ ನಡೆಯಿತು. 'ಬೆಳೆಯುತ್ತಿರುವ ದೇಶಗಳಿಗಾಗಿ ಐಟಿ' ಎಂಬ ಈಗ ಪ್ರಸಿದ್ಧವಾಗಿರುವ 'ಬೆಂಗಳೂರು ಘೋಷಣೆ'ಯನ್ನು ಅಂಗೀಕರಿಸಿತು. ಈ ಘೋಷಣೆ ಭಾರತದಲ್ಲಿ (ಎಲ್ಲಾ ಬೆಳೆಯುತ್ತಿರುವ ದೇಶಗಳಲ್ಲಿ) ಐಟಿ ಧೋರಣೆಯ ನ್ಯೂನತೆಗಳನ್ನು, ಅಪಾಯಗಳನ್ನು ಎತ್ತಿ ತೋರಿಸಿದು ಜನಪರವಾದ ಸರಿಯಾದ ನೀತಿಯನ್ನು ಪ್ರತಿಪಾದಿಸಿತ್ತು. ಆದರೆ ಈ ನೀತಿಗಳನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳ ಐಟಿ ನೀತಿಯಲ್ಲಿ ಇನ್ನೂ ಅಳವಡಿಸಿಲ್ಲ. ಬೇರೆ ಕ್ಷೇತ್ರಗಳನ್ನು ನಿರ್ಲಕ್ಷಿಸಿ ಐಟಿ ಕ್ಷೇತ್ರದಲ್ಲಿ ಸಂಪನ್ಮೂಲಗಳನ್ನು ಹೂಡುವುದು, ಈಗ ದೇಶ-ದೇಶಗಳ ನಡುವೆ, ದೇಶದೊಳಗೆ ವರ್ಗಗಳ ನಡುವೆ ಇರುವ ಅಸಮಾನತೆಗಳನ್ನು ಗಟ್ಟಿಗೊಳಿಸುವ ಇನ್ನಷ್ಟು ಹೆಚ್ಚಿಸುವ ಅಪಾಯದ ಬಗ್ಗೆ ಜಾಗ್ರತೆ, ಇಂಗ್ಲೀಷ್-ಪಾಶ್ಚಿಮಾತ್ಯ ಪದ್ಧತಿ ಆಧಾರಿತ ಐಟಿಯನ್ನು ಕಣ್ಣುಮುಚ್ಚಿ ಸ್ವೀಕರಿಸುವುದರಿಂದ ಸಾಂಸ್ಕೃತಿಕ ಭಾಷಾ ವೈವಿಧ್ಯತೆಗೆ ಅಪಾಯದ ಬಗ್ಗೆ ಜಾಗ್ರತೆ, ಐಟಿಯ ಸಾಧಕ-ಭಾಧಕ, ಲಾಭ-ನಷ್ಟಗಳನ್ನು ಜಾಗ್ರತೆಯಿಂದ ಪರಿಶೀಲಿಸುವ ಇತ್ಯಾದಿಗಳ ಬಗ್ಗೆ ಘೋಷಣೆ ಗಮನ ಸೆಳೆದಿತ್ತು. ಅದೆ ಸಮಯದಲ್ಲಿ ಐಟಿ ಜನರ ಜೀವನ ಮಟ್ಟ, ಗುಣಮಟ್ಟ ವಿಸ್ತರಿಸಲು ಇರುವ ಚಾರಿತ್ರಿಕ ಅವಕಾಶ ಅದನ್ನು ಮುತು ವರ್ಜಿಯಿಂದ ಬಳಸಬೇಕೆಂದೂ ಘೋಷಣೆ ಹೇಳಿತ್ತು.

ಐಟಿ ರಂಗದ ದೌರ್ಬಲ್ಯಗಳು

ಭಾರತದ, ಕರ್ನಾಟಕದ ಐಟಿ ಕೈಗಾರಿಕೆ ಉತ್ತಮ ಬೆಳವಣಿಗೆ ಸಾಧಿಸಿದ್ದರ ಜತೆಗೆ ತೀವ್ರ ದೌರ್ಬಲ್ಯಗಳಿಂದ, ನ್ಯೂನತೆಗಳಿಂದ ಬಾಧಿತವಾಗಿದೆ. ಕಳೆದ ಒಂದು ವರ್ಷದಿಂದ ಕರ್ನಾಟಕದ ಐಟಿ ರಂಗ ಸ್ಥಗಿತವಾಗಿದ ಹೆಚ್ಚು ಐಟಿ ಉದ್ಯಮಿಗಳು ಹೈದರಾಬಾದಿಗೆ ವಲಸ ಹೋಗುತ್ತಿದ್ದಾರೆ ಎಂದೆಲ್ಲಾ ಗುಲ್ಲೆದ್ದಿತ್ತು. ಆಂಧ್ರ ಪ್ರದೇಶದ ಚಂದ್ರಬಾಬು ನಾಯ್ಡು ಸರ್ಕಾರ ಆಕ್ರಮ ರೀತಿಯಲ್ಲಿ ಐಟಿ ಉದ್ಯಮಕ್ಕೆ ಉತ್ತೇಜನ ನೀಡಲು ಉದ್ಯಮಿಗಳನ್ನು ಆಕರ್ಷಿಸಲು ಕ್ರಮ ಕೈಗೊಳ್ಳುತ್ತಿದ್ದಾರ ಪಟೇಲರ ಸರ್ಕಾರ ಇತರ ಎಲ್ಲಾ ಕ್ಷೇತ್ರಕ್ಕಿಂತ ಕ್ಷೇತ್ರದಲ್ಲೂ 'ಚುರುಕಿ'ನ ಕೆಲಸ ಮಾಡುತ್ತಿಲ್ಲವಾದ್ದರಿ ಈ ಗುಲ್ಲು ಎದ್ದಿತು. ಐಟಿ ಕ್ಷೇತ್ರದ ಪ್ರಸಿದ್ಧ ಜಾಗತಿಕ ಸಾಫ್ಟ್‌ವೇರ್ ಕಂಪನಿ ಮೈಕ್ರೋಸಾಫ್ಟ್ ತ ಇಂಡಿಯಾ ಸಂಶೋಧನಾ ಕೇಂದ್ರಕ್ಕೆ ಬೆಂಗಳೂರ ಪರಿಶೀಲಿಸಿ, ಆಮೇಲೆ ಹೈದ್ರಾಬಾದಿಗೆ ಅದನ ಬದಲಿಸಿದ್ದು ಈ ಗುಲ್ಲಿಗೆ ತತ್‌ಕ್ಷಣದ ಕಾರಣವಾಗಿತ್ತು ಆದರೆ ಆಂಧ್ರಪ್ರದೇಶದ ಐಟಿ ವಹಿವಾಟು ಇ ಸುಮಾರು 700 ಕೋಟಿ ರೂ. ಆಗಿದ್ದು, ಕರ್ನಾಟ ಕಳೆದ ವರ್ಷದಂತೆ ಈ ವರ್ಷವೂ ಸುಮಾರು ಅದ ಐದು ಪಟ್ಟು (ಅಂದರೆ 3500 ಕೋಟಿ ರೂ ವಹಿವಾಟು ಸಾಧಿಸಿದೆ. ಒಂದು ವೇಳೆ ಆಂಧ್ರಪ್ರದೇ ಹೆಚ್ಚಿನ ಬೆಳವಣಿಗೆ ದರ ಸಾಧಿಸಿ, ಕರ್ನಾಟಕ ವಹಿವಾಟಿಗೆ ಸಮಾನ ಬಂದರೆ ಅದನ್ನೇ ಒಂದು ದೋ ದೌರ್ಬಲ್ಯ, ನ್ಯೂನತೆ ಎಂದು ತಿಳಿಯಬೇಕಾಗಿಲ್ಲ. ಆ ಭಾರತದ, ಕರ್ನಾಟಕದ ಐಟಿ ರಂಗದ ನಿಜವಾ ದೌರ್ಬಲ್ಯಗಳೆಂದರೆ - ಬರಿಯ ರಫ್ತಿಗೆ ಹೆಚ್ಚಿರುವ ಒ ನಮ್ಮದೇ ಆದ ಸಾಫ್ಟ್‌ವೇರ್ ಉತ್ಪನ್ನಗಳ ಬದ ಪಾಶ್ಚಿಮಾತ್ಯ ಕಂಪನಿಗಳ ಅವಶ್ಯಕತೆ ಪೂರೈಸುವು ಹೆಚ್ಚು ಸೀಮಿತವಾಗಿರುವುದು, ಭಾರತದ ಕೈಗಾ ಯಲ್ಲಿ, ಸಾಮಾಜಿಕ ಬೆಳವಣಿಗೆಗೆ ಐಟಿ ಬಳಕೆಯ ಮಂದ ಪ್ರಗತಿ, ನಮ್ಮದೇ ಐಟಿ ಉತ್ಪನ್ನಗಳ ಅವಶ್ಯ ಗಳನ್ನು ಪೂರೈಸುವ ಕಡೆ ನಿರ್ಲಕ್ಷ.(ವಿವರಗಳಿಗೆ 'ಸಾ

'ಸಿಲಿಕಾನ್ ಕಣಿವೆ' ಎಂದರೇನು?

ಸಿಲಿಕಾನ್ ಇಲೆಕ್ಟಾನಿಕ್ಸ್ ಬಿಡಿಭಾಗಗಳ ತಯಾರಿಯಲ್ಲಿ ಬಳಸುವ ಪ್ರಮುಖ ಮೂಲವಸ್ತು. ಸಿಲಿಕಾನ್ ಮರಳಲ್ಲಿ ಹೇರಳವಾಗಿರುವ ಮೂಲವಸ್ತು. ಅಮೆರಿಕದಲ್ಲಿ ಇಲೆಕ್ಟಾನಿಕ್ಸ್, ಐ.ಟಿ. ಕೈಗಾರಿಕೆ ಬೆಳೆದದ್ದು ಅಮೆರಿಕದ ಪಶ್ಚಿಮ ಕರಾವಳಿಯಲ್ಲಿ ಸಾನ್‌ಫ್ರಾನ್ಸಿಸ್ಕೋ ಸುತ್ತಮುತ್ತ ಇರುವ ಕಣಿವೆ ಪ್ರದೇಶದಲ್ಲಿ. ಈ ಪ್ರದೇಶಕ್ಕೆ 'ಸಿಲಿಕಾನ್ ಕಣಿವೆ' ಎಂದು ಅಡ್ಡ ಹೆಸರು ಬಿದ್ದಿದೆ. ಅದೇ ರೀತಿ ಬೆಂಗಳೂರಲ್ಲಿ ಕೇಂದ್ರವಾಗಿ ಐಟಿ ಕೈಗಾರಿಕೆ ಬೆಳೆದಿರುವುದರಿಂದ ಬೆಂಗಳೂರನ್ನು 'ಭಾರತದ ಸಿಲಿಕಾನ್ ಕಣಿವೆ' ಎನ್ನುತ್ತಾರೆ.



ಬೆಂಗಳೂರಲ್ಲೇ ಐಟಿ ಬೆಳೆದದ್ದು ಯಾಕೆ?

ಬಹಳ ಜನ ಸರ್ಕಾರದ ಉತ್ತೇಜನ ನೀಡುವ ವಿಶೇಷ ನೀತಿಯಿಂದ, ವಿದೇಶಿಯರಿಗೆ ಬೆಂಗಳೂರು ಹವಾಮಾನ ಇಷ್ಟವಾಗಿ ಬಂಡವಾಳ ಹೂಡಿದ್ದರಿಂದ ಎಂದು ಹೇಳುತ್ತಾರೆ. ಇದು ಯಾವುದು ನಿಜವಲ್ಲ. ಬೆಂಗಳೂರಿನಲ್ಲಿ ಐಟಿ ಬೆಳೆದದ್ದು ಇಲ್ಲಿ ಕೇಂದ್ರೀಕೃತವಾಗಿದ್ದ ಇಲೆಕ್ಟ್ರಾನಿಕ್ಸ್, ದೂರಸಂಪರ್ಕ, ವೈಮಾನಿಕ, ಮಶೀನ್ ಟೂಲ್, ಸಂಶೋಧನಾ ಸಂಸ್ಥೆಗಳು - ಇತ್ಯಾದಿಗಳಲ್ಲಿ ಐಟಿಯನ್ನು ದೊಡ್ಡ ಪ್ರಮಾಣದಲ್ಲಿ ಬಳಸಿ ಉಂಟಾದ ಅನುಭವ, ಪರಿಣತಿ ಲಭ್ಯವಿದ್ದದ್ದು. ಅಲ್ಲದೆ ಉತ್ತಮ ತರಬೇತಿ ಪಡೆದ ಇಂಜಿನಿಯರುಗಳು, ವಿಜ್ಞಾನಿಗಳು ಇಲ್ಲಿ ಲಭ್ಯವಿದ್ದದ್ದು - ಇವು ಮುಖ್ಯ ಕಾರಣಗಳು. 60-70 ರ ದಶಕದಲ್ಲಿ ನಡೆದ ಸ್ವಾವಲಂಬನೆ-ಆಧಾರಿತ ಕೈಗಾರಿಕೆ-ವಿಜ್ಞಾನ ಬೆಳವಣಿಗೆ ಸಾರ್ವಜನಿಕ ಉದ್ಯಮ ಪ್ರಧಾನವಾದ ಆರ್ಥಿಕ್ಕ ನೀತಿ ಈಗಿನ ಐಟಿ ಬೆಳವಣಿಗೆಗೆ ಆಧಾರ ಶಿಲೆ. ಇನ್ನೊಂದು ರೀತಿಯಲ್ಲಿ ಹೇಳುವು ದಾದರೆ ಸಾರ್ವಜನಿಕ ಕ್ಷೇತ್ರದ ಕಂಪನಿಗಳ, ಸರ್ಕಾರಿ ವೈಜ್ಞಾನಿಕ ಸಂಶೋಧನಾ ಸಂಸ್ಥೆಗಳು ಉತ್ತೇಜನ ನೀಡಿದ 'ಯೋಜಿತ ಸ್ವಾವಲಂಬನೆ- ಆಧಾರಿತ ನೀತಿ' ಯೇ ಇಂದಿನ ಬೆಳವಣಿಗೆಗೆ ಆಧಾರ. ಜಾಗತೀಕರಣ-ವಿದೇಶಿ ಬಂಡವಾಳ ಖಾಸಗೀಕರಣದ ಮೇಲೆ ಆಧಾರಿತವಾದ ಈಗಿನ ಶರಣಾಗತಿಯ ಆರ್ಥಿಕ ನೀತಿ ಈಗಿನ ನೀತಿ ಅಲ್ಲ.

ಬೆಂಗಳೂರಿನ ಈ ಐಟಿ ಕ್ಷೇತ್ರದ ನಾಗಾಲೋ ಕೆಲವು ಹಂತಗಳಲ್ಲಿ ಇದು 3-4 ಪಟ್ಟಿದೆ. ಒಬ್ಬ ಅಸಮಾನತೆಗೆ ಕಾರಣವಾಗಿದೆ. ಭಾರತದಲ್ಲಿ ಸ ಮನಸ್ಸಿನ ಪ್ರಯತ್ನಗಳಾದರೂ ನಡೆಯುತ್ತಿತ್ತು. ಕಂಪ್ಯೂಟರ್ ಸಾಕ್ಷರತೆ ಅಸಮಾನತೆಯನ್ನು ಸೃ ಅಧ್ಯಯನ, ಸಂಶೋಧನೆ, ಕೆಲಸ ಮಾಡಲು ನ ಇವರನ್ನು ಸೆಳೆದುಕೊಳ್ಳುತ್ತಿದ್ದಾರೆ. ಇದು ಇತರ ಕ್ಷೇತ್ರ ಬೆಳವಣಿಗೆಗೆ ದಾರಿ ಮಾಡಿಕೊಟ್ಟಿದೆ.

ಭಾರಿ ವಿದೇಶಿ ಬಂಡವಾಳ, ಅಮೆರಿಕೆಗೆ ಸಂಸ್ಕೃತಿ ತಾಂಡವವಾಡುತ್ತಿದೆ. ಕೋರಮಂಗಲ, ಹೆಣ್ಣಿಗೆ ಅಗ್ರ ಪಂಕ್ತಿ.

ಇದರಿಂದ ಐಟಿ ರಂಗಕ್ಕೆ ಕಾಲಿಡಲು ನೂ ಗುಣಮಟ್ಟದ್ದಾಗಿದ್ದು ಜನರನ್ನು ಸುಲಿಯುತ್ತದೆ. ಪಡೆದು ಕೆಲಸ ಇಲ್ಲದೆ ಮನೆಯಲ್ಲಿ ಕೂತಿದ್ದಾರೆ

ಹೀಗೆ ಪ್ರಶಾಂತ 'ಬೆಂಗಳೂರ'ಲ್ಲಿ 'ಸಿಲಿಕಾ

T.COM 99

ರ್ 1 ರಿಂದ 5 ರ ವರೆಗೆ ಬೆಂಗಳೂರಲ್ಲಿ ನಡೆದ ಂಗಳೂರು ಹಿಂದೆ ಭಾರತದ ವಿಜ್ಞಾನ ಮತ್ತು ತಂತ್ರಜ್ಞಾನದ ರಾಜಧಾನಿ ಎಂದು ಹೆಸರಾಗಿದೆ. ಲೆಸಿರುವ ಇನ್ ಫೋಸಿಸ್ ಎಂಬ ಮಾಹಿತಿ ದಲ ಕಂಪನಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಟಕದಿಂದ ಆಗುತ್ತಿದೆ.

ಂಗಳೂರಿನ, ಕರ್ನಾಟಕದ ಇವೆಲ್ಲ ಹೆಗ್ಗಳಿಕೆಗಳು ಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ' ಯಂತೆ ಬರಿ ಂತ್ರಜ್ಞಾನದ ಪಾತ್ರ ವೇನು? ಇವೆಲ್ಲಾ ಪ್ರಶ್ನೆಗಳಿಗೆ

ಶರತ್‌ಚಂದ್ರ.




ಜಾಗತಿಕ ಐಟಿ ಕೂಲಿಗಳಾಗಬಾರದು' - ಬಾಕ್ಸ್ ನೋಡಿ) ಕರ್ನಾಟಕದಲ್ಲಿ, ಬೆಂಗಳೂರಿನಲ್ಲಿ ಐಟಿ ವೇಗವಾಗಿ ಬೆಳೆದದ್ದು, ದೇಶದ ಐಟಿ ವಹಿವಾಟಿನಲ್ಲಿ ಸಿಂಹಪಾಲೇ, ಒಟ್ಟಾರೆ ದೇಶದ ಐಟಿ ಬೆಳವಣಿಗೆಯಲ್ಲಿ ನ್ಯೂನತೆ ಎಂದು ಹೇಳಬಹುದು. ಕರ್ನಾಟಕದಲ್ಲಿ ಐಟಿಯ ಸಫಲತೆಗೆ ಕಾರಣ ಕಂಡು ಹಿಡಿದು ಅದನ್ನು ಇತರೆಡೆಗೆ ಮುಂದಿನ ಬೆಳವಣಿಗೆಗೆ ಬಳಸಬೇಕು. ('ಐಟಿಯ ನಾಗಾಲೋಟದ ಬೆಳವಣಿಗೆ ಬೆಂಗಳೂರಲ್ಲೇ ಏಕೆ? - ಬಾಕ್ಸ್ ನೋಡಿ)

'ಬೆಂಗಳೂರ'ಲ್ಲಿ ಧೂಳೆಬ್ಬಿಸಿದ 'ಸಿಲಿಕಾನ್ ಕಣಿವೆ'

ಕರ್ನಾಟಕದಲ್ಲಿ ಅದರಲ್ಲೂ ಬೆಂಗಳೂರಿಗೆ ಐಟಿಯ ನಾಗಾಲೋಟದ ಬೆಳವಣಿಗೆ ಬರಿಯ ವರವಾಗಿಲ್ಲ. ಸ್ವಲ್ಪ ಶಾಪವೂ ತಟ್ಟಿದೆ. ಐಟಿ ಕೈಗಾರಿಕೆಯು ವಿಪರೀತ ಬೆಳವಣಿಗೆಯಿಂದ ಬೆಂಗಳೂರಲ್ಲಿ ಹಿಂದೆ ನೆಲೆಸಿದ್ದ ಇಲೆಕ್ಟ್ರಾನಿಕ್ಸ್, ದೂರಸಂಪರ್ಕ ಇತ್ಯಾದಿ ಉಚ್ಚ ತಂತ್ರಜ್ಞಾನದ (ಅದರಲ್ಲೂ ದೇಶದ ಅಗತ್ಯಗಳನ್ನು ಪೂರೈಸುತ್ತಿದ್ದ) ಉದ್ಯಮಗಳಿಗೆ ತೀವ್ರ ದುಷ್ಪರಿಣಾಮ ಉಂಟಾಗಿದೆ. ಐಟಿ ಉದ್ಯಮಿಗಳು ಉಚ್ಚ ತಂತ್ರಜ್ಞಾನ ದಲ್ಲಿ ಈಗಾಗಲೇ ಕೆಲಸ ಮಾಡುತ್ತಿದ್ದ ಬಿಇಎಲ್, ಐಟಿಐ, ಸಿ-ಡಾಟ್, ಎಲ್ಆರ್‌ಡಿಇ, ಎಚ್.ಎ.ಎಲ್, ಇಸ್ರೋ ನಂತಹ ಸಂಸ್ಥೆಗಳಿಂದಲೇ ಅನುಭವಿ, ನಿಪುಣ ವಿಜ್ಞಾನಿ, ಇಂಜಿನಿಯರುಗಳನ್ನು ಕಸಿದುಕೊಂಡಿದ್ದಾರೆ. ಐಟಿಕ್ಷೇತ್ರದಲ್ಲಿ ಇಂಜಿನಿಯರುಗಳ ವೇತನ ಇತರ ಸಂಸ್ಥೆಗಳಿಗಿಂತ ಭಾರಿ ಹೆಚ್ಚಿದ್ದು ಈ ವಿಕೃತಿ ಉಂಟಾಗಿದೆ. ಇತರ ಕ್ಷೇತ್ರಗಳಿಗೆ ಸರ್ಕಾರದ ನಿರ್ಲಕ್ಷ್ಯ, ಕ್ಷೇತ್ರಗಳ ನಡುವೆ ಹೆಚ್ಚಿರುವ ಅಸಮಾನತೆ, ಅದು ಉಂಟು ಮಾಡಿರುವ ಸಾಮಾಜಿಕ ಪರಿಣಾಮಗಳು, ಐಟಿಯ ಮೂಲಕ ಹೆಚ್ಚಿರುವ ಪಾಶ್ಚಿಮಾತ್ಯ- ಪ್ರಭಾವದಿಂದ ಉಂಟಾಗಿರುವ ಅನಾರೋಗ್ಯಕರ ಸಾಮಾಜಿಕ ಬೆಳವಣಿಗೆಗಳು - ಇವು ಇತರ ಕೆಲವು ಪರಿಣಾಮ ಗಳು. ಒಟ್ಟಾರೆಯಾಗಿ ವಿದೇಶಿ 'ಸಿಲಿಕಾನ್ ಕಣಿವೆ' ಸ್ವದೇಶಿ 'ಬೆಂಗಳೂರ'ಲ್ಲಿ ಧೂಳೆಬ್ಬಿಸಿದೆ.

ಐಟಿ-ಡಾಟ್-ಕಾಮ್ 99 - ಏನಿದು ವಿಚಿತ್ರ ಹೆಸರು?

ಕಂಪ್ಯೂಟರ್‌ಗಳ ವಿಶ್ವವ್ಯಾಪಿ ಜಾಲಕ್ಕೆ ಇಂಟರ್‌ನೆಟ್ ಎನ್ನುತ್ತಾರೆ. ಇಂಟರ್‌ನೆಟ್‌ನಲ್ಲಿ ಯಾರಾದರೂ ತಮ್ಮಲ್ಲಿ ಇರುವ ಮಾಹಿತಿಯನ್ನು ತಮ್ಮ ಕಂಪ್ಯೂಟರ್‌ನಲ್ಲಿ ಇಟ್ಟರೆ ಸಾಕು. ಇಂಟರ್‌ನೆಟ್ ಮೇಲೆ ಇರುವ ಇತರ ಕಂಪ್ಯೂಟರ್ ಹೊಂದಿರುವವರು ಅದನ್ನು ಓದಬಹುದು. ಅವರ ಕಂಪ್ಯೂಟರ್‌ಗೆ ವರ್ಗಾಯಿಸಬಹುದು. ಇಂತಹ ಮಾಹಿತಿ ಇರುವ ಕಂಪ್ಯೂಟರ್‌ಗಳಿಗೆ 'ವೆಬ್ ಸೈಟು' ಎನ್ನುತ್ತಾರೆ. ಪ್ರತಿ ವೆಬ್‌ಸೈಟಿಗೆ ಒಂದು ಅಡ್ರೆಸ್ ಇರುತ್ತದೆ. ಉದಾಹರಣೆಗೆ ಡೆಕ್ಕನ್ ಹೆರಾಲ್ಡ್‌ನ ವೆಬ್ ಸೈಟ್‌ನ ಅಡ್ರೆಸ್ www. deccanharald. com(ಡಬ್ಲ್ಯು.ಡಬ್ಲ್ಯು. ಡಬ್ಲ್ಯು-ಡಾಟ್. ಡೆಕ್ಕನ್‌ಹೆರಾಲ್ಡ್-ಡಾಟ್-ಕಾಮ್)ಅಂತ. ಸಿಪಿಐ(ಎಂ)ನ ಪಶ್ಚಿಮ ಬಂಗಾಳದ ರಾಜ್ಯಸಮಿತಿಯ ದಿನಪತ್ರಿಕೆ ಗಣಶಕ್ತಿಯ ವೆಬ್‌ಸೈಟ್‌ನ ಅಡ್ರೆಸ್ www. ganashakti.com (ಡಬ್ಲ್ಯು.ಡಬ್ಲ್ಯು. ಡಬ್ಲ್ಯು-ಡಾಟ್-ಕಾಂ). ಸಾಮಾನ್ಯವಾಗಿ ಕಮರ್ಶಿಯಲ್ ವೆಬ್‌ಸೈಟ್‌ನ ಅಡ್ರೆಸ್‌ಗಳು ಡಾಟ್-ಕಾಮ್‌ನಿಂದ ಕೊನೆಯಾಗುತ್ತದೆ. ಇಂಟರ್‌ನೆಟ್ ಐಟಿ ಕ್ಷೇತ್ರದ ಅತ್ಯಂತ ಹೊಸ ಮತ್ತು ಉನ್ನತ ಅವಿಷ್ಕಾರವಾದ್ದರಿಂದ ವಿಶ್ವ ಸಮ್ಮೇಳನಕ್ಕೆ ಈ ರೀತಿ ಹೆಸರನ್ನಿಡಲಾಗಿದೆ.



ಐ.ಟಿ. ತಂತ್ರಜ್ಞಾನ ಯಾರಿಗಾಗಿ?

ಐ.ಟಿ. ಡಾಟ್ ಕಾಮ್ 98 ಎಂಬ ವಿಶ್ವ ಸಮ್ಮೇಳನ ಪ್ರಥಮ ಬಾರಿಗೆ ಬೆಂಗಳೂರಿನಲ್ಲಿ ನಡೆದಾಗ ಅಂಗೀಕಾರವಾದ ಬೆಂಗಳೂರು ಘೋಷಣೆ ಮೂರನೇ ಜಗತ್ತಿನ ಬಡ ದೇಶಗಳಲ್ಲಿ ಬೆಳವಣಿಗೆಯ ಇಂಜಿನ್ ಆಗಿ ಇತರ ಕ್ಷೇತ್ರಗಳ ದಕ್ಷತೆ, ಮಾಹಿತಿ ವ್ಯಾಪಕವಾಗಿ ಹಂಚುವ ಸಾಧನವಾಗಿ ಐಟಿಯ ವ್ಯಾಪಕ ಮತ್ತು ಸರಿಯಾದ ಬಳಕೆಗೆ ಕರೆ ನೀಡುತ್ತಾ ಈ ಕೆಳಗಿನ ಎಚ್ಚರಿಕೆಗಳನ್ನು ನೀಡಿದೆ.

- *ಸಾಫ್ಟ್‌ವೇರ್ ರಫ್ತು ಹೆಚ್ಚಿಸುವುದು ಒಂದೇ ಐಟಿ ನೀತಿಯ ಏಕಮಾತ್ರ ಸೂತ್ರವಾಗಿರಬಾರದು. ದೇಶವ್ಯಾಪಿ ಮಾಹಿತಿ ಜಾಲ, ಮಾಹಿತಿಯ ಸಂಗ್ರಹ, ವಿತರಣೆಗೆ ಆದ್ಯತೆ ನೀಡಬೇಕು.*
- *ಐ.ಟಿ. ಪಾಶ್ಚಿಮಾತ್ಯ ದೇಶಗಳ ಮಾಡೆಲ್‌ನಲ್ಲಿ ಕಣ್ಣುಮುಚ್ಚಿ ಬಳಸಿದರೆ ಈಗಾಗಲೇ ಇರುವ ಅಸಮಾನತೆಗಳನ್ನು ಇನ್ನಷ್ಟು ಹೆಚ್ಚಿಸುವ ಅಪಾಯವಿದೆ.*
- *ಐಟಿ ಕ್ಷೇತ್ರದಲ್ಲಿ ಬೇಕಾದ ಉಪಕರಣಗಳ ಭಾರಿ ಆಮದಿಗೆ ಇಳಿದು ಒಟ್ಟಾರೆ ಸಾಲದ ಕೂಪದಲ್ಲಿ ಬೀಳುವ ಅಪಾಯವಿದೆ.*
- *ಐಟಿ ಕ್ಷೇತ್ರಕ್ಕೆ ಆದ್ಯತೆ ಕೊಡುವ ಗುಂಗಿನಲ್ಲಿ ಇತರ ಕೈಗಾರಿಕಾ ಕ್ಷೇತ್ರಗಳನ್ನು ಆಹಾರ, ಮನೆ, ಆರೋಗ್ಯ, ಬಟ್ಟೆಯ ಮೂಲಭೂತ ಅವಶ್ಯಕತೆಗಳಿಗೆ ಬೇಕಾದ ಸಂಪನ್ಮೂಲಗಳ ತೆಗೆದಿಡುವುದನ್ನು ನಿರ್ಲಕ್ಷಿಸಬಾರದು.*
- *ಸ್ಥಳೀಯ ಭಾಷೆಯಲ್ಲಿ ಐಟಿ ಬೆಳವಣಿಗೆಗೆ ವಿಶೇಷ ಗಮನ ಕೊಡಬೇಕು.*
- *ಸಾಕ್ಷರತೆಗೆ, ಮೂಲ ಶಿಕ್ಷಣಕ್ಕೆ ಆದ್ಯತೆ ನೀಡುತ್ತಾ ವ್ಯಾಪಕಗೊಳಿಸುವುದರ ಜೊತೆಗೆ ಐಟಿಯ ಬಗ್ಗೆ ಮೂಲಭೂತ ಅರಿವು ಮೂಡಿಸುವ ಮತ್ತು ಐಟಿಗೆ ಬೇಕಾದ ತರಬೇತಿ ಪಡೆದ ಜನ ತಯಾರಿಸುವ ಶಿಕ್ಷಣಕ್ಕೆ ವಿಶೇಷ ಮುತುವರ್ಜಿ ವಹಿಸಬೇಕು.*

ಕರ್ನಾಟಕ ಮತ್ತು ದೇಶದ ಐಟಿ ನೀತಿ ಈ ಎಲ್ಲಾ ಅಪಾಯಗಳಿಂದ ಮುಕ್ತವಾಗಿಲ್ಲ. ಇಲ್ಲಿ ಹೇಳಿರುವ ಎಚ್ಚರಿಕೆಗೆ ಕಿವಿಗೊಡದೆ ಅಲ್ಲಿ ಹೇಳಿರುವ ಅಪಾಯಗಳಿಗೆ ಗುರಿ ಮಾಡಿದೆ. ಉದಾಹರಣೆಗೆ 35 ಸಾವಿರ ಮಾತ್ರ ಉದ್ಯೋಗ ಸೃಷ್ಟಿಸುವ 3500 ಕೋಟಿ ರೂ. ಸಾಫ್ಟ್‌ವೇರ್ ರಫ್ತು ಉದ್ಯಮಕ್ಕೆ ಸವಲತ್ತುಗಳ ಸುರಿಮಳೆ. ಸುಮಾರು ಅಷ್ಟೇ ವಹಿವಾಟು ಇರುವ ಆದರೆ ಸುಮಾರು 13ವರೆ ಲಕ್ಷ ಕಾರ್ಮಿಕರಿಗೆ ಉದ್ಯೋಗ ಕೊಡುವ ಸಣ್ಣ ಕೈಗಾರಿಕೆಗಳ ಸಮಸ್ಯೆಗಳಿಗೆ ರಾಜ್ಯ ಸರ್ಕಾರ ಕುರುಡಾಗಿದೆ. ಸಣ್ಣ ಪ್ರಮಾಣದ ಕೈಗಾರಿಕೆಗಳು ದೊಡ್ಡ ಪ್ರಮಾಣದಲ್ಲಿ ಮುಚ್ಚುತ್ತಿವೆ. ಇದನ್ನು ತಡೆಯಲು ಸರ್ಕಾರದ ಬಳಿ ಯಾವುದೇ ಕಾರ್ಯಕ್ರಮವಿಲ್ಲ. ಈವರೆಗೆ ಕನ್ನಡವನ್ನು ಐಟಿ ಕ್ಷೇತ್ರದಲ್ಲಿ ದೊಡ್ಡ ರೀತಿಯಲ್ಲಿ ಬಳಸುವುದರಲ್ಲಿ ಉತ್ತೇಜನ ನೀಡುವುದರಲ್ಲಿ ಸೋತಿದೆ. ಆ ಕಾರಣ ಇಂಗ್ಲೀಷ್‌ನ ಪ್ರಭಾವ ಇನ್ನಷ್ಟು ಹೆಚ್ಚಿದೆ. ಐಟಿಗೆ ಅವಕಾಶ ಬಡವರಿಗೆ ತೀರಾ ಇಲ್ಲ ಎನ್ನುವಷ್ಟು ಕಡಿಮೆ. ಕಂಪ್ಯೂಟರ್ ಉಳ್ಳವರು ಮತ್ತು ಇಲ್ಲದವರ ನಡುವೆ ಅಸಮಾನತೆ ಇನ್ನಷ್ಟು ಹೆಚ್ಚಿದೆ.

ಐಟಿಗೆ ವಿಪರೀತ ಆದ್ಯತೆ, ಇತರ ಕ್ಷೇತ್ರಗಳ ಬಗ್ಗೆ ಅಸಡ್ಡೆ, ನಿರ್ಲಕ್ಷ್ಯ ಇದೆ. ರಫ್ತಿನ ಬಗ್ಗೆ ಮಾತ್ರ ಕಾಳಜಿ ಇರುವ, ತಂತ್ರಜ್ಞಾನ-ಆಮದು ಬಂಡವಾಳದ ಮೇಲೆ ಆಧಾರಿತ ದೇಶದ ಮೇಲ್ಪಟ್ಟದ ಶೇಕಡಾ 5-10 ಜನರ ಅವಶ್ಯಕತೆ ಮಾತ್ರ ಪೂರೈಸುವ ಐಟಿ ನೀತಿಗಳು ಜನ-ವಿರೋಧಿ ಆರ್ಥಿಕ ನೀತಿಯ ಪ್ರಮುಖ ಭಾಗ. ಇದನ್ನು ಬದಲಾಯಿಸದೆ ಐಟಿಯ ಸಾಧ್ಯತೆಗಳನ್ನು ನಾವು ಬಳಸುವುದು ಅಸಾಧ್ಯ.

'ನಾವು ಜಾಗತಿಕ ಐಟಿ ಕೂಲಿಗಳಾಗಬಾರದು'

ಐಟಿ ಬಗ್ಗೆ ನಡೆದ ಸಮ್ಮೇಳನವೊಂದರಲ್ಲಿ ಒಬ್ಬರು ಸಮಾಜ ವಿಜ್ಞಾನಿಗಳು ಹೇಳಿದ್ದರು. 'ನಾವು ಬರಿಯ ಜಾಗತಿಕ ಐಟಿ ಕೂಲಿಗಳಾಗಬಾರದು'. ಐಟಿಗೂ, ಕಟ್ಟಡ ಕಟ್ಟುವ ಕೈಗಾರಿಕೆಗೂ ಹೋಲಿಸುತ್ತಾ. ಅವಶ್ಯಕತೆ, ವಿನ್ಯಾಸ, ವಿನ್ಯಾಸದ ಜಾರಿ, ಪರೀಕ್ಷಣೆ, ಉಸ್ತುವಾರಿ ಇದು ಸಾಫ್ಟ್‌ವೇರ್ ಉತ್ಪನ್ನದ ಹಂತಗಳು. ಇದು ಕಟ್ಟಡ ಕೈಗಾರಿಕೆಯಲ್ಲಿ ಮನೆಯ ಪ್ಲಾನು, ಇಂಜಿನಿಯರಿಂಗ್ ಡ್ರಾಯಿಂಗ್ಸ್, ಕಟ್ಟುವ ಕೂಲಿ ಕೆಲಸ, ತಪಾಸಣೆ, ಉಸ್ತುವಾರಿ ಇದ್ದಂತೆ. ಅಮೆರಿಕ ಮತ್ತಿತರ ದೇಶಗಳಿಗೆ ಹೋದ ಭಾರತೀಯ ಇಂಜಿನಿಯರುಗಳನ್ನು ಮತ್ತು ಇಲ್ಲಿಂದ ಸಾಫ್ಟ್‌ವೇರ್ ಕಂಪನಿಯು ಮಾಡುವ ರಫ್ತಿನಲ್ಲೂ ವಿನ್ಯಾಸದ ಜಾರಿ, ತಪಾಸಣೆಯ ಕೆಲಸ ಶೇಕಡಾ 95 ಭಾಗ ಆಗಿತ್ತು. ಇದು ಕೂಲಿ ಕೆಲಸದಂತೆ. ಭಾರತೀಯ ಐಟಿ ಇಂಜಿನಿಯರುಗಳು 'ಜಾಗತಿಕ ಕೂಲಿ' ಯಾಗಿ ಬಿಟ್ಟಿದ್ದರು. ಈಗ ಈ ಪರಿಸ್ಥಿತಿಯಲ್ಲಿ ಬದಲಾವಣೆ ಆಗಿದೆ. ಭಾರತೀಯ ಇಂಜಿನಿಯರುಗಳು, ಕಂಪನಿಗಳು ಹೆಚ್ಚೆಚ್ಚು ವಿನ್ಯಾಸದ ಕೆಲಸವನ್ನು ಮಾಡುತ್ತಿದ್ದಾರೆ. ಈಗಲೂ ನಮ್ಮದೇ ಐಟಿ ಉತ್ಪನ್ನ ಎನ್ನುವುದು ತೀರಾ ಕಡಿಮೆ.

ಇನ್ನೊಂದು ದೌರ್ಬಲ್ಯವೆಂದರೆ ನಮ್ಮ ಇಂಜಿನಿಯರುಗಳು ತಯಾರಿಯಲ್ಲಿ ಇಡಿ ಉತ್ಪನ್ನಗಳಿಗೆ ದೊಡ್ಡ ದೇಶಿಯ ಮಾರುಕಟ್ಟೆ ಇರುವುದು. ಇರುವ ಸೀಮಿತ ಮಾರುಕಟ್ಟೆಯಲ್ಲಿ ವಿದೇಶಿ ಉತ್ಪನ್ನಗಳ ಜತೆ ಪೈಪೋಟಿ ನಡೆಸಲು ಸಾಧ್ಯವಾಗಿರುವುದು. ದೇಶೀಯ ಮಾರುಕಟ್ಟೆಯನ್ನು ಐಟಿ ಉದ್ಯಮಿಗಳು ನಿರ್ಲಕ್ಷಿಸಿರುವುದು, ದೇಶಗಳ ರೈಲ್ವೆ, ಸ್ಟೀಲ್, ತೈಲ, ಇಂಜನಿಯರಿಂಗ್ ಕೈಗಾರಿಕೆಗಳಲ್ಲಿ ದಕ್ಷತೆ ಹೆಚ್ಚಿಸುವ, ಸ್ವಯಂ-ನಿಯಂತ್ರಕ ಬಳಸುವ ಅಗಾಧ ಕಾರ್ಯದಲ್ಲಿ ನಮ್ಮ ಐಟಿ ಕೈಗಾರಿಕೆ ತೊಡಗಿಲ್ಲ. ಇದನ್ನು ಆಮದು ಮಾಡಿದ ಐಟಿ ಉತ್ಪನ್ನಗಳಿಂದ ಮಾಡಲಾಗುತ್ತಿದೆ. ವಿದೇಶಿ ಕಂಪನಿಗಳ ಐಟಿ ಉತ್ಪನ್ನಗಳ ದೊಡ್ಡ ಭಾಗದ ಕೆಲಸ ಇಲ್ಲಿ ಆಗುತ್ತಿದ್ದರೂ, ಕೆಲವೊಮ್ಮೆ ಆ ಉತ್ಪನ್ನವನ್ನೇ ದೇಶದ ಜನರು ಬಾರಿ ಬೆಲೆ ಕೊಟ್ಟು ತೆಗೆದುಕೊಳ್ಳಬೇಕು. ಇದನ್ನು ಕೆಲವರು ಹತ್ತಿಯನ್ನು ರಫ್ತು ಮಾಡಿ ಬಟ್ಟೆಯನ್ನು ಆಮದು ಮಾಡಿಕೊಳ್ಳುತ್ತಿದ್ದ ಬ್ರಿಟಿಷ್ ವಸಾಹತುಶಾಹಿ ಅವಧಿಯ ಚಿತ್ರಣಕ್ಕೆ ಹೋಲಿಸುತ್ತಿದ್ದಾರೆ. ನಮ್ಮದೇ ಆದ ಉತ್ಪನ್ನಗಳಿರುವುದು, ಅದಕ್ಕೆ ದೊಡ್ಡ ದೇಶಿಯ ಮಾರುಕಟ್ಟೆ ಇರುವುದು, ಅದನ್ನು ನಾವು ರಫ್ತು ಮಾಡುವುದು. ಇದು ಹೆಚ್ಚು ಆರೋಗ್ಯಕರ ಹಂತ. ಈ ಹಂತಕ್ಕೆ ನಾವು ಇನ್ನು ಮುಟ್ಟಿಲ್ಲ. ಇದಲ್ಲದೆ ನಮ್ಮ ರಫ್ತಿನ ಮೂರನೇ ಎರಡು ಭಾಗ ಒಂದೇ ದೇಶದಿಂದ(ಅಂದರೆ ಅಮೆರಿಕ) ಬರುತ್ತದೆ. ಅಮೆರಿಕ ಜತೆ ಸಂಬಂಧ ಕೆಟ್ಟರೆ ಅಥವಾ ಅಮೆರಿಕದ ಸಾಫ್ಟ್‌ವೇರ್ ಕೈಗಾರಿಕೆಯಲ್ಲಿ ಕುಸಿದರೆ ನಮ್ಮ ಐಟಿ ಕೈಗಾರಿಕೆಗೆ ಅಪಾಯ.


ಅಸಮಾನತೆ ವಿಷಮತೆಯತ್ತ

ಳವಣಿಗೆ ಸಾಮಾಜಿಕ ಸಮಸ್ಯೆಗಳನ್ನು ಸೃಷ್ಟಿಸಿದೆ. ಐಟಿ ಮತ್ತು ಇತರ ಕ್ಷೇತ್ರಗಳ ನಡುವಿನ ವೇತನದ ದೊಡ್ಡ ಕಂದಕ ಏರ್ಪಟ್ಟಿದೆ. ರ್ ಅಥವಾ ಇಲೆಕ್ಟ್ರಿಕಲ್ ಇಂಜಿನಿಯರ್ 15 ರಿಂದ 20 ಸಾವಿರ ಸಂಬಳ ಗಳಿಸಬಹುದು. ಇದು ಒಂದು ಕಡೆ ತೀವ್ರ ಸಾಮಾಜಿಕ ವರ್ಷಗಳಿಂದ ಆಳವಾಗಿ ಬೇರೂರಿರುವ ಸಾಮಾಜಿಕ-ಆರ್ಥಿಕ ಅಸಮಾನತೆಯ ನಿವಾರಣೆಗೆ ಸ್ವಾತಂತ್ರ್ಯೋತ್ತರ ದಶಕಗಳಲ್ಲಿ ಆರೆ ಗೆ ಪರಿಣಾಮಕಾರಿಯೂ ಆಗಿತ್ತು. ಆದರೆ ಇನ್ನೂ ಸಾಕ್ಷರತೆಯೇ ಅಸಮಾನತೆಯನ್ನು ಸೃಷ್ಟಿಸುವ ದೊಡ್ಡ ಸಾಧನವಾಗಿರುವಾಗ, ತ್ತೊಂದು ಆಯುಧವಾಗಿ ಜೊತೆಗೂಡುತ್ತಿದೆ. ಅಸಮಾನತೆ ವಿಷಮತೆಯತ್ತ ನಡೆದಿದೆ. ಇನ್ನೊಂದು ಕಡೆ ಇತರ ಕ್ಷೇತ್ರಗಳಲ್ಲಿ ಇಂಜಿನಿಯರುಗಳೇ ಸಿಗುತ್ತಿಲ್ಲ. ಐಟಿಯ 'ಮಾಯಾಕನ್ನೆ' ಕೈಗಾರಿಕೆಗೆ ತೀವ್ರ ಏಟು ಕೊಟ್ಟಿದೆ. ಅನಾರೋಗ್ಯಕರ ವಿಷಮ

ರ್ಷ ಬೆಂಗಳೂರಿನ ಕೆಲವು ಬಡಾವಣೆಗಳಲ್ಲಿ 'ಮಿನಿ ಅಮೆರಿಕ'ಗಳನ್ನು ನಿರ್ಮಿಸಿದೆ. 'ಪಿಜ್ಜಾಹಟ್'ಗಳು, ಸ್ವೆಟ್ಟಿಯ ಕೊಳ್ಳುಬಾಕ ರದಂತಹ ಬಡಾವಣೆಗಳಲ್ಲಿ ಮನೆ ಹುಡುಕ ಹೋದರೆ 'ಐಟಿ ಕ್ಷೇತ್ರದ ಜನ'ಕ್ಕೆ ಪ್ರಾಶಸ್ತ್ಯ. ಮದುವೆ ಮಾರ್ಕೆಟ್ಟಿನಲ್ಲೂ ಐಟಿ ಗಂಡು,

'ಐಟಿ ಸ್ವರ್ಗ' ಕ್ಕೆ ದಾರಿತೋರಿಸುವ ತರಬೇತಿ 'ಅಂಗಡಿ'ಗಳು ನಾಯಿ ಕೊಡೆಗಳಂತೆ ಬೆಳೆಯುತ್ತಿವೆ. ಇವುಗಳಲ್ಲಿ ಫಲವು ಕಳಪೆ ಟಿ 'ತರಬೇತಿ'ಗೆ 12 ಸಾವಿರ ಖರ್ಚಾಗುತ್ತದೆ. ಬಡ, ಮಧ್ಯಮವರ್ಗದ ಕುಟುಂಬದವರು ಸಾಲ-ಸೋಲ ಮಾಡಿ ಈ 'ತರಬೇತಿ' ಕ್ಕೆ ಕಳಿಸುತ್ತೇವೆ' 'ಐಟಿ ಕ್ಷೇತ್ರದಲ್ಲಿ ಕೆಲಸ ಕೊಡಿಸುತ್ತೇವೆ' ಎಂದು ಹಣ ಕಿತ್ತು ನಾಮ ಹಾಕುವ 'ಅಂಗಡಿ'ಗಳು ವ್ಯಾಪಕವಾಗಿವೆ. ಾರಿ ಧೂಳು ಎಬ್ಬಿಸಿದೆ. ಇಲ್ಲಿನ ಜನ ಕಣ್ಣು ಒರೆಸಿಕೊಳ್ಳುವಂತಾಗಿದೆ.

ಕೃಷ್ಣೆಯ ಮಡಿಲಲ್ಲಿ ರೈತರ ಜೀವನಾಡಿ ಶೇಂಗಾಕ್ಕೆ ಬಂದ ಕುತ್ತು



ಚನ್ನಪ್ಪ ಆನೆಗುಂದಿ

ಗುಲ್ಬರ್ಗಾ ಜಿಲ್ಲೆಯಲ್ಲಿ ಒಟ್ಟು ಎರಡು ನದಿಗಳು ಭೀಮ, ಕೃಷ್ಣೆ ಮೈದುಂಬಿ ಹರಿಯುತ್ತವೆ. ಆದರಲ್ಲೂ ಶಹಾಪುರ, ಸುರಪುರ ತಾಲ್ಲೂಕಿನಲ್ಲಿ ಹರಿವ ಕೃಷ್ಣ ಒಕ್ಕಲಿಗನ ಪಾಲಿಗೆ ಭಾಗ್ಯದ ಬಾಗಿಲು ತೆಗೆದವಳು ಎಂಬ ದೂರದ ಆಸೆಯ ಬೆಳಕು ಎಲ್ಲರ ಕಣ್ಣಲ್ಲಿದೆ. ಈ ಕೃಷ್ಣಾ ಯೋಜನೆ ಪೂರ್ತಿಯಾದಲ್ಲಿ ಒಟ್ಟು 21 ಲಕ್ಷ ಎಕರೆಗೆ ನೀರಾವರಿಯಾಗುವುದು. (ಗುಲ್ಬರ್ಗಾ, ಬಿಜಾಪುರ, ರಾಯಚೂರು ಜಿಲ್ಲೆಯ ಭಾಗಗಳು ಸೇರಿದಂತೆ) 1964 ರಲ್ಲಿ ಈ ದೇಶದ ಪ್ರಥಮ ಪ್ರಧಾನ ಮಂತ್ರಿಗಳಾಗಿದ್ದ ಜವಹಾರಲಾಲ್ ನೆಹರು ಅವರು ಅಡಿಗಲ್ಲು ಹಾಕಿರುವರು. ಅಂದಿನಿಂದ ಇಂದಿನವರೆಗೆ ಬಂದ ಸರಕಾರಗಳೆಲ್ಲ ಬೇಕೋ-ಬೇಡವೋ ಎನ್ನುವಂತೆ ಕುಂಟುತ್ತಲೇ ಅಂದಾಜು 3500 ಕೋಟಿಯಷ್ಟು ಹಣ ಬಿಡುಗಡೆ ಮಾಡಿವೆ. ಆದರೆ ಇದರಲ್ಲಿ ದೊಡ್ಡ ಮೊತ್ತ ಮಂತ್ರಿ ಮಾನ್ಯರು, ದೊಡ್ಡ ಗುತ್ತೇದಾರರು, ಹಿರಿಯ ಅಧಿಕಾರಿಗಳು ಹೀಗೆ ಇವರೆಲ್ಲ ಮನ ಬಂದಂತೆ ಕೊಳ್ಳೆ ಹೊಡೆದು ಕೃಷ್ಣೆಯನ್ನು ಬಳಲಿ ಬೆಂಡಾಗುವಂತೆ ಮಾಡಿರುವರು. ರೈತನ ಕಣ್ಣೊಳಗಿನ ಆಸೆಯ ಬೆಳಕು ಇಂಗಿಸುತ್ತಿರುವರು.

ಆದರೆ ಬದುಕಿದ ನರ ಜೀವಿಗಳ ಹೊಟ್ಟೆಗೆ ಅನ್ನ ಹಾಕುತ್ತಿರುವ ರೈತ ಮಾತ್ರ ಬೆಳಗಿನಿಂದ ಸಂಜೆವರೆಗೆ ದುಡಿದು ಧೂಳಾಗುತ್ತಿರುವನು. ಬಾಗಿಲಿಗೆ ಬಂದ ಕೃಷ್ಣೆಯ ಸಂಪತ್ತನ್ನು ಉಳ್ಳವರೇ ದೋಚಿದರೂ, ಇದ್ದಷ್ಟರಲ್ಲಿಯೇ ಶೇಂಗಾ, ಹತ್ತಿ, ಸಜ್ಜೆ, ಮೆಣಸಿನಕಾಯಿ, ಭತ್ತ, ಬೆಳೆಯುತ್ತಿರುವನು. ಆದರಲ್ಲೂ ಶೇಂಗಾ(ಕಡಲೆಕಾಯಿ) ಈ ಭಾಗದ ಪ್ರಮುಖ ಬೆಳೆ. ಶೇಂಗಾ ಬರಿ ಶೇಂಗಾ ಅಲ್ಲ ಅದು ಬಡವರ ಬಾದಾಮಿ. ಶೇಂಗಾ ಬಳ್ಳಿ ಬಸವಣ್ಣನ ಪೌಷ್ಟಿಕ ಆಹಾರ. ಮಾನವನಿಗೂ ಪೌಷ್ಟಿಕ ಆಹಾರ, ದನಗಳಿಗೂ ಪೌಷ್ಟಿಕ ಆಹಾರ. ಮತ್ತು ಶೇಂಗಾ ಕಾಳು ಹೆಚ್ಚು ಆದಾಯ ತರುವ ಬೆಳೆಯಾಗಿರುವುದರಿಂದಲೂ ಇದಕ್ಕೆ ಹೆಚ್ಚು ಪ್ರಾಮುಖ್ಯತೆ ಇದೆ. ನೀರಾವರಿ ಬಂದ ಮೇಲೆ ರೈತನು ಹಿರಿ ಹಿರಿ ಹಿಗ್ಗಿ ನಾಲ್ಕಾರು ವರ್ಷ ಶೇಂಗಾ ಬೆಳೆಯನ್ನು ಹೊಲದಗಲವೆಲ್ಲ ಬೆಳೆದಿದ್ದನು. ಹೀಗೆಯೇ ಶೇಂಗಾ ಬೆಳೆಯು ಸಮೃದ್ಧವಾಗಿ ಬೆಳೆದರೆ, ಮಕ್ಕಳನ್ನು ಓದಿಸಿ, ತಲೆಯ ಮೇಲೊಂದು ಸೂರು ಮಾಡಿಕೊಂಡು, ಬೆಳೆದ ಮಗಳಿಗೊಂದು ಒಳ್ಳೆಯ ಗಂಡು ಹುಡುಕಿ ಮದುವೆ ಮಾಡಿಸಿ, ತಂದಿರುವ ಸಾಲವೆಲ್ಲ ಕೊಟ್ಟು ಬದುಕಿನ ಕಡೆಯ ದಿನಗಳನ್ನು ನಿಶ್ಚಿಂತೆಯಿಂದ ಕಳೆಯಬಹುದೆಂದು ಕನಸು ಕಂಡ ಶಾಪುರ್-ಸುರಪುರ ರೈತನು ಇದ್ದಕ್ಕಿದ್ದಂತೆ ಶೇಂಗಾ ಬೆಳೆ ಸುಟ್ಟು ಕರಕಲಾಗುತ್ತಿರುವುದನ್ನು ನೋಡಿ ತಲೆಗೆ ಕೈ ಹೊತ್ತು ಕುಳಿತಿರುವನು. 'ಶಿರಾದಲ್ಲಿ ಶೇಂಗಾ ಬೆಳೆದ ರೈತನು ಬೆಳೆಗೆ ಬೆಲೆ ಬರದಿದ್ದಾಗ ದಂಗೆ ಏಳಬೇಕಾಯಿತು' ಆದರೆ ಶಾಹಪುರ-ಸುರಪುರ ತಾಲ್ಲೂಕಿನ 2 ಲಕ್ಷ ಎಕರೆಯಲ್ಲಿ ಶೇಂಗಾ ಭ್ರೂಣಾವವಸ್ಥೆಯಲ್ಲಿಯೇ ಸಾಯುತ್ತಿರುವುದನ್ನು ಕಂಡು ರೈತ ದಿಕ್ಕು ತೋಚದಾಗಿರುವನು ಇದಕ್ಕೆ ಕಾರಣವೇನು?.

ಚುನಾವಣೆ ಗೆಲ್ಲುವುದೊಂದೇ ಗುರಿಯಾಗಿಸಿಕೊಂಡ ಈ ಬಂಡವಾಳಶಾಹಿ ಜಮೀನ್ದಾರಿ ಸರಕಾರಗಳಂತೂ ಇತ್ತಗಮನವೇ ಹಾಕಲಿಲ್ಲ. ಆದರೆ ಸಂಬಂಧ ಪಟ್ಟ ಇಲಾಖೆ ಏನು ಮಾಡುತ್ತಿದೆ?.

ನೀರಾವರಿ ನಾಡಿನ ರೈತನು ಶೇಂಗಾ ಬೆಳೆ ಹಾನಿಯ ಕಾರಣದಿಂದ ಕೂಲಿ- ಕಾರ್ಮಿಕನಾಗಿ ಮಾರ್ಪಡುತ್ತಿರುವನು! ಇದಕ್ಕೆ ಹೊಣೆ ಯಾರು?. ಕರ್ನಾಟಕ ಪ್ರಾಂತ ರೈತ ಸಂಘದ ಗುಲ್ಬರ್ಗ ಜಿಲ್ಲಾ ಕಾರ್ಯದರ್ಶಿಗಳಾದ ಚೆನ್ನಪ್ಪ ಆನೆಗುಂದಿಯವರೊಂದಿಗೆ ಒಂದು ಸಂದರ್ಶನ.

■ ಚೆನ್ನಪ್ಪ ಅವರೇ ಶಹಾಪುರ-ಸುರಪುರದಲ್ಲಿ ಶೇಂಗಾ ಬೆಳೆ ನಶಿಸುತ್ತಿದೆ ಎಂದು ಹೇಳುತ್ತಿರುವಿರಿ ಹೇಗೆ?

ಚೆನ್ನಪ್ಪ: ಸುರಪುರ- ಶಹಾಪುರ ತಾಲ್ಲೂಕು ಕೆಂಪು ಮಣ್ಣಿನ ಭೂಮಿಯಾಗಿರುವುದರಿಂದ ಶೇಂಗಾ ಪ್ರಮುಖ ಬೆಳೆಯಾಗಿದೆ. ಈ ಎರಡು ತಾಲ್ಲೂಕಿಗೆ ಕೃಷ್ಣೆ ಜಲಧಾರೆ ಹರಿಸಿದ್ದಾಳೆ. ಆ ಕಾರಣದಿಂದ ಸುಮಾರು 5 ಲಕ್ಷ ಎಕರೆ ಭೂಮಿ ನೀರಾವರಿಯಾಗಿದೆ. ಇದರಲ್ಲಿ 2 ಲಕ್ಷ ಎಕರೆಯಲ್ಲಿ ಶೇಂಗಾ ಬೆಳೆ ರೈತರು ಕಳೆದ 8- 10 ವರ್ಷಗಳಿಂದ ಬೆಳೆಯುತ್ತಿರುವರು. 50 ಕೆ.ಜಿ. ಶೇಂಗಾ ಬೀಜ ಒಂದು ಎಕರೆಯಲ್ಲಿ ಬಿತ್ತಿದರೆ ಸರಾಸರಿ 20 ರಿಂದ 25 ಚೀಲ ಇಳುವರಿ ಈ ಹಿಂದೆ ಬರುತ್ತಿತ್ತು. ಒಂದು ಎರಡು ಎಕರೆಯ ಸಾಮಾನ್ಯರೈತನು ಸಹ ಚಿಂತೆಯಿಲ್ಲದೆ ಬದುಕು ಸಾಗಿಸುತ್ತಿದ್ದ. ಆದರೆ ಕಳೆದ 2-3 ವರ್ಷಗಳಿಂದ ಶೇಂಗಾ ಬೆಳೆಯು ವಿಚಿತ್ರವಾದ ರೋಗಕ್ಕೆ ಕ್ರಮೇಣ ಬಲಿಯಾಗುತ್ತಿರುವುದರಿಂದ ಪ್ರತೀ ವರ್ಷ ಕಾಲಾಣೆ ಭಾಗದ ಬೆಳೆಯೂ ರೈತನ ಕೈಗೆ ಹತ್ತಿಲ್ಲ. ಇದರಿಂದಾಗಿ ಸಾಲ ತಂದು ಹಣ ಹಾಕಿ ಬೀಜ ಬಿತ್ತಿದ ರೈತನು ಕಂಗಾಲಾಗಿದ್ದಾನೆ. ಬೀಜ ಬಿತ್ತಿದ ಒಂದು ತಿಂಗಳವರೆಗೆ ಬೆಳೆ ಹಸಿರಿನಿಂದ ಸಮೃದ್ಧವಾಗಿರುತ್ತದೆ. ಒಂದುವರೆ ತಿಂಗಳ ಹತ್ತಿರಕ್ಕೆ ಬೆಳೆಯ ಚಂಡಿ(ತುದಿಯ ಮೊಗ್ಗು)ಯು ಮುರುಟಿಕೊಳ್ಳುತ್ತದೆ. ಅನಂತರ ನಿಧಾನಕ್ಕೆ ಸುಟ್ಟಂತಾಗಿ ಕ್ರಮೇಣಾ ಇಡೀ ಬೆಳೆಯೇ ಹಸಿರು ಕಳೆದುಕೊಂಡು ಕರಕಲಾಗಿ ಅಸ್ಥಿಪಂಜರವಾಗಿ ನಿಲ್ಲುತ್ತದೆ. ನೋಡು-ನೋಡುತ್ತಿದ್ದಂತೆ ಸುಟ್ಟು ಹೋಗುವ ಬೆಳೆಯ ಬುಡದಲ್ಲಿ ಭ್ರೂಣಾವಸ್ಥೆಯಲ್ಲಿರುವ ಶೇಂಗಾದ ಉಸಿರು ನಿಂತು ಹೋಗಿರುತ್ತದೆ. ಈ ತೆರನಾಗಿ ಇಡಿ ಇಡಿಯಾಗಿ ಬಿತ್ತಿದ ಬೀಜವೂ ಸಹಿತ ಬಯಲಾಗಿ ಹೋಗುತ್ತದೆ.



■ ಈ ರೋಗ ಗುಣಪಡಿಸಲಿಕ್ಕೆ ಸಂಬಂಧ ಪಟ್ಟ ಇಲಾಖೆಯವರ ಗಮನಕ್ಕೆ ತರಲಾಗಿತ್ತೆ?. ಪರಿಹಾರ ಏನು ಸೂಚಿಸಿದರು?.

ಉತ್ತರ: ಹೌದು, ಈ ರೋಗ ಕಾಣಿಸಿಕೊಳ್ಳುತ್ತಿದ್ದಂತೆಯೇ ಪ್ರಾರಂಭದಲ್ಲಿ ನಾವು ಸಂಬಂಧ ಪಟ್ಟ ಕೃಷಿ ಇಲಾಖೆ ಮತ್ತು ಕೃಷಿ ಸಂಶೋಧನಾ ಕೇಂದ್ರದ ಗಮನಕ್ಕೆ ತಂದಿದ್ದೇವೆ. ಆದರೆ ಇಲಾಖೆಯಾಗಲಿ, ಸಂಶೋಧನಾ ಕೇಂದ್ರವಾಗಲೀ ಗಂಭೀರವಾಗಿ ಪರಿಗಣಿಸದ ಕಾರಣ ಈ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ.

■ ಕಾರಣವೇನಿರಬಹುದು, ಚೆನ್ನಪ್ಪ ಅವರೇ?

ನಮ್ಮ ದೇಶದಲ್ಲಿ ಹೊಸ ಆರ್ಥಿಕ ನೀತಿ ಬರುವ ಪೂರ್ವದಲ್ಲೂ ಎಣ್ಣೆಕಾಳು ಬೀಜಕ್ಕೆ ಹೆಚ್ಚಿನ ಆದ್ಯತೆ ಇತ್ತು. ಮತ್ತು ವಿಶೇಷವಾಗಿ ಶೇಂಗಾ ಕಾಳು ಹೆಚ್ಚು ಹಣ ತರುವ ವಾಣಿಜ್ಯ ಬೆಳೆಯಾದ್ದರಿಂದ ಈ ಬೆಳೆಯ ಅಭಿವೃದ್ಧಿಗಾಗಿ ಒಂದು ಸಂಶೋಧನಾ ಕೇಂದ್ರವನ್ನು ರಾಯಚೂರಿನಲ್ಲಿ ಪ್ರಾರಂಭಿಸಲಾಗಿದೆ. ಆದರೆ ಹೊಸ ಆರ್ಥಿಕ ನೀತಿಯನ್ನು ಸರಕಾರವು ಎಲ್ಲೆಡೆ ಜಾರಿ ಮಾಡುತ್ತಿದ್ದಾಗಿನಿಂದ ಈ ಸಂಶೋಧನಾ ಕೇಂದ್ರದ ಕ್ರಿಯಾ ಶೀಲತೆ ಬತ್ತಿ ಹೋಗಿದೆ. ಇದಕ್ಕೆ ಕಾರಣವೂ ಇಲ್ಲದಿಲ್ಲ. ಈ ಹಿಂದಿನ ಜನತಾದಳ ಸರಕಾರವಾಗಲಿ, ಅದಕ್ಕೂ ಹಿಂದಿನ ಕಾಂಗ್ರೆಸ್ ಸರಕಾರಗಳಾಗಲಿ ಈ ಸಂಶೋಧನಾ ಕೇಂದ್ರಕ್ಕೆ ಹಣ ಹಾಕಿಲ್ಲ. ಮತ್ತು ಈ ಸರಕಾರಗಳಿಗೆ ಕಿಂಚಿತ್ತಾದರೂ ರೈತರ ಬಗ್ಗೆ ಕಾಳಜಿ ಇಲ್ಲದ್ದೂ ಇದಕ್ಕೆ ಕಾರಣವಾಗಿದೆ. ಮತ್ತು ಕೇಂದ್ರ ಸರಕಾರವು ವಿದೇಶದಿಂದ ಎಣ್ಣೆಯನ್ನು ದೊಡ್ಡ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುತ್ತಿರುವುದರಿಂದ ದೇಶದಲ್ಲಿ ಬೆಳೆಯುತ್ತಿರುವ ಎಣ್ಣೆ ಕಾಳಿಗೆ ಬೆಲೆಯಿಲ್ಲದಂತಾಗಿದೆ. ರೋಗದಿಂದ ಹಾಳಾಗುತ್ತಿದ್ದರೂ ಉಳಿಸಿಕೊಳ್ಳುವ ಕಳಕಳಿ ಸರಕಾರಕ್ಕಿಲ್ಲದಾಗಿದೆ. ಇದರಿಂದ ಶೇಂಗಾದಂಥ ಬೆಳೆ ಬೆಳೆವ ರೈತನೂ ಬೀದಿಪಾಲಾಗುತ್ತಿದ್ದಾನೆ.

ಸಂಬಂಧ ಪಟ್ಟ ಕೃಷಿ ಇಲಾಖೆಯಂತೂ ಸಂಪೂರ್ಣ ನಿಷ್ಕ್ರಿಯವಾಗಿದ್ದು ಭ್ರಷ್ಟಚಾರದ ಆಗರವಾಗಿದೆ. ಇದೇ ಖಾಸಗೀ ಕಂಪನಿಗಳು ಮೊಳಕೆ ಬಾರದ ಸಜ್ಜೆ ಬೀಜ ವಿತರಿಸಿ ರೈತರ ಕೋಟ್ಯಂತರ ರೂಪಾಯಿಯನ್ನು ನೀರು ಪಾಲು ಮಾಡಿದ್ದರೂ 2-3 ವರ್ಷಗಳಿಂದಲೂ ಶೇಂಗಾ ಬೆಳೆಯು ರೋಗಗ್ರಸ್ಥವಾಗಿದ್ದರೂ ತನಗೆ ಸಂಬಂಧವೇ ಇಲ್ಲವೆನ್ನುವಂತಹ ಧೋರಣೆ ಹೊಂದಿದೆ.

ಒಟ್ಟಾರೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ನಿರ್ಲಕ್ಷ್ಯದ ಧೋರಣೆ ಅನುಸರಿಸುತ್ತಿರುವುದರಿಂದ ಶೇಂಗಾ ಬಳೆ ಮಾತ್ರವಲ್ಲದೇ ಒಟ್ಟು ಕೃಷಿಯ ಮೂಲಕ್ಕೆ ಕೊಡಲಿ ಏಟು ಬೀಳುತ್ತಿದೆ.

■ ಚೆನ್ನಪ್ಪ ಅವರೇ ಒಂದು ಎಕರೆ ಶೇಂಗಾದಿಂದ ರೈತನಿಗೆ ಈ ಹಿಂದೆ ಸರಾಸರಿ ಲಾಭವೆಷ್ಟಾಗುತ್ತಿತ್ತು?

ಮೂರು ವರ್ಷಗಳ ಹಿಂದೆ ಪ್ರತಿ ಎಕರೆಯಲ್ಲಿ 20-25 ಚೀಲ ಇಳುವರಿ ಬರುತ್ತಿತ್ತು. ಪ್ರತಿ ಎಕರೆಗೆ ಗೊಬ್ಬರ ರಾಸಾಯನಿಕ ಸಿಂಪರಣೆ, ಬೀಜಕ್ಕಾಗಿ ಮತ್ತು ಶೇಂಗಾ ಅಗಳಲು(ರಾಶಿಗಾಗಿ) ಹೀಗೆ ಒಟ್ಟು ಖರ್ಚು ರೂ. 3000 ಆಗುತ್ತಿತ್ತು. ಎಲ್ಲಾ ಖರ್ಚು ಹೋಗಿ ಎಕರೆ ಸರಾಸರಿ 6500-7000 ರೂ. ರೈತನಿಗೆ ಲಾಭದ ರೂಪದಲ್ಲಿ ಉಳಿಯುತ್ತಿತ್ತು.

■ ಈಗ ಲಾಭ ಎಷ್ಟಾಗುತ್ತಿದೆ? ಮತ್ತು ರೈತನ ಮೇಲೆ ಏನು ಪರಿಣಾಮವಾಗುತ್ತಿದೆ.

ಈಗಂತೂ ಶೇಂಗಾ ಬೆಳೆ ಹಾನಿಯೊಂದು ಕಣ್ಣೀರು ಕತೆಯಾಗಿ ಕರುಳು ಚುರ್ರೆನ್ನಿಸುತ್ತಿದೆ. ಕಳೆದ ಎರಡು ಮೂರು ವರ್ಷಗಳಿಂದ ಕನಿಷ್ಟ 4 ಎಕರೆ ಇರುವ ಸಣ್ಣ ರೈತ ಸುಮಾರು 12 ಸಾವಿರ ರೂ. ನಷ್ಟು ಪ್ರತಿ ವರ್ಷ ಸಾಲ ತಂದು ಬಂಡವಾಳ ಹಾಕುತ್ತಿರುವನು.

ಇದರಂತೆ ಮೂರು ವರ್ಷವೂ ಹಾಕಿದ ಹಣ ಮತ್ತು ಬಡ್ಡಿ ಸೇರಿ ಕನಿಷ್ಟ 40 ರಿಂದ 50 ಸಾವಿರ ರೂಪಾಯಿಯ ಸಾಲದ ಹೊರೆ ರೈತ ಹೊತ್ತು ಕೊಂಡಿದ್ದಾನೆ. ಬ್ಯಾಂಕಿನಿಂದ ತಂದ ಸಾಲವಾಗಲಿ, ಖಾಸಗಿಯಿಂದ ತಂದ ಸಾಲವಾಗಲಿ ಮುಟ್ಟಿಸಲಿಕ್ಕಾಗದ ಸಣ್ಣ ರೈತ ಜಮೀನು ಮಾರಾಟಕ್ಕಿಟ್ಟಿದ್ದಾನೆ ಮತ್ತು ಅನೇಕ ಜನ ಸಣ್ಣ ರೈತರು (ಅಸಂಖ್ಯಾತರು) ಕೂಲಿ ಕಾರ್ಮಿಕರಾಗಿ ಬಾಂಬೆ- ಪುಣೆಗೆ ಈಗಾಗಲೇ ವಲಸೆ ಹೋಗಿದ್ದಾರೆ.

■ ಚೆನ್ನಪ್ಪ ಅವರೇ, ಕರ್ನಾಟಕ ಪ್ರಾಂತ ರೈತ ಸಂಘದ ಗುಲ್ಬರ್ಗಾ ಜಿಲ್ಲಾ ಕಾರ್ಯದರ್ಶಿಗಳಾದ ನೀವಾಗಲಿ ನಿಮ್ಮ ಸಂಘವಾಗಲಿ ಶೇಂಗಾ ಬೆಳೆ ಉಳಿಸಿಕೊಳ್ಳಲು - ರೈತರ ಬಾಳು ಹಸನಾಗಲು ಏನಾದರೂ ಕ್ರಮ ವಹಿಸುತ್ತಿರುವಿರಾ ? ಚಳುವಳಿ- ಕಾರ್ಯಕ್ರಮ ರೂಪಿಸುತ್ತಿರುವಿರಾ?

ಹೌದು, ಕರ್ನಾಟಕ ಪ್ರಾಂತ ರೈತ ಸಂಘವು ಸುದೀರ್ಘ ಚರ್ಚೆ ಮಾಡಿದೆ. ನಾಗರೀಕರನ್ನೆಲ್ಲ ಒಳಗೊಂಡು ಇದೇ 15 ನವೆಂಬರ್ 99 ರಂದು ರೈತರ ರಕ್ಷಣೆಗಾಗಿ ವಿಚಾರ ಸಂಕೀರಣವೊಂದನ್ನು ನಡೆಸುತ್ತಿದ್ದೇವೆ. ಈ ವಿಚಾರ ಸಂಕಿರಣಕ್ಕೆ ಸುರಪುರ, ಶಾಪುರ ತಾಲ್ಲೂಕಿನ ದೊಡ್ಡ ಸಗರ, ತಿಂಥಣಿ, ಗೌಡಗೇರಿ, ಗಂಗನಾಳ, ಶೆಟ್ಟಿಕೇರಾ, ದೋರನಹಳ್ಳಿ ಇತ್ಯಾದಿ 80 ಹಳ್ಳಿಗಳಿಂದ ಸೂರ್ಯಪಾನ, ಶೇಂಗಾ ಬೆಳೆವ ರೈತರು ಬಂದು ಭಾಗವಹಿಸುತ್ತಿರುವರು. ಈ ವಿಚಾರ ಸಂಕಿರಣದ ತರುವಾಯ ತೀವ್ರವಾದಂತಹ ಚಳುವಳಿಯನ್ನು ಪ್ರಾಂತ ರೈತ ಸಂಘವು ರೂಪಿಸಲಿದೆ.


■ ಈ ವಿಚಾರ ಸಂಕಿರಣದಲ್ಲಿ ಪ್ರಸ್ತಾವನೆಗಳನ್ನೇನಾದರೂ ಮಂಡಿಸುತ್ತಿರುವಿರೇನು? ಮತ್ತೆ ನಿಮ್ಮ ಮುಂದಿನ ಹೋರಾಟ ಸ್ವರೂಪ ಹೇಗಿರ ಬಹುದು?

ಹೌದು ಅನೇಕ ಪ್ರಸ್ತಾವನೆಗಳನ್ನು ಇಡ್ತಿದ್ದೇವೆ.

1. ಶೇಂಗಾ ಬೆಳೆ ರೋಗವನ್ನು ಕಂಡು ಹಿಡಿದು ತಕ್ಷಣಾ ನಿವಾರಣೆಗೆ ಸಂಬಂಧ ಪಟ್ಟ ಇಲಾಖೆ ಮತ್ತು ಸಂಶೋಧನಾ ಕೇಂದ್ರ ಮುಂದಾಗಬೇಕು.
2. ರೋಗರಹಿತ ಬೀಜಗಳನ್ನು ಪೂರೈಕೆ ಮಾಡಬೇಕು.
3. ಈ ಭಾಗದಲ್ಲಿ ಈಗಾಗಲೇ ಸಾಲದಿಂದ ಜರ್ಝರಿತನಾದ ರೈತನನ್ನು ಉಳಿಸಲು ಸರಕಾರ ವಿಶೇಷ ಸಾಲ ಮಂಜೂರು ಮಾಡಬೇಕು.
4. ಸರಕಾರವು ಕೂಡಲೇ ರೈತ ವಿರೋಧಿ ನೀತಿ ಕೈ ಬಿಡಬೇಕು ಮತ್ತು ವಿದೇಶದಿಂದ ಖಾದ್ಯ ತೈಲ ಆಮದು ನಿಲ್ಲಿಸಬೇಕು.
5. ಎಣ್ಣೆಕಾಳು ಅಭಿವೃದ್ಧಿಗೆ ಸರಕಾರವು ಹೆಚ್ಚಿನ ಹಣ ಬಿಡುಗಡೆ ಮಾಡಬೇಕೆಂದು ಮತ್ತು ಶೇಂಗಾಕ್ಕೆ ಪ್ರತಿ ಕ್ವಿಂಟಲ್‌ಗೆ ರೂ.1500 ರಂತೆ ಬೆಲೆ ಬೆಂಬಲ ನಿಗದಿಪಡಿಸಬೇಕೆಂದು ಒತ್ತಾಯಿಸ್ತಿದ್ದೇವೆ.

.ಒಂದು ವೇಳೆ ಸರಕಾರ ಗಮನ ಹರಿಸಲಿಲ್ಲಾಂದ್ರೆ ನಾವು ಅನಿವಾರ್ಯವಾಗಿ ಸರಕಾರದ ರೈತ ವಿರೋಧಿ ನೀತಿಯ ವಿರುದ್ಧ ಉಗ್ರ ಹೋರಾಟ ನಡೆಸಬೇಕಾಗುತ್ತದೆ. ನಿಮಗೆ ನೆನಪಿರಬಹುದು ಹಿಂದೆ ಕಾಂಗ್ರೆಸ್ ಪಕ್ಷದ ಗುಂಡೂರಾವ್ ಸರಕಾರ ರೈತ ವಿರೋಧಿ ನೀತಿ ಅನುಸರಿಸಿದ ಕಾರಣ ನರಗುಂದ, ನವಲಗುಂದದಲ್ಲಿ ರೈತ ಪ್ರತಿಭಟನೆಯ ಕಿಡಿ ಸಿಡಿದು ಬಂದಿತ್ತು. ಆ ಕಿಡಿಯ ಸಿಡಿತಕ್ಕೆ ಆ ರೈತ ವಿರೋಧಿ ಸರಕಾರ ಚೂರು-ಚೂರಾಗಬೇಕಾಯಿತು. ರೈತರ ಒಡಲೊಳಗೆ ಬೆಂಕಿಯ ಕಿಡಿ ಬೂದಿ ಹೊದ್ದಿದೆ. ಚಳುವಳಿಯ ಅಲೆ ಎದ್ದು ಒಳಗಿನ ಕೆಂಡ ಜ್ವಾಲಾಮುಖಿಯಾಗುತ್ತದೆ ಎಂಬ ಎಚ್ಚರಿಕೆ ಸರಕಾರಕ್ಕೆ ಕೊಡುತ್ತಿದ್ದೇವೆ.

ಸಂತೋಷ ಚೆನ್ನಪ್ಪನವರೇ, ನಿಮ್ಮ ಹೋರಾಟವು ರೈತರ ನಡುವೆ ಕ್ರಾಂತಿಯ ಕಹಳೆ ಮೊಳಗಲಿ ಎಂದು ಆಶಿಸುತ್ತೇವೆ. ತನ್ಮೂಲಕ ರೈತರ ಬದುಕು ಹಸನಾಗಲಿ ಎಂದು ಬಯಸುತ್ತೇವೆ. ನಿಮಗೆ ಧನ್ಯವಾದಗಳು.



ಒರಿಸ್ಸಾದಲ್ಲಿ ಭೀಕರ ಚಂಡಮಾರುತ

ಕರುಳಿರಿಯುವ ಆಕ್ರಂದನ

ಒರಿಸ್ಸಾ ರಾಜ್ಯದ ಕರಾವಳಿಯಲ್ಲಿ ಅಪ್ಪಳಿಸಿದ ...ರ್ಗಿಕ ಪ್ರಕೋಪಕ್ಕೆ ಬಲಿಯಾದ ಜೀವಗಳೆಷ್ಟೋ?. ...ವ-ನರಳಾಟಗಳೆಷ್ಟೋ, ಈ ಭಯಂಕರ ಘನ ಘೋರ ...ಡಮಾರುತ ಒರಿಸ್ಸಾದ ಅರ್ಧ ರಾಜ್ಯವನ್ನು ...ರ್ವನಾಶಮಾಡಿದೆ. ಇಡೀ ಪ್ರಪಂಚವನ್ನೇ ಧಿಗ್ಭ್ರಮೆ ...ಳಿಸಿದೆ.

ಚಂಡಮಾರುತವೆಂದರೇನು? ಅಪ್ರತಿಮ ವೇಗದಲ್ಲಿ ...ರುಗಾಳಿ ಬೀಸುವುದು.(ಒರಿಸ್ಸಾ ಚಂಡಮಾರುತದಲ್ಲಿ ...ಂಟೆಗೆ 260 ಕೀ.ಮೀ. ವೇಗದಲ್ಲಿ 16 ಘಂಟೆಗಳ ಕಾಲ ...ತತವಾಗಿ ಬೀಸಿದೆ ಎಂದು ಅಂದಾಜಿಸಲಾಗಿದೆ.) ...ದರಿಂದ ಸಮುದ್ರ ಉಕ್ಕಿ ಹರಿದು ತಗ್ಗು ಪ್ರದೇಶಗಳಿಗೆ ...ಭಸವಾಗಿ ಪ್ರವಾಹ ಹರಿಯತೊಡಗುತ್ತದೆ. ಜನ ಜೀವನ ...ಸ್ತವ್ಯಸ್ತಗೊಳ್ಳುತ್ತದೆ. ಮರ-ಗಿಡಗಳು, ಕಟ್ಟಡಗಳು, ...ಭಗಳು ಬುಡಸಮೇತ ಉರುಳುತ್ತವೆ. ಬಿರುಗಾಳಿಗೆ ಜನ, ...ಾಣಿಗಳು, ಪಕ್ಷಿಗಳು ಉಸಿರುಕಟ್ಟಿ ಎದುರಿಗೆ ಸಿಕ್ಕಿದ ...ಸ್ತುಗಳಿಗೆ ಅಪ್ಪಳಿಸಿ ಸಾಯುತ್ತವೆ.

ಒರಿಸ್ಸಾದ.ಈ ಭೀಕರ ಚಂಡಮಾರುತದಿಂದ ಜನ ...ವನವೇ ಅಸ್ತವ್ಯಸ್ತವಾಗಿದೆ. ಸಾವಿರಾರು ಜನರ ಸಾವು, ...ಕ್ಷಾಂತರ ಜನರ ಆಕ್ರಂದನ, ಅಪಾರ ಹಾನಿ, ಆಹಾರಕ್ಕಾಗಿ ...ಾಹಾಕಾರ. ರಾಜ್ಯದ 11 ಜಿಲ್ಲೆಗಳಲ್ಲಿ ಸುಮಾರು ...ಂದುವರೆ ಕೋಟಿಗಿಂತ ಹೆಚ್ಚಿನ ಜನರು ಮನೆ ಮಠ ...ಳೆದುಕೊಂಡು ಆತಂಕದ ಉಸಿರಾಡುತ್ತಿದ್ದಾರೆ. ಪ್ರಕೃತಿ ಕೋಪದ ಈ ಚಂಡಮಾರುತ ಬಲ್ಲೇಶ್ವರ್ ಜಿಲ್ಲೆಯಿಂದ ...ಭಾಗದಲ್ಲಿರುವ ಪುರಿ ಜಿಲ್ಲೆಯವರೆಗೆ ಹಬ್ಬಿದೆ. ಈ ಇಡೀ ...ಾಪ 200 ಕೀ.ಮೀ. ಪ್ರದೇಶವನ್ನು ಅಕ್ಟೋಬರ್ 29-30 ...ಂದು ಆವರಿಸಿಕೊಂಡಿತ್ತು. ಇದು ಹಾಗೆಯೇ ಜಗಸ್ಥಿಗ್ ...ರ್ ಜಿಲ್ಲೆ ಸೇರಿದಂತೆ ಹಬ್ಬಿದೆ. ಈ ಕ್ರೂರ ಚಂಡಮಾರುತ ...ರದಿಪ್ ನಗರ್, ಕುಜಗೊ, ಎಕಸಾಮ್ ಮತ್ತು ಟಿತಕ್ ...ಗರ ಹಾಗೂ ಮೆಹಾಕಲಾಪದ ನಗರಗಳು ಸೇರಿದಂತೆ ...ಂದ್ರ ಜಿಲ್ಲೆ ಮತ್ತು ಪರಿ ಜಿಲ್ಲೆಯ ಅಸ್ಥಂಗತ್ ನಗರಕ್ಕೂ ...ಬ್ಬಿದೆ.

ಈ ಹಿಂದೆ ಹಠಾತ್ತಾಗಿ ಅಕ್ಟೋಬರ್ 17 ರಂದು ...ಂಜಾಂ ಮತ್ತು ಗಜಾಪತಿ ಜಿಲ್ಲೆಗಳಲ್ಲಿ ಚಂಡಮಾರುತ ...ಣಿಸಿಕೊಂಡಿತ್ತು. ಆದರೆ ಈ ಭೀಕರ ಪ್ರಕೃತಿ ವಿಕೋಪದ ...ಂಡಮಾರುತದಿಂದ ಅಧಿಕ ಸಮಯ ಹಾಗೂ ಅತಿವೇಗದ ಬಿರುಗಾಳಿಯಿಂದ ಸಂಪೂರ್ಣವಾಗಿ ಸರ್ವನಾಶವಾಗಿದೆ. ಭುವನೇಶ್ವರ್‌ನ ಕಟಕ್ ನಗರಳಿಗೆ ಈ ಭಯಂಕರ ಚಂಡಮಾರುತ 24 ಘಂಟೆ ಆವರಿಸಿತ್ತೆಂದು ಅಂದಾಜಿಸಲಾಗಿದೆ. ಅದರಲ್ಲೂ ಕಟಕ್ ಪ್ರದೇಶವೆಲ್ಲಾ ನಾಶವಾಗಿದೆ. ಭುವನೇಶ್ವರ್ ಪ್ರದೇಶದಲ್ಲಿ ಚಂಡಮಾರುತ ಆವರಿಸಿದ್ದು 6 ದಿನಗಳಾದರೂ ವಿದ್ಯುತ್ ದೂರಸಂಪರ್ಕ ಸ್ಥಗಿತಗೊಂಡಿತ್ತು. ಹಾಗೂ ಹಲವಾರು ಕಡೆ ನೀರಿನ ಸಮಸ್ಯೆ ಉದ್ಭವಿಸಿತ್ತು. ಈ ಕೆಟ್ಟ ದುರಂತ ಚಂಡಮಾರುತದಿಂದ ನಗರದಲ್ಲಿ ವಾಸಿಸುತ್ತಿದ್ದ ಜನರಿಗೆಲ್ಲಾ ಹಾಗೂ ಕೊಳಚಿ ಪ್ರದೇಶದ ಗುಡಿಸಲುಗಳು, ಪ್ರಾಣಿಗಳು ಸೇರಿದಂತೆ ಜಲಾವೃತ್ತಆ ವರಿಸಿಕೊಂಡಿದೆ. ಇಲ್ಲಿನ ಸಾವು, ನೋವುಗಳ ಅಂಕಿ ಅಂಶ, ಆಸ್ತಿಯ ನಷ್ಟ ಈ ವರೆಗೂ ನಿಖರವಾಗಿ ದೊರೆತಿಲ್ಲ. ಪರದಿಪ್ ಮತ್ತು ಅಕ್ಕಪಕ್ಕದ ಪ್ರದೇಶಗಳು ಸಂಪೂರ್ಣವಾಗಿ ಸರ್ವನಾಶಗೊಂಡಿದೆ.

ರಾಜ್ಯದ ಕೈಗಾರಿಕಾ ಕ್ಷೇತ್ರ ಕುಂಠಿತಗೊಂಡಿದೆ. ಬೆಳೆಯುತ್ತಿದ್ದ ಬೆಳೆಗಳು ನಾಶಹೊಂದಿವೆ. ತೆಂಗಿನಮರ ಹಾಗೂ ಬಾಳೆಗಿಡಗಳು ಬೇರು ಸಮೇತ ಉರುಳಿ ಬಿದ್ದಿದೆ. ಇದಕ್ಕೆಲ್ಲಾ ತಕ್ಷಣದ ಪರಿಹಾರ ವೆಂದರೆ ನಿರಾಶ್ರಿತರಿಗೆ ತಾತ್ಕಲಿಕ ಜೀವನಧಾರವನ್ನು ಒದಗಿಸುವುದು.

ದಿಕ್ಕುದೆಸೆಯಿಲ್ಲದ ನಿರಾಶ್ರಿತರ ಆ ನೋವುಗಳು ಎಂಥ ಹೃದಯವನ್ನು ಕರಗಿಸುತ್ತದೆ. ನೂರಾರು ಹಳ್ಳಿಗಳು, ಕೈಗಾರಿಕೆಗಳು ಸಾರಿಗೆ, ರೈಲ್ವೆ, ದೂರಸಂಪರ್ಕ ಶೇಖರಿಸಿದ್ದ ಸಾಮಾಗ್ರಿಗಳು ಸಂಪನ್ಮೂಲಗಳು ಪ್ರಾಣಿಗಳು ಪಕ್ಷಿಗಳು ಸರ್ವನಾಶಗೊಂಡಿದೆ.

ನೈಸರ್ಗಿಕ ವಿಕೋಪಕ್ಕೆ ಒಳಗಾದ ನಿರಾಶ್ರಿತರಿಗೆ ಆಶ್ರಯ ನೀಡಲೆಂದು ಹೋದರೆ ರಸ್ತೆ, ದೂರವಾಣಿ ಸಂಪರ್ಕ, ರೈಲ್ವೆ, ವಿದ್ಯುತ್ ಸಂಪರ್ಕ ನೆಲಸಮವಾಗಿದೆ. ಎಲ್ಲಡೆ ನದಿಗಳು ಪ್ರವಾಹವಾಗಿ ಹರಿದು ಜನಾವೃತ್ತವಾಗಿರುವುದರಿಂದ ಸಂಚಾರ ಸ್ಥಗಿತಗೊಂಡಿದೆ. ಆದ್ದರಿಂದ ಎಲ್ಲಾ ಚಂಡಮಾರುತ ಪೀಡಿತ ಪ್ರದೇಶಗಳಿಗೆ ಈವರೆಗೂ ಹೋಗಿಲ್ಲ. ಶತಮಾನದ ರಾಕ್ಷಸ ಚಂಡಮಾರುತದಿಂದ ಬದುಕುಳಿದ ತಬ್ಬಲಿಗಳಿಗೆ ತಿನ್ನಲಿಕ್ಕಿಲ್ಲದೆ ಹಸಿವಿನಿಂದ ಸತ್ತವರೆಷ್ಟೋ?. ಅವರಲ್ಲಿ ಎಳೆಯ ಮಕ್ಕಳೆಷ್ಟು?. ಕೈ-ಕಾಲು ಇನ್ನಿತರ ಭಾಗಗಳಿಗೆ ಪೆಟ್ಟಾಗಿ ಅರೆ ಜೀವದಲ್ಲಿ ನರಳುತ್ತಿರುವ ನತದೃಷ್ಟರೆಷ್ಟೋ?. ಲಕ್ಷಾಂತರ ಜನರ ನೋವುಗಳಿಗೆ ಸ್ಪಂದಿಸಲಾಗದ ಪರಿಸ್ಥಿತಿಯಲ್ಲಿ ಇನ್ನೂ ಪ್ರಾಣಿ ಪಕ್ಷಿಗಳ ನರಕಯಾತನೆಯನ್ನು ತಡೆಯುವರಾರು?.

ನಮ್ಮ ಕಣ್ಣೆದುರಿಗೆ ಆ ರಸ್ತೆ ಅಪಘಾತಗಳಿಂದ ಅಸು ನೀಗಿದರೆ, ರಕ್ತ ಸೋರುತ್ತಿರುವುದನ್ನು ನೋಡಿದರೆ ಸಹಿಸಲು ಕಷ್ಟವಾಗಿರುವಾಗ ಇಂತ ಭೀಕರ ಘೋರ ಚಂಡಮಾರುತ ಸಾಮಾನ್ಯ ಜನರ ಜೀವನವನ್ನು ಸಂಪೂರ್ಣ ನಾಶಗೈದ ಚಿತ್ರಣ ನೆನೆದರೆ, ಪತ್ರಿಕೆಗಳಲ್ಲಿ ಮತ್ತು ದೂರದರ್ಶನವನ್ನು ನೋಡಿದರೆ ಉಸಿರುಕಟ್ಟಿದಂತಾಗುತ್ತದೆ. ಕಣ್ಣಂಚಿನಲ್ಲಿ ಕಂಬನಿ ತನ್ನಿಂದ ತಾನೇ ಮೂಡುತ್ತದೆ.

ನಿರಾಶ್ರಿತರ ದುಖಃ ದುಮಾನಗಳಿಗೆ, ಹಸಿವಿಗೆ, ನೆಲೆಗೆ, ಆರೈಕೆಗೆ ತೀವ್ರವಾಗಿ ನೆರವಾಗಬೇಕಾಗಿದೆ. ಹಿಂದೆ ಹೀಗೆಯೇ ಭಾರೀ ಭೀಕರ ಚಂಡಮಾರುತ ಪಶ್ಚಿಮ ಬಂಗಾಳವನ್ನು ಘಾತಿಸಿದಾಗ ಪಶ್ಚಿಮ ಬಂಗಾಳ ಸರ್ಕಾರ ಜನರೆಲ್ಲಾ ಒಗ್ಗಟ್ಟಿನಂದ ಚಂಡಮಾರುತದ ಸರ್ವ ನಾಶಕ್ಕೆ ಎದೆಗುಂದದೆ ನೆಲೆ ಕಳೆದುಕೊಂಡ ಜನರಿಗೆ ಪುನರ್ ನಿರ್ಮಾಣದಲ್ಲಿ ತೊಡಗಿದರು. ತೀವ್ರ ಗತಿಯಲ್ಲಿ ಆಶ್ರಯ ನೀಡಿದ ಆ ಮಹತ್ ಚಂಡಮಾರುತದ ವಿರುದ್ಧ ಪುನರ್ ನಿರ್ಮಾಣಕ್ಕೆ ತೊಡಗಬೇಕಾಗಿದೆ. ನಾವೆಲ್ಲಾ ನೆರವಾಗ ಬೇಕಾಗಿದೆ.

> **ಚಂಡವಾರುತವೆಂದರೇನು?**
> ಅಪ್ರತಿಮ ವೇಗದಲ್ಲಿ ಬಿರುಗಾಳಿ ಬೀಸುವುದು.(ಒರಿಸ್ಸಾ ಚಂಡಮಾರುತದಲ್ಲಿ ಘಂಟೆಗೆ 260 ಕೀ.ಮೀ. ವೇಗದಲ್ಲಿ 16 ಘಂಟೆಗಳ ಕಾಲ ಸತತವಾಗಿ ಬೀಸಿದೆ ಎಂದು ಅಂದಾಜಿಸಲಾಗಿದೆ.) ಇದರಿಂದ ಸಮುದ್ರ ಉಕ್ಕಿ ಅರಿದು ತಗ್ಗು ಪ್ರದೇಶಗಳಿಗೆ ರಭಸವಾಗಿ ಪ್ರವಾಹ ಹರಿಯತೊಡಗುತ್ತದೆ. ಜನ ಜೀವನದ ಅಸ್ತವ್ಯಸ್ತಗೊಳ್ಳುತ್ತವೆ. ಮರ-ಗಿಡಗಳು, ಕಟ್ಟಡಗಳು, ಕಂಭಗಳು ಬುಡಸಮೇತ ಉರುಳುತ್ತವೆ. ಬಿರುಗಾಳಿಗೆ ಜನ, ಪ್ರಾಣಿಗಳು, ಪಕ್ಷಿಗಳು ಉಸಿರುಕಟ್ಟಿ ಎದುರಿಗೆ ಸಿಕ್ಕಿದ ವಸ್ತುಗಳಿಗೆ ಅಪ್ಪಳಿಸಿ ಸಾಯುತ್ತಾರೆ.

ಏನೆಲ್ಲಾ ವೈಜ್ಞಾನಿಕ ಸಾಧನಗಳಿದ್ದರೂ, ಸಹಸ್ರ ಸಂಖ್ಯೆಯಲ್ಲಿ ಸೇನೆ, ನಾನಾ ತರದ ಇಲಾಖೆಗಳಿದ್ದರೂ ಚಂಡಮಾರುತಕ್ಕೆ ತುತ್ತಾದ ನತದೃಷ್ಟರಿಗೆ ರಕ್ಷಣೆ ಒದಗಿಸಲು ಬಹಳ ನಿದಾನಗತಿಯಲ್ಲಿ ಸಾಗುತ್ತಿರುವುದು ವಿಷಾದಕರವಾಗಿದೆ.

ದೇವರು, ದೆವ್ವ, ಧರ್ಮ ವೆಂದು ಕೋಟಿಗಟ್ಟಲೇ ಹಣ ದೋಚುವ ಮಠಾಧಿಪತಿಗಳು, ಜೋತಿಷಿಗಳು ದೇವರನ್ನು ನಂಬಿ, ದೇವರಿದ್ದಾನೆ, ರಕ್ಷಿಸುತ್ತಾನೆ ಎಂದು ಮೂಢನಂಬಿಕೆಗೆ ತಳ್ಳುವ ಮಹಾಶಯರು ಈಗೆಲ್ಲಿದ್ದಾರೆ.

ನಿರಾಶ್ರಿತರ ಆಶ್ರಯಕ್ಕೆ ನಮ್ಮೆಲ್ಲರ ಜವಬ್ದಾರಿ ಇದೆ:

ಎರಡು ಕೋಟಿಗೂ ಹೆಚ್ಚಿನ ಜನರಿಗೆ ಅಹಾರ ಒದಗಿಸುವ ನೈತಿಕ ಜವಾಬ್ದಾರಿ ಸರ್ಕಾರಗಳ ಮೇಲಿದೆ. ಪರಿಹಾರ ಸಾಮಾಗ್ರಿಗಳು, ಮಕ್ಕಳ ಆಹಾರಗಳು ತೀವ್ರಗತಿಯಲ್ಲಿ ನಿರಾಶ್ರಿತರ ಬಳಿಗೆ ಸಾಗಿಸಬೇಕಾಗಿದೆ. ಗಾಯ, ಕಾಯಿಲೆಗಳಿಂದ ನರಳುತ್ತಿರುವರಿಗೆ ತಾತ್ಕಲಿಕ ಅಸ್ಪತ್ರೆಯ ವ್ಯವಸ್ಥೆ ಮಾಡಬೇಕಿದೆ. ಹಸಿವು ತಾಳಲಾರದೆ ಜನ ತುತ್ತಿಗಾಗಿ ಮುಗಿಬೀಳುತ್ತಿದ್ದು ಆಹಾರ ದೊರಕದೆ ಲೂಟಿಗೆ, ದೊಂಬಿಗೆ ಮುಂದಾಗುತ್ತಿದ್ದಾರೆ. ಈ ಜೀವರಾಶಿಯ ಮರಣಾಂತಿಕ ಸ್ಥಿತಿಯನ್ನು ಊಹಿಸ ಲಾಸಾಧ್ಯವಾಗಿದೆ. ಪ್ರಕೃತಿಯ ಈ ವಿಕೋಪದೆದುರು ಕುಬ್ಜರಾಗಿದ್ದೇವೆ. ಇಂಥ ಪರಿಸ್ಥಿತಿಯಲ್ಲಿ ಮಂತ್ರಿಗಳು ಬರೀ ಪ್ರಚಾರಕ್ಕಾಗಿ ವಿಮಾನಗಳಲ್ಲಿ ಹೋಗಿ ವೀಕ್ಷಿಸಿ ಬರುವುದನ್ನು ಬಿಟ್ಟು ಚಂಡಮಾರುತ ಸ್ಥಳಗಳಿಗೆ ಧಾವಿಸಿ ನಿರಾಶ್ರಿತರಿಗೆ ಆಶ್ರಯ ನೀಡಲು ತ್ವರಿತಗತಿಯಲ್ಲಿ ತೊಡಗಿಸಿಕೊಳ್ಳಬೇಕು. ತಬ್ಬಲಿಗಳಾದ ಅವರಿಗೆ ಮನಸ್ಥೈರ್ಯ ನೀಡಬೇಕು. ನಾವು ನಿಮ್ಮೊಂದಿಗಿದ್ದೇವೆ. ಎಲ್ಲಾ ರೀತಿಯಲ್ಲಿಯೂ ಪುನರ್ ನಿರ್ಮಾಣ ಮಾಡುತ್ತೇವೆಂದು ಭರವಸೆಯಿತ್ತು ಸಂತೈಸಬೇಕಾಗಿದೆ. ರಾಜಕಾರಣಿಗಳು ತಮ್ಮ ಮೋಜಿನಾ, ಐಬೋಗದ ಜೀವನವನ್ನು ತ್ಯಜಿಸಿ ನೈತಿಕ ಹೊಣೆ ಹೊತ್ತು ಪ್ರಮಾಣಿಕ ಕೆಲಸ ಮಾಡಬೇಕಾಗಿದೆ. ಜೊತೆಗೆ ಅಧಿಕಾರಿಗಳಿಂದ ಮಾಡಿಸಬೇಕಿದೆ. ಬರೀ ಪತ್ರಿಕೆಗಳಲ್ಲಿ ಹೇಳಿಕೆಗಳನ್ನು ಕೊಡುವುದನ್ನು ಬಿಟ್ಟು ಕಾರ್ಯನಿರತರಾಗಬೇಕಿದೆ.

ಭ್ರಷ್ಟಚಾರ ಸುಳಿಯಲು ಅವಕಾಶ ನೀಡಬಾರದು:

ಹಸಿವು, ಆತಂಕಗಳಿಂದ, ನೆಲೆ ಇಲ್ಲದೆ ಪರದಾಡುತ್ತಿರುವ ನಿರಾಶ್ರಿತರಿಗೆಂದು ಸಾಗಿಸುವ ಹಣವನ್ನು ದೋಚಲು, ಇಂಥ ಅವಕಾಶಗಳನ್ನೇ ಭ್ರಷ್ಟರು ಸ್ವಾರ್ಥಕ್ಕೆ ಬಳಸಿಕೊಳ್ಳಲು ಅವಕಾಶ ನೀಡಬಾರದು. ಸಾರ್ವಜನಿಕರಿಂದ, ಸಂಘ ಸಂಸ್ಥೆಗಳಿಂದ, ಶಾಲಾ ಮಕ್ಕಳಿಂದ ಸಂಗ್ರಹಿಸುವ ಹಣವನ್ನು ಆಸ್ತಿ, ನೆಲೆಯಲ್ಲಾ ಕಳೆದುಕೊಂಡ ನಿರ್ಗತಿಕರಿಗೆ ಸೇರಬೇಕು. ಅವರ ಹೆಸರೇಳಿ ಹಣ ದೋಚಲು ಅವಕಾಶ ನೀಡಬಾರದು. ದೇಶ ವಿದೇಶಗಳಿಂದ, ರಾಜ್ಯಗಳಿಂದ ಪಡೆದ ನೆರವನ್ನು ಕ್ರಮಬದ್ಧವಾಗಿ ನಿರಾಶ್ರಿತರಿಗೆ ಒದಗಿಸಲು ಒರಿಸ್ಸಾ ರಾಜ್ಯ ಸರ್ಕಾರ ಪ್ರಮಾಣಿಕ ಪ್ರಯತ್ನದಿಂದ ತೊಡಗಿಸಿಕೊಳ್ಳಬೇಕು. ಆಹಾರ ಸಾಮಾಗ್ರಿಗಳನ್ನು ವಿತರಿಸುವಾಗ ಕಂಗಾಲಾದ ನಿರಾಶ್ರಿತರ ಅತುರಕ್ಕೆ ಸ್ಪಂದಿಸಿ ವಿತರಣೆಯಾಗಬೇಕಿದೆ.

ಸಾಂಕ್ರಾಮಿಕ ರೋಗ :

ಜಲಾವೃತಗೊಂಡ ನೀರಿನ ಮೇಲೆ ಸತ್ತ ಹೆಣಗಳು, ಪ್ರಾಣಿಗಳು, ಪಕ್ಷಿಗಳು ಕೊಳೆತು ನಾರಿತ್ತಿರುವುದರಿಂದ ಭಯಾನಕ ಸಾಂಕ್ರಾಮಿಕ ರೋಗ ಹರಡುತ್ತಿದೆ. ರಾಜ್ಯದ ಪ್ರದೇಶಗಳಿಗೆ, ನೆರೆರಾಜ್ಯಗಳಿಗೆ ಹಬ್ಬುವುದರಲ್ಲಿ ಸಂದೇಹವಿಲ್ಲ. ಇದರಿಂದ ಆರೋಗ್ಯವಂತರಿಗೂ ರೋಗರುಜನಗಳು ಹರಡುವುದು ಸಾಧ್ಯವಿದೆ. ಆದ್ದರಿಂದ ಮುನ್ನೆಚರಿಕೆ ಕ್ರಮವಾಗಿ ಸಾಂಕ್ರಾಮಿಕ ರೋಗ ನಿರೋಧಕ ಔಷಧಿಯನ್ನು ಎಲ್ಲಾ ಕಡೆ ಸಿಂಪಡಿಸಲು ವ್ಯವಸ್ಥಿತಗೊಳಿಸಬೇಕು. ದೇಶದಾದ್ಯಂತ ವೈದ್ಯರು ಈ ಮಾನವೀಯ ಕೆಲಸದಲ್ಲಿ ಸೇವೆ ಸಲ್ಲಿಸಲು ಮುಂದಾಗಬೇಕು.

ಹಸಿವಿನಿಂದ,ತಮ್ಮೆಲ್ಲವರನ್ನು, ತಮ್ಮ ಮನೆ ಮಠಗಳನ್ನು ಕಳೆದುಕೊಂಡು ಕಂಗಾಲಾಗಿರುವ ನಿರಾಶ್ರಿತರಿಗೆ ಪುನರ್ ವ್ಯವಸ್ಥೆ ಮಾಡಲು ತಮ್ಮ ದೇಶದ ಈ ಅಮಾನವೀಯ ಪರಿಸ್ಥಿತಿಯನ್ನು ಬದಲಿಸಲು ತಮ್ಮ ಕೈಲಾದ ನೆರವಿನಿಂದ ಸಹಕರಿಸಬೇಕಾಗಿದೆ.

- ಬಿ.ರಾಜಶೇಖರಮೂರ್ತಿ

ಸಿಪಿಐ(ಎಂ) ಪಕ್ಷದ ಸ್ಪಂದನ

ಒರಿಸ್ಸಾ ರಾಜ್ಯ ಸಮಿತಿ(ಸಿ.ಪಿ.ಐ(ಎಂ)) ಚಂಡಮಾರುತದಲ್ಲಿ ಬಳಲಿದ ನಿರಾಶ್ರಿತರಿಗೆ ಆಶ್ರಯ ನೀಡಲು ಸಂಘಟಿಸಿ ಕೆಲವು ಅತಿಹೆಚ್ಚು ತೊಂದರೆಗೀಡಾದ ಜಿಲ್ಲೆಗಳನ್ನು ಆಯ್ದುಕೊಂಡು ಪರಿಹಾರೋಪಾಯಗಳನ್ನು ಒದಗಿಸುತ್ತಿದೆ. ಸಿ.ಪಿ.ಐ(ಎಂ) ಕೇಂದ್ರ ಸಮಿತಿ ಹಣವನ್ನು ಬಿರುಸಿನಿಂದ ಸಂಗ್ರಹಿಸುತ್ತಿದೆ. ಹಾಗೂ ಈಗಾಗಲೇ 10 ಲಕ್ಷ ರೂ ಮೊತ್ತದ ಮಕ್ಕಳ ಅಹಾರ,ಪಾಲಿಟಿನ್ ಶೀಟ್‌ಗಳು, ಹತ್ತಿ ಹೊದಿಕೆಗಳು ಹಾಗೂ ಬಟ್ಟೆಗಳನ್ನು ಕಳುಹಿಸಿಕೊಡಲಾಗುತ್ತಿದೆ. 5 ಲಕ್ಷ ಹಣವನ್ನು ತಾತ್ಕಲಿಕ ಪರಿಹಾರೋಪಾಯಕ್ಕೆ ಕಳುಹಿಸಿಕೊಡಲಾಗಿದೆ.

ಪಶ್ಚಿಮ ಬಂಗಾಳಳ ಪಕ್ಷವು ನಂವೆಂಬರ್ 6-7 ರಂದು ಹಣ ಸಂಗ್ರಹ ಮಾಡಲಿದೆ. ಹಾಗೂ ಎಲ್ಲಾ ಜಿಲ್ಲೆಗಳಿಂದ ಅಗತ್ಯ ವಸ್ತುಗಳನ್ನು ಲಾರಿಗಳ ಮೂಲಕ ಒರಿಸ್ಸಾ ರಾಜ್ಯಕ್ಕೆ ಕಳುಹಿಸಕೊಡಲಾಗುತ್ತಿದೆ. ಜೊತೆಗೆ ಔಷಧಿಗಳು, ಸೀರೆಗಳು, ಮಕ್ಕಳ ಉಡುಪುಗಳು, ಮೇಣದ ಬತ್ತಿಗಳು, ಬೆಂಕಿಪಟ್ಟಣ ಮುಂತಾದ ಅವಶ್ಯಕ ವಸ್ತುಗಳನ್ನು ಕಳುಹಿಸಿಕೊಡಲಾಗುತ್ತಿದೆ. ಅಲ್ಲದೆ ವೈದ್ಯಕೀಯದ 6 ತಂಡಗಳನ್ನು ಚಂಡಮಾರುತ ಪೀಡಿತ ಪ್ರದೇಶಗಳಿಗೆ ರವಾನಿಲಾಗಿದೆ ಒಂದೊಂದು ತಂಡಗಳಲ್ಲಿ 4 ಉನ್ನತ ವೈದ್ಯರು ಹಾಗೂ ಇಬ್ಬರು ...ರಿಯ ವೈದ್ಯರು ಇದ್ದಾರೆ. ಅಲ್ಲದೆ ಈಗಾಗಲೇ ಮಿಡ್ನಾಪುರ್ ಜಿಲ್ಲಾ ಸಮಿತಿ ಗೋದಿ ಮತ್ತು ...ಕ್ಕಿಯನ್ನು ಕಳುಹಿಸಿಕೊಟ್ಟಿದೆ.


ಆಂಧ್ರಪ್ರದೇಶದ ರಾಜ್ಯ ಸಮಿತಿಯು ಸಂಚಾರಿ ವೈದ್ಯಕೀಯ ತಂಡಗಳನ್ನು ಪರದಿಪ್ ಪ್ರದೇಶಗಳಿಗೆ ಕಳುಹಿಸಿಕೊಡಲಿದೆ. ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ...ಲಗು ಮಾತನಾಡುವ ಜನರು ವಾಸಿಸುತ್ತಿದ್ದಾರೆ.

ಎಡರಂಗ ಸರ್ಕಾರದ ರಾಜ್ಯವಾದ ಪಶ್ಚಿಮ ಬಂಗಾಳ ತ್ವರಿತ ರೀತಿಯಲ್ಲಿ ನಿರಾಸ್ರಿತರಿಗೆ ಆಶ್ರಯ ನೀಡಲು ತೊಡಗಿಸಿಕೊಂಡಿದೆ. ಇಧರ ಮೊದಲು ಹಂತವಾಗಿ ಅಕ್ಟೋಬರ್ 3 ರಂದು ಗೌತಮ್ ಮದೆವ್, ಮತ್ತು ಸತ್ಯ ಮೆಹತ್ ಇಬ್ಬರೂ ಭುವನೇಶ್ವರ್ ಗೆ ಭೇಟಿ ನೀಡಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ನೀಡಿದ್ದ 50 ಲಕ್,ದ ಚೆಕ್ಕನ್ನು ತಲುಪಿಸಿದರು. ಅಂದಿನಿಂದ ಇಂದಿನವರೆಗೂ 2.5 ಕೋಟಿ ರೂಗಳಷ್ಟು ಸಾಮಾಗ್ರಿಗಳನ್ನು ಒದಗಿಸಲಾಗಿದೆ. ಸರ್ಕಾರವು 10 ಕೋಟಿ ರೂಪಾಯಿಗಳನ್ನು ಪರಿಹಾರ ಸಾಮಾಗ್ರಿಗಳನ್ನು ಒರಿಸ್ಸಾ ರಾಜ್ಯಕ್ಕೆ ಒದಗಿಸುವ ಗುರಿ ಹೊಂದಿದೆ.

ಕೇರಳ ಸರ್ಕಾರ 50 ಹಾಗೂ ತ್ರಿಪುರ ಸರ್ಕಾರ 25 ಲಕ್ಷ ರೂಗಳನ್ನು ಒರಿಸ್ಸಾಗೆ ನೀಡಲು ನಿರ್ಧರಿಸಿದೆ.

ಈ ಅನಾಹುತದ ಪರಿಹಾರಕ್ಕೆ ಎಲ್ಲಾ ರೀತಿಯಿಂದಲೂ ಒಂದು ತಿಂಗಳ ಅವಧಿಯಲ್ಲಿ ಪೂರೈಸಬೇಕೆಂದು ಒರಿಸ್ಸಾ ರಾಜ್ಯ ಸಮಿತಿ ಮತ್ತು ಪೊಲಿಟ್‌ಬ್ಯೂರೊ ಎಲ್ಲಾ ರಾಜ್ಯ ಸಮಿತಿಗಳಿಗೆ ತ್ವರಿತಗತಿಯಲ್ಲಿ ಜನರಿಂದ ಹಣ ಸಂಗ್ರಹಿಸಿಕೊಡಬೇಕೆಂದು ಕರೆ ನೀಡಿದೆ. ಪಕ್ಷದ ಕೇಂದ್ರ ಸಮಿತಿಯು ಜೋಗಿಂದರ್ ಶರ್ಮ (ಕೇಂದ್ರ ಸಮಿತಿ ಸದಸ್ಯ) ರವರನ್ನು ಒರಿಸ್ಸಾಕ್ಕೆ ಹಣವನ್ನು ಸಂಗ್ರಹಿಸಿ ಕಳುಹಿಸಲು ಸಂಚಾಲಕರಾಗಿ ನೇಮಿಸಿದೆ. ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್ ವಾದಿ) ಕೇಂದ್ರ ಸಮಿತಿಯು ಒರಿಸ್ಸಾ ಚಂಡಮಾರುತ ಪೀಡಿತ ನಿರಾಶ್ರಿತರ ನಿಧಿ ಸಂಗ್ರಹಣ ಮಾಡಲು ಕರೆ ನೀಡಿದ್ದಾರೆ. ಈ ನಿಟ್ಟಿನಲ್ಲಿ ನಾವೆಲ್ಲಾ ನಮ್ಮ ಜನಗಳಿಗಾಗಿ ನಮ್ಮ ಕೈಲಾದ ಸಹಾಯಗಳನ್ನಿಯುತ್ತಾ ಅವರು ಬದುಕುಳಿಯಲು ಪ್ರಯತ್ನಿಸೋಣ.

ಪ್ರಕಾಶ್ ಕಾರತ್



ಕೊಡಗು ಪ್ರತ್ಯೇಕತಾವಾದಿಗಳ ಹೊಟ್ಟೆ ಕಾಂಗ್ರೆಸ್ ಮಂತ್ರಿಗಳ ಚೆಲ್ಲಾಟ

'ಸತ್ಯ' - ವಿರಾಜಪೇಟೆ

ಕೊಡಗು ಕೃಷಿ ಪ್ರಧಾನ ಜಿಲ್ಲೆ. ಇಲ್ಲಿಯ 18 ಮೂಲನಿವಾಸಿಗಳಲ್ಲಿ ಬಹುಸಂಖ್ಯಾತ ಮೂಲ ನಿವಾಸಿಗಳವರು ಕೃಷಿಕೂಲಿಗಾರರು, ಬಡರೈತರು ಭೂಮಾಲಕ ಜನವಿಭಾಗವು ಕಾಫಿ, ಭತ್ತ, ಏಲಕ್ಕಿ ಬೆಳೆಯುವ ಬೆಳೆಗಾರರು. ಇವರಿಗೆ ತಾವು ಉತ್ಪಾದಿಸುವ ಉತ್ಪಾದನೆಗಳಿಗೆ ನ್ಯಾಯ ಬೆಲೆ ಸಿಗುತ್ತಿಲ್ಲ. ತಾವು ಕೊಂಡು ಕೊಳ್ಳುವ ಪ್ರತಿಯೊಂದು ವಸ್ತುವಿನ ಬೆಲೆ ಏರುತ್ತಿದೆ. ಜೀವನ ಮಟ್ಟ ಕುಸಿಯುತ್ತಿದೆ. ಬೆಳೆಗಾರರಲ್ಲಿ ಕೆಲವೇ ಮಂದಿ ಆಗರ್ಭ ಶ್ರೀಮಂತರಾಗಿ ಬೆಳೆಯುತ್ತಿದ್ದಾರೆ. ಬಹು ಸಂಖ್ಯಾತ ಮಧ್ಯಮ ವಿಭಾಗಗಳವರು ಕೆಳಕ್ಕೆ ತಳ್ಳಲ್ಪಟ್ಟಿದ್ದಾರೆ. ಇದರೊಂದಿಗೆ ವಿದ್ಯುತ್ ಕ್ಷಾಮ, ಕಳಪೆ ರಸ್ತೆಗಳು, ವೈದ್ಯಕೀಯ, ವಿದ್ಯಾಭ್ಯಾಸ ಸೌಕರ್ಯಗಳಲ್ಲಿ ಕೊರತೆ, ಸರಕಾರೀ ಕಛೇರಿಗಳಲ್ಲಿ ಒಂದೊಂದರಲ್ಲೂ ಲಂಚಗುಳಿತನ, ಸ್ವಜನಪಕ್ಷಪಾತ ಜನರನ್ನು ಕಂಗೆಡಿಸುತ್ತಿದೆ. ಅವರಲ್ಲಿ ಕ್ರೋಧ, ಅಸಹನೆ ಬೆಳೆಯುತ್ತಿದೆ. ಕೊಡಗಿನಲ್ಲಿ ಬೆಳೆಯುತ್ತಿರುವ ಈ ಪರಿಸ್ಥಿತಿಯ ಲಾಭ ಪಡೆಯಲು ಹುಟ್ಟಿದಂತ ಸಂಘಟನೆಯೇ ಕೊಡಗು ರಾಜ್ಯ ಮುಕ್ತಿ ಮೋರ್ಚಾ. ಅವರ ಏಕೈಕ ನಾಯಕರೂ ನಂದಿನೆರವಂಡ ನಾಚಪ್ಪ ನವರು. 8 ವರ್ಷಗಳ ಹಿಂದೆ ಅವಾಕ್ (ಲಿಬರೇಷನ್ ವಾರಿಯರ್ಸ್ ಅಫ್ ಕೊಡಗು) ಎಂಬ ಹೆಸರಿನಲ್ಲಿ ಸ್ಥಾಪನೆಯಾಗಿ ಅನಂತರ ಕೊಡಗು ರಾಜ್ಯ ಮುಕ್ತಿ ಮೋರ್ಚಾ ಎಂಬ ಹೆಸರು ಸ್ವೀಕರಿಸಿದ ಈ ಸಂಘಟನೆ ಕೊಡಗಿನ ಚರಿತ್ರೆಯನ್ನು ತಿರುಚಿ, ಸತ್ಯವನ್ನು ಮರೆಮಾಚಿ 1956 ರಲ್ಲಿ ಕೊಡಗು ಕರ್ನಾಟಕವನ್ನು ಸೇರುವುದಕ್ಕೆ ಮೊದಲು ಇದು ರಾಮರಾಜ್ಯವಾಗಿತ್ತೆಂದೂ ಆಗ ಎಲ್ಲಾ ರೀತಿಯ ಸುಖ ಸೌಲಭ್ಯಗಳು ಜನತೆಗಿತ್ತೆಂದೂ 1956 ರಲ್ಲಿ ಕರ್ನಾಟಕ ಸೇರಿದ್ದರಿಂದಲೇ ಜಿಲ್ಲೆಯ ಇಂದಿನ ಎಲ್ಲಾ ಸಮಸ್ಯೆಗಳು ಉದ್ಭವಿಸಿದೆ ಎಂದು ಪ್ರತಿಪಾದಿಸುತ್ತಾ ಬಂದಿದೆ. ಕೊಡಗಿನ ನೆರೆ ಹೊರ ಜಿಲ್ಲೆಗಳವರೂ ರಾಜ್ಯಗಳವರೂ "ಅಕ್ರಮ ವಲಸೆಗಾರರೆಂದು ಅವರ ಅನಿರ್ಬಂದಿತ ಆಗಮನವೇ ಈ ಜಿಲ್ಲೆಯ ಸರ್ವನಾಶಕ್ಕೆ ಕಾರಣವೆಂದೂ ಪ್ರಚಾರ ಮಾಡಿ ನಾಡಿನ ಮುಗ್ಧ ಯುವ ಜನತೆ ಅವರೆಲ್ಲರನ್ನೂ ದ್ವೇಷಿಸುವಂತೆ ಪ್ರೇರೇಪಿಸುತ್ತಾ ಬಂದಿದೆ. ದೇಶಾದ್ಯಂತ 'ಹಿಂದೂ ಎಂದೂ ಒಂದು' ಎಂದು ಅಖಂಡ ಭಾರತವೆಂದು ಪ್ರಚಾರ ಮಾಡಿದ ರಾ.ಸ್ವ.ಸೇ.ಸಂಘ ಮತ್ತು ಭಾಜಪವೇ ಈ ಸಂಘಟನೆಯ ಹುಟ್ಟಿನಿಂದ ರಾಜ್ಯ ಇಂದಿನ ವರೆಗಿನ ಬೆಳವಣಿಗೆಗೆ ಸಂಪೂರ್ಣ ಬೆಂಬಲ ಕೊಟ್ಟ ಸಂಘಟನೆಗಳಾಗಿವೆ.

ಇತ್ತೀಚಿಗಿನ ಸಮಯದಲ್ಲಿ ಈ ಸಂಘಟನೆ ಹೊರ ನೋಟಕ್ಕೆ ಹಲವು ತಿದ್ದುಪಡಿಗಳನ್ನು ತಂದು ಕೊಂಡು ಮೂಲ ನಿವಾಸಿಗಳು ವಲಸೆಗಾರರು ಎಂಬ ತನ್ನ ವಾದವನ್ನು ಕೈ ಬಿಟ್ಟಿರುವುದಾಗಿಯೂ ಕೊಡಗಿನಲ್ಲಿರುವ ಎಲ್ಲರ ಸಹಾಯದೊಂದಿಗೆ ಕರ್ನಾಟಕದ ಕೊಡಗನ್ನು ಪ್ರತ್ಯೇಕಿಸಿ ಕೊಡಗು ರಾಜ್ಯ ಸ್ಥಾಪಿಸುವದೇ ತನ್ನ ಗುರಿ ಎಂದೂ ಈ ಸಂಘಟನೆಯ ಮುಖಂಡರು ಹೇಳಲಾರಂಭಿಸಿದರು.

ಕೊಡಗಿನ ಅತ್ಯಂತ ಶ್ರೀಮಂತ ಹಾಗೂ ಹೆಚ್ಚು ಭೂಮಿಯ ಒಡೆಯರೆಲ್ಲ ಹೆಚ್ಚಾಗಿ ಕೊಡಗಿನ 18 ಮೂಲ ನಿವಾಸಿ ಗುಂಪುಗಳಲ್ಲಿ ಒಂದಾದ ಕೊಡವ ಜನಾವಿಭಾಗಕ್ಕೆ ಸೇರಿದವರಾಗಿದ್ದಾರೆ. ಈ ಜನವಿಭಾಗದ ಬಹುಸಂಖ್ಯಾತರು ಮಧ್ಯಮ, ಬಡ ರೈತರಾದರೂ ಬೆರಳೆಣಿಕೆಯ ಮಂದಿ ಆಗರ್ಭ ಶ್ರೀಮಂತರನ್ನು ಹೊಂದಿದ್ದು ಅವರೇ ಈ ಜಿಲ್ಲೆಯ ಅತ್ಯಂತ ಶ್ರೀಮಂತರು. ಈ ಜನವಿಭಾಗದ ಈ ಬೆರಳೆಣಿಕೆ ಮಂದಿ ದೊಡ್ಡ ಪ್ಲಾಂಟರುಗಳು ಮತ್ತು ಆಗರ್ಭ ಶ್ರೀಮಂತರನ್ನು ಪ್ರತಿನಿಧೀಕರಿಸುವ ಹಲವರು ಇತ್ತೀಚಿಗೆ ನಡೆದ ವಿಧಾನ ಸಭಾ ಚುನಾವಣಾ ಸಂದರ್ಭದಲ್ಲಿ ಸಭೆ ಸೇರಿ ಕೊಡಗಿನ 3 ವಿಧಾನ ಸಭಾ ಸ್ಥಾನಗಳಲ್ಲಿ ಒಂದಾದ ವಿರಾಜಪೇಟೆ ಕ್ಷೇತ್ರವನ್ನು ಮೀಸಲಾತಿ ಕ್ಷೇತ್ರವನ್ನಾಗಿಸುವುದನ್ನು ರದ್ದು ಗೊಳಿಸಿ ಕೊಡವರಿಗೇ ಮೀಸಲಾಗಿಸಬೇಕೆಂಬ ಬೇಡಿಕೆ ಮಂಡಿಸಿದರು. ಈ ನಿರ್ಣಯವನ್ನು ಸ್ವೀಕರಿಸುವುದಕ್ಕೆ ಸಕ್ರಿಯವಾಗಿ ದುಡಿದವರು ಕೊಡಗು ರಾಜ್ಯ ಮುಕ್ತಿ ಮೋರ್ಚಾದ ಏಕೈಕ ಮುಖಂಡ ನಂದಿನೆರವಂಡ ನಾಚಪ್ಪ ನವರು ಮತ್ತು ವಿರಾಜಪೇಟೆ ತಾಲ್ಲೂಕಿನ ಭಾ.ಜ.ಪ ಮುಖಂಡರು. ಆದರೆ ಈ ಬೇಡಿಕೆಗೆ ಸಾರ್ವತ್ರಿಕ ಬೆಂಬಲ ಸಿಗಲಿಲ್ಲ. ವಿರಾಜಪೇಟೆಯ ಕಾಂಗ್ರೆಸ್ ಮುಖಂಡ ಸಿ.ಬಿ. ಅಯ್ಯಪ್ಪ, ಲೋಕಶಕ್ತಿಯ ಹಿರಿಯ ಮುಖಂಡ ಜಮ್ಮಡ ಕರುಂಬಯ್ಯ, ಕೊಡಗಿನ ಖ್ಯಾತ ಬರಹಗಾರ, ನಾಟಕ ರಚಕನಾದ ಅಡ್ಡಂಡ ಕಾರ್ಯಪ್ಪ ಮೊದಲಾದವರಲ್ಲದೆ ಭಾ.ಜ.ಪ. ದಲ್ಲೇ ಬೇರೆ ಕೆಲವು ಮುಖಂಡರೂ ಈ ಬೇಡಿಕೆಯನ್ನು ಆಳವಾಗಿ ವಿರೋಧಿಸಿದರು. ವಿರಾಜಪೇಟೆಯನ್ನು ಸಾಮಾನ್ಯ ಕ್ಷೇತ್ರವಾಗಿಸಬೇಕೆಂದು ಅವರು ವಾದಿಸಿದರು. 'ಕೊಡವರೇ ಮೀಸಲಾತಿ' ಬೇಡಿಕೆ ಸಾಕಷ್ಟು ಬೆಂಬಲ ಸಿಗುವುದಿಲ್ಲವೆಂದಾದಾಗ ನಾಚಪ್ಪನವರು ಹೊರನುಸುಳಿದರು. ಭಾ.ಜ.ಪಾ ದ ಮುಖಂಡರು ತಪ್ಪಿಸಿಕೊಂಡರು ಅವರೆಲ್ಲರೂ ಅಖಿಲ ಭಾರತ ಕೊಡವ ಸಮಾಜದ ಅಧ್ಯಕ್ಷ ಮಾತಂಡ ಮೊಣ್ಣಪ್ಪನವರ ತಲೆಯ ಮೇಲೆ ಆರೋಪ ಹೊರಿಸಿ ತಾವು ಸಭ್ಯತೆಗೆ ಸೋಗು ಹಾಕಿಕೊಂಡರು. ಈ ಘಟನೆ ನಾಚಪ್ಪನವರ ನಿಜ ಸ್ವರೂಪವನ್ನು ಬಯಲಿಗೆ ತರುತ್ತದೆ. ಹೊರನೋಟಕ್ಕೆ ಬದಲಾದಂತೆ ತೋರಿಸಿಕೊಂಡರೂ ಅಂತರ್ಯದಲ್ಲಿ ನಾಚಪ್ಪನವರು ಕಟು ಜನಾಂಗವಾದಿಯಾದ ಫ್ಯಾಸಿಸ್ಟ್ ಸ್ವರೂಪದವರೆಂದು ಸಂದರ್ಭ ಸಾಧಕರೆಂದೂ ಮಾತಂಡ ಮೊಣ್ಣಪ್ಪನವರೇ ಸಾಬೀತು ಗೊಳಿಸಿದ್ದಾರೆ.

ಈ ಬಾರಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್, ಭಾಜಪ ಎರಡೂ ಪಕ್ಷಗಳ ಅಭ್ಯರ್ಥಿಗಳು ಸಂದರ್ಭ ಸಾಧಕ ನೀತಿ ಮುಂದುವರಿಸಿದ್ದಾರೆ. ವಿರಾಜಪೇಟೆ ಕ್ಷೇತ್ರದಲ್ಲಿ ಇವರು ದಿವ್ಯಮೌನ ತಾಳಿದರು. ಸೋಮವಾರಪೇಟೆಯಲ್ಲಿ ಪ್ರತ್ಯೇಕವಾದದ ಕಟು ವಿರೋಧಿಗಳು. ಮಡಿಕೇರಿಯಲ್ಲಿ ಅದರಲ್ಲೂ ಇಲ್ಲ - ಇದರಲ್ಲೂ ಇಲ್ಲ ಎಂಬಂತಹವರು. ಆದರೆ ಮಡಿಕೇರಿ ಕ್ಷೇತ್ರದಲ್ಲಿ ಭಾ.ಜ.ಪ. ದಿಂದ ಹೊರಟು ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಮತ್ತು ಪ್ರತ್ಯೇಕತಾವಾದದ ಕಟು ವಿರೋಧ ಮಾಡಿದ ದಂಬೆಕೋಟಿಮಾದಪ್ಪನವರ ವಿರುದ್ಧ ಕಾಂಗ್ರೆಸ್‌ನ ಅಭ್ಯರ್ಥಿ ಎಂ.ಎಂ.ನಾಣಯ್ಯನವರಿಗೆ ಮು.ಮೋರ್ಚಾದ ಮುಖಂಡ ನಾಚಪ್ಪನವರು ಬಹಿರಂಗ ಭೆಂಬಲ ನೀಡಿದ್ದರು. ಇದರಿಂದ ನೊಂದ ಭಾ.ಜ.ಪ. ಕೊಡಗಿನಲ್ಲಿ 'ಕೊಡಗು ರಾಜ್ಯ ಮುಕ್ತಿ ಮೋರ್ಚಾ ಬೇಡ ಪ್ರಜಾವೇದಿಕೆಯೂ ಬೇಡ' ಎಂದು ಘೋಷಿಸಿ ಇಲ್ಲಿಯವರೆಗೆ ಪ್ರತ್ಯೇಕತಾವಾದಿಗಳಿಗೆ ನೀಡಿದ್ದ ತಮ್ಮ ಬೆಂಬಲ ಹಿಂತೆಗೆದುಕೊಂಡಿದೆ.

ಕಾಂಗ್ರೆಸ್ ಪಕ್ಷದ ರಾಜ್ಯ ಮುಖಂಡರೂ ಜಿಲ್ಲಾ ಅಧ್ಯಕ್ಷರೂ ಪ್ರತ್ಯೇಕತೆಯ ವಿರುದ್ಧ ಹೇಳಿಕೆ ನೀಡಿದ್ದಾರೆ. ಸೋಮವಾರಪೇಟೆ ತಾಲೂಕಿನ ಎಲ್ಲಾ ಪಕ್ಷಗಳ ಸದಸ್ಯರುಗಳು ಪ್ರತ್ಯೇಕತೆಗೆ ತಮ್ಮ ಸಂಪೂರ್ಣ ವಿರೋಧ ಘೋಷಿಸಿದ್ದಾರೆ. ನೆನ್ನೆಯವರೆಗೂ ಕೆ.ಆರ್.ಎಂ.ಎಂ.ಗೆ ಬೆಂಬಲ ನೀಡಿದ್ದ ಅಖಿಲ ಕೊಡವ ಸಮಾಜದ ಅಧ್ಯಕ್ಷರೂ ಕೂಡ ಪ್ರತ್ಯೇಕತಾವಾದಿ ಮೋರ್ಚಾಕ್ಕೆ ತನ್ನ ಬೆಂಬಲ ಹಿಂತೆಗೆದಿದ್ದಾರೆ.

ಕೊ.ರಾ.ಮು.ಮೋ. ವನ್ನು ಇಂದಿನವರೆಗೂ ಬೆಂಬಲಿಸುತ್ತಾ ಬಂದ ಮತ್ತೊಂದು ಪ್ರಮುಖ ಸಂಘಟನೆ ಪಶ್ಚಿಮ ಘಟ್ಟ ಸಂರಕ್ಷಣಾ ಸಮಿತಿಯ ಮುಖಂಡ ಕಾಳಚ್ಚಂಡ ರವಿಯವರೂ ತಮ್ಮ ಬೆಂಬಲ ಹಿಂತೆಗೆದಿರುವುದಾಗಿ ಘೋಷಿಸುವುದರೊಂದಿಗೇ ಪತ್ರ ಸಮ್ಮೇಳನವೊಂದರಲ್ಲಿ ಮೋರ್ಚಾದ ಅಂತರಂಗದ ಭೀಭತ್ಸ ಸ್ವರೂಪವನ್ನು ಬಯಲಿಗೆಳೆದಿದ್ದಾರೆ. ಹೀಗೆ, ನಿನ್ನೆಯವರೆಗೂ ಬೆಂಬಲ ನೀಡಿದ್ದ ಓರೋರ್ವರನ್ನು ಕಳೆದುಕೊಳ್ಳುತ್ತಾ ಆ ಪ್ರತ್ಯೇಕತಾವಾದಿ ಸಂಘಟನೆ ದುರ್ಬಲವಾಗುತ್ತಾ ಸ್ವಾಭಾವಿಕ ಸಾವಿನತ್ತ ಸಾಗುತ್ತಿದೆ. ತಮ್ಮ ಸಮಸ್ಯೆಗಳನ್ನು ವಸ್ತುನಿಷ್ಠವಾಗಿ ಅಧ್ಯಯನ ಮಾಡಿ ಅವುಗಳ ಪರಿಹಾರಕ್ಕೆ ಹೋರಾಡುವುದೊಂದೇ ಮಾರ್ಗವೆಂದು ಹೆಚ್ಚು ಹೆಚ್ಚು ಕೊಡಗಿನ ಜನಸಾಮಾನ್ಯರು ಅರ್ಥ ಮಾಡಿಕೊಳ್ಳುತ್ತಿದ್ದಾರೆ.

ಇಂತಹ ಪರಿಸ್ಥಿತಿಯಲ್ಲಿ ದುರ್ಬಲಗೊಳ್ಳುತ್ತಿರುವ ಸಂಘಟನೆಗೆ ಜೀವಕೊಡಲು ಇಂದು ಕೃಷ್ಣಮಂತ್ರಿ ಮಂಡಲದಲ್ಲಿ ಅಬ್ಕಾರಿ ಮಂತ್ರಿಗಳಾಗಿರುವ ಕಾಂಗ್ರೆಸ್ಸಿನ ಎಂ.ಎಂ.ನಾಣಯ್ಯನವರು ರಂಗ ಪ್ರವೇಶ ಮಾಡಿದ್ದಾರೆ. ನವೆಂಬರ್ 8 ರಂದು ಬೆಂಗಳೂರು ಚಲೋ ನಡೆಸಲು ಉದ್ದೇಶಿಸಿರುವುದನ್ನು ಮೋರ್ಚಾ ಕೈಬಿಡಬೇಕೆಂದೂ, ತಾನು ಆ ಸಂಘಟನೆಯ ಮುಖಂಡನನ್ನು ಮುಖ್ಯ ಮಂತ್ರಿಗಳೊಂದಿಗೆ ಮಾತುಕತೆಗೆ ಒಯ್ಯುವುದಾಗಿಯೂ ಭರವಸೆ ನೀಡಿದ್ದಾರೆ. ಮೋರ್ಚಾ ಕೊಡಗಿನ ಅಭಿವೃದ್ಧಿಗಾಗಿ ಹೋರಾಡುವ ಸಂಘಟನೆ ಎಂದು ಸುಳ್ಳು ಹೇಳಲೂ ಗಾಂಧಿ ಭಕ್ತರಾದ ಮಾನ್ಯ ಮಂತ್ರಿಗಳು ಹಿಂಜರಿಯುತ್ತಿಲ್ಲ.

ಮೋರ್ಚಾ ಈ ರೀತಿ 'ಚಲೋ' ಗಳ[...] ನಡೆಸುವುದು ಹೊಸತೇನಲ್ಲ. ಹಿಂದೆ 'ದ[...] ಚಲೋ' ಸಂಘಟಿಸಿತ್ತು. ಆಗ ದೆಹಲಿ[...] ಹೋಗುವಾಗ ರಾಜ್ಯ ತರುವುದೊಂದೇ ಎಂ[...] ಭಾವನೆಯನ್ನು ಸಂಘಟಕರು ಸೃಷ್ಟಿಸಿದ್ದರು. ಆದ[...] ಸಾಧಿಸಿದ್ದೇನು? ಅದೇ ರೀತಿ ಬೆಂಗಳೂ[...] ಚಲೋದಿಂದಲೂ ಏನೂ ಆಗುವುದಿಲ್ಲ.

ಮೋರ್ಚಾ ಕೊಡಗು ಪ್ರತ್ಯೇಕತೆಯ ಬಗ್ಗೆಯ[...] ಮಾತನಾಡುತ್ತಿದ್ದು ಜಿಲ್ಲೆಯ ಅಭಿವೃದ್ಧಿಯ ಬ[...] ಮಾತನಾಡಿಯೇ ಇಲ್ಲ. ಹಾಗಿರುವಾಗ ಕರ್ನಾಟಕ[...] ಮುಖ್ಯಮಂತ್ರಿಗಳು ಕರ್ನಾಟಕವ[...] ವಿಭಜಿಸಬೇಕೆನ್ನುವ ಸಂಘಟನೆಯೊಂದಿ[...] ಮಾತನಾಡಬೇಕೇ? ಕರ್ನಾಟಕ ಮಂತ್ರಿಮಂಡಲ[...] ಸದಸ್ಯರೋರ್ವರು ಪ್ರತ್ಯೇಕತವಾದಿಗಳೊಡ[...] ಮಾತುಕತೆ ನಡೆಸಬೇಕೆಂದು ಆಶಿಸುವುದ[...] ಅರ್ಥವೇನು? ನಾಳೆ ರಾಜ್ಯಾದ್ಯಂ[...] ನಾಯಿಕೊಡೆಗಳ[...] ಪ್ರತ್ಯೇಕತಾವಾ[...] ಸಂಘಟನೆಗಳ[...] ಹುಟ್ಟಿಕೊಂಡ[...] ಅವುಗಳೆಲ್ಲವು[...] - ರೊಂದಿ[...] ಮಾತುಕ[...] ಮಾಡಬೇಕೆಂದ[...] ರಾಜ್ಯದ ಕಾಂಗ್ರೆ[...] ಮಂತ್ರಿ ಮಂಡಳ[...] ನಿಲುಮೆಯೇ?


'ಪ್ರತ್ಯೇಕತ[...] ವಾದವನ್ನು ಬಿಡದೆ ಮಾತುಕತೆಯೂ ಇಲ್ಲ' ದಿಟ್ಟ ನಿಲು[...] ಹಿಂದಿನ ಮಂತ್ರಿಮಂಡಳದಲ್ಲಿ ಮಂತ್ರಿ ಮೇರಿಯ[...] ಸಿ.ನಾಣಯ್ಯನವರದ್ದಾಗಿತ್ತು. ಅದೇ ದಿ[...] ನಿಲುಮೆಯನ್ನು ಕರ್ನಾಟಕ ರಾಜ್ಯ ಸರ್ಕಾರ ಹಾ[...] ಮುಖ್ಯಮಂತ್ರಿ ಗಳು ತಳೆಯಬೇಕು.

ಹಿಂದೆ ಸ್ವಂತ ಲಾಭಕ್ಕಾಗಿ, ಸಂಕುಚಿ[...] ಲಕ್ಷಲಾಭಕ್ಕಾಗಿ, ಐಕ್ಯಭಂಜಕ ಶಕ್ತಿಗಳನ್ನು ಮತಾ[...] ಶಕ್ತಿಗಳನ್ನು ಬೆಂಬಲಿಸಿದ್ದರಿಂದ ದೇಶದಲ್ಲಾ[...] ಅನಾಹುತವನ್ನು ನೆನಪಿಸಿಕೊಂಡು ಅದರಿಂ[...] ಕಾಂಗ್ರೆಸ್ ರಾಜ್ಯ ಸರ್ಕಾರ ಪಾಠ ಕಲಿಯಬೇ[...] ತಮ್ಮ ಪಕ್ಷದ,ತಮ್ಮದೇ ಸಂಪುಟ ಸಚಿವರಿಗೆ ಸೂ[...] ನಿರ್ದೇಶನ ನೀಡಬೇಕು. ಇಲ್ಲದಿದ್ದಲ್ಲಿ ಕಾಂಗ್ರೆ[...] ಪಕ್ಷ ಹಾಗೂ ರಾಜ್ಯ ಸರ್ಕಾ[...] ಹೊಣೆಯಾಗಬೇಕಾಗುತ್ತದೆ.

ಕೊಡಗನ್ನೊಳಗೊಂಡು ಕರ್ನಾಟಕದ ಜನ[...] ಅನುಭವಿಸುತ್ತಿರುವ ಸಮಸ್ಯೆಗಳ ಪರಿಹಾರಕ[...] ಉಚಿತ ಅಭಿವೃದ್ಧಿ ಕಾರ್ಯಕ್ರಮದ ಆಧಾರದ[...] ಸಂಘಟಿತ ಹೋರಾಟವಲ್ಲದೆ ಪ್ರತ್ಯೇಕತೆ ಉತ್ತರ[...] ಎಂದು ನಾಡಿನ ಜನತೆ ಒಕ್ಕೊರಲಿನಿಂ[...] ಘೋಷಿಸಬೇಕು.

ಎಂ.ಎಂ.ನಾಣಯ್ಯನವರಂತಹ ಸಂದರ್ಭಸಾಧ[...] ಕಾಂಗ್ರೆಸ್ ಧುರೀಣರ ವಿರುದ್ಧ ಕಾಂಗ್ರೆ[...] ಪಕ್ಷವನ್ನೊಳಗೊಂಡು ನಾಡಿನ ಎಲ[...] ಪ್ರತ್ಯೇಕತಾವಾದಿ ವಿರೋಧಿ ಶಕ್ತಿಗಳೆಲ್ಲರೂ ಒಂದಾ[...] ದನಿ ಎತ್ತಬೇಕು.

ಕಾಂ. ಸುರ್ಜಿತ್ ಆಸ್ತಿ ಪಕ್ಷಕ್ಕೆ



ತನ್ನ ಇಡೀ ಜೀವನವನ್ನು ಪಕ್ಷಕ್ಕಾಗಿ ಮೀಸಲಿರಿಸಿದ ಪ್ರಧಾನ ಕಾರ್ಯದರ್ಶಿ ಕಾಂ. ಹರ್ಕಿಶನ್ ಸಿಂಗ್ ಸುರ್ಜಿತ್ ತನ್ನ ಪಾಲಿಗೆ ಬಂದ ಆಸ್ತಿಯನ್ನು ಸಿಪಿಐ(ಎಂ) ಪಕ್ಷಕ್ಕೆ ನೀಡುವುದರ ಮೂಲಕ ಕಮ್ಯುನಿಸ್ಟ್ ತ್ಯಾಗದ ಉತ್ತುಂಗಕ್ಕೇರಿದ್ದಾರೆ.

ಪಕ್ಷದ ಪೊಲಿಟ್‌ಬ್ಯೂರೋಗೆ ನೀಡಿದ ಪತ್ರದಲ್ಲಿ ಕಮ್ಯುನಿಸ್ಟ್ ನಾಯಕರುಗಳಾದ ಪಿ.ಸುಂದರಯ್ಯ, ಇ.ಎಂ.ಎಸ್. ನಂಬೂದರಿಪಾಡ್, ಎಂ.ಬಸವಪೊನ್ನಯ್ಯ ಮತ್ತು ಸಿ.ರಾಜೇಶ್ವರರಾವ್ ಅವರುಗಳು ತಮ್ಮ ಆಸ್ತಿಯನ್ನು ಪಕ್ಷಕ್ಕೆ ನೀಡಿದುದನ್ನು ನೆನಪಿಸಿಕೊಂಡ ಕಾಂ. ಸುರ್ಜಿತ್ 'ಆ ಸ್ಫೂರ್ತಿಯೇ ನನಗೆ ಪ್ರೇರಣೆ ಎಂದು' ತಿಳಿಸಿದ್ದಾರೆ. ಅಂದಿನ ಸಂದರ್ಭದಲ್ಲಿ ಕಾಂ. ಸುರ್ಜಿತ್ ಹೆಸರಿನಲ್ಲಿ ಯಾವುದೇ ಆಸ್ತಿ ಇರಲಿಲ್ಲ. ನಂತರ ಅವರ ತಂದೆಯಿಂದ ಬಂದ ಆಸ್ತಿಯನ್ನು ಕುಟುಂಬದವರು ನೋಡಿಕೊಳ್ಳುತ್ತಿದ್ದರು. ಇದೀಗ ಅವರ ಕುಟುಂಬದೊಂದಿಗೆ ಮಾತುಕತೆ ನಡೆಸಿ ಆಸ್ತಿಯ ಭಾಗದ ಹಣದಲ್ಲಿ ರೂ. 20 ಲಕ್ಷವನ್ನು ಪಕ್ಷದ ಕೇಂದ್ರ ಸಮಿತಿಗೂ, ರೂ. 10 ಲಕ್ಷವನ್ನು ಪಂಜಾಬಿನಲ್ಲಿರುವ ಸೋಹನ್ ಸಿಂಗ್ ಭಾಗ್[...] ಸ್ಮಾರಕ ದತ್ತಿಗೆ ನೀಡಲಾಗಿದೆ. ಈ ದತ್ತಿಯು[...] ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ[...] ಮಡಿದ ಹುತಾತ್ಮರ ಸ್ಮಾರಕ ಕಟ್ಟಡವನ್ನು[...] ಕಟ್ಟಿಸುತ್ತಿದ್ದಾರೆ. ಕಾಂ. ಸುರ್ಜಿತ್‌ಅವರು[...] ತಮ್ಮ ರಾಜ್ಯಸಭಾ ನಿವೃತ್ತಿ ವೇತನವನ್ನೂ[...] ಪಕ್ಷಕ್ಕೆ ನೀಡಿದ್ದಾರೆ. ಒಬ್ಬ ಪೂರ್ಣಾವಧಿ[...] ಕಾರ್ಯಕರ್ತ ಪಡೆಯುವ[...] ಸಂಭಾವನೆಯನ್ನು ಪಡೆದು ಉಳಿದುದನ್ನು[...] ಲೆವಿಯಾಗಿ ಪಕ್ಷಕ್ಕೆ ನೀಡುತ್ತಿದ್ದಾರೆ.

ಚೀನಾ ಕ್ರಾಂತಿಯ 50ನೇ ವಾರ್ಷಿ[...] ಕೋತ್ಸವದ ಈ ಸಂದರ್ಭದಲ್ಲಿ ಕ್ರಾಂತಿಯ[...] ಮುಖಂಡರ ತ್ಯಾಗದ ಸ್ಫೂರ್ತಿಯನ್ನು ಕಾಂ. ಸುರ್ಜಿತ್ ನೆನಪಿಸಿದ್ದಾರೆ.

ಅಕ್ಟೋಬರ್ ಕ್ರಾಂತಿ - ಈ ಶತಮಾನದ ಮಹಾನ್ ಘಟನೆ



೧೯೧೭ ರ ಅಕ್ಟೋಬರ್‌ನಲ್ಲಿ ನಡೆದ ಸಮಾಜವಾದಿ ಕ್ರಾಂತಿ ಈ ಶತಮಾನದ ಮಹಾನ್ ಘಟನೆ ಎಂದು ಸಮಾಜವಾದದ ವೈರಿಗಳೂ ಒಪ್ಪುವ ಮಾತು. ಮನುಕುಲದ ಬೆಳವಣಿಗೆಯಲ್ಲಿ ಸಮಾಜವಾದಿ ಯುಗದ ಆರಂಭದ ಪ್ರಭಾತಫೇರಿಯಾಗಿತ್ತು ಆ ಘಟನೆ. ಈ ವರ್ಷದ ನವೆಂಬರ್ ೭ ರಂದು ಜಗತ್ತಿನ ಪ್ರಗತಿಪರ ಜನ ಆಚರಿಸುವ ಅಕ್ಟೋಬರ್ ಕ್ರಾಂತಿಯ ವಾರ್ಷಿಕೋತ್ಸವ ಈ ಶತಮಾನದ ಕೊನೆಯ ಆಚರಣೆ. ಈ ಶತಮಾನದಲ್ಲಿ ಇಡೀ ಜಗತ್ತಿನ ಎಲ್ಲಾ ದೇಶಗಳ ಜನಗಳ ಬದುಕಿನಲ್ಲಿ ಪ್ರಮುಖ ಪಾತ್ರವಹಿಸಿದೆ ಅಕ್ಟೋಬರ್ ಕ್ರಾಂತಿ. ಈ ಶತಮಾನದಲ್ಲಿ ಮನುಕುಲದ ಮಹಾನ್ ಮುನ್ನಡೆಯ ಹಿಂದೆ ಇದ್ದ ಚಾಲಕ ಶಕ್ತಿ. ೧೯೯೧ ರಲ್ಲಿ ಕುಸಿದು ೯೦ ರ ದಶಕದಲ್ಲಿ ಆ ವ್ಯವಸ್ಥೆ ಮಾಜಿ ಸೋವಿಯತ್ ಒಕ್ಕೂಟದ ಹಲವು ಗಣರಾಜ್ಯಗಳಲ್ಲಿ ಅವಸಾನ ಕಂಡಿರುವುದು, ಈ ಮಹಾನ್ ಘಟನೆಯ ಮಹತ್ವವನ್ನೇನೂ ಕಡಿಮೆ ಮಾಡುವುದಿಲ್ಲ. ಬದಲಾಗಿ ಕಳೆದ ೧೦ ವರ್ಷಗಳಲ್ಲಿ ಈ ದೇಶಗಳ ಅವಸಾನ, ಬಂಡವಾಳಶಾಹಿ ವ್ಯವಸ್ಥೆ ಜನರ ಸಮಸ್ಯೆಯನ್ನು ಬಗೆಹರಿಸದು. ಸಮಾಜವಾದಿ ವ್ಯವಸ್ಥೆಯ ಪುನರುತ್ಥಾನದಿಂದ ಮಾತ್ರ ಜನರ ಬಾಳು ಬೆಳಗಲು ಸಾಧ್ಯ ಎಂದು ಇನ್ನೂ ಸ್ಪಷ್ಟವಾಗಿ ತೋರಿದೆ.

ಈ ಶತಮಾನದ ಕೊನೆಯ ಅಕ್ಟೋಬರ್ ಕ್ರಾಂತಿಯ ಮಹತ್ವದ ಬಗ್ಗೆ ಬೆಳಕು ಚೆಲ್ಲುವ ಲೇಖನ.

ಈ ಶತಮಾನದ ಆರಂಭದಲ್ಲಿ ನಡೆದ ಅಕ್ಟೋಬರ್ ಕ್ರಾಂತಿ ಈ ಶತಮಾನದ ಮಹಾನ್ ಘಟನೆ. ಇಡೀ ಶತಮಾನದ ಘಟನಾವಳಿ, ಬೆಳವಣಿಗೆಗಳ ಮೇಲೆ ಅಗಾಧ ಪರಿಣಾಮ ಬೀರಿದ ಘಟನೆ. ಈವರೆಗೆ ಎಲ್ಲಾ ದೇಶಗಳಲ್ಲೂ ಆಳುತ್ತಿದ್ದುದು ಒಂದಲ್ಲ ಒಂದು ರೀತಿಯ ಶೋಷಕ ವರ್ಗ. ಜಗತ್ತಿನ ಚರಿತ್ರೆಯಲ್ಲೇ ಮೊದಲ ಬಾರಿಗೆ ಶೋಷಿತರು ಶೋಷಕ ವರ್ಗವನ್ನು ಬಡಿದೋಡಿಸಿ ಸರ್ಕಾರವನ್ನು ರಚಿಸಿದ್ದರು. ಹಿಂದಿನ 'ಕ್ರಾಂತಿ' ಗಳೆಲ್ಲಾ ಒಂದು ಶೋಷಕ ವರ್ಗದಿಂದ ಇನ್ನೊಂದು ಶೋಷಕ ವರ್ಗಕ್ಕೆ ಅಧಿಕಾರದ ಹಸ್ತಾಂತರವಾಗಿತ್ತು.

ಅತ್ಯಂತ ಹಿಂದುಳಿದ ದೇಶವಾಗಿದ್ದ ರಶ್ಯಾ ಮತ್ತು ಮಾಜಿ ಝಾರನ ಅಡಿಯಾಳು ದೇಶಗಳಾಗಿದ್ದ ಹಲವು ಇನ್ನೂ ಹಿಂದುಳಿದ ದೇಶಗಳು ಒಂದು ಮಹಾನ್ ಒಕ್ಕೂಟವನ್ನು ಸ್ಥಾಪಿಸಿದ್ದು, ಕೇವಲ ಮೂರು ನಾಲ್ಕು ದೇಶಗಳಲ್ಲಿ ಆಧುನಿಕ ಅಭಿವೃದ್ಧಿ ಕೈಗಾರಿಕಾ ದೇಶಗಳಾಗಿದ್ದು ಸಮಾಜವಾದಿ ಯೋಜಿತ ಬೆಳವಣಿಗೆಯನ್ನು ಇಡೀ ಜಗತ್ತಿಗೆ ಪ್ರದರ್ಶಿಸಿತ್ತು. ಆಮೇಲಿನ ದಶಕಗಳಲ್ಲಿ ವಿಜ್ಞಾನ, ತಂತ್ರಜ್ಞಾನ, ಕೈಗಾರಿಕೆ, ಕೃಷಿಗಳಲ್ಲಿ ಅದ್ಭುತ ಪ್ರಗತಿ ಸಾಧಿಸಿ ಜಗತ್ತಿನ ಸೂಪರ್ ಪವರ್‌ಗಳಲ್ಲಿ ಒಂದಾಗಿ ಬೆಳೆದಿದ್ದು ಈ ಶತಮಾನದ ಅಭೂತಪೂರ್ವ ಘಟನೆಗಳಲ್ಲೊಂದು. ಅಮೆರಿಕ ಮೂರು ಶತಮಾನಗಳಲ್ಲಿ ಸಾಧಿಸಿದ ಪ್ರಗತಿಯನ್ನು ಕೇವಲ ಮೂರು ದಶಕಗಳಲ್ಲಿ ಸಾಧಿಸಿ ಹಲವು ಕ್ಷೇತ್ರಗಳಲ್ಲಿ ಅಮೆರಿಕದ ಪ್ರಗತಿಗೆ ಸಮಾನವಾಗಿ ನಿಂತದ್ದು, ಹಲವು ಕ್ಷೇತ್ರಗಳಲ್ಲಿ ಅಮೆರಿಕವನ್ನು ಮೀರಿಸಿ ನಿಂತದ್ದು ಈ ಶತಮಾನದ ಅದ್ಭುತಗಳಲ್ಲೊಂದು.

ಜಗತ್ತಿನ ಪ್ರಥಮ ಕೃತಕ ಉಪಗ್ರಹ ಸ್ಪುಟ್ನಿಕ್‌ಅನ್ನು ಹಾರಬಿಟ್ಟು ಈ ಶತಮಾನದ ಬಾಹ್ಯಾಕಾಶ ಯುಗವನ್ನು ಆರಂಭಿಸಿದ್ದು ಸಮಾಜವಾದಿ ಸೋವಿಯತ್ ಒಕ್ಕೂಟದ ಹೆಗ್ಗಳಿಕೆಯಲ್ಲೊಂದು. ಬಾಹ್ಯಾಕಾಶದಲ್ಲಿ ಈ ಶತಮಾನದ ಅದ್ಭುತ ಬೆಳವಣಿಗೆಗಳ ಹರಿಕಾರ ಸಮಾಜವಾದಿ ಸೋವಿಯತ್ ಒಕ್ಕೂಟ. ಸೋವಿಯತ್ ಒಕ್ಕೂಟ ಮತ್ತು ಅಮೆರಿಕಗಳ ನಡುವೆ ನಡೆದ ಬಾಹ್ಯಾಕಾಶ ಸ್ಪರ್ಧೆ ಈ ಶತಮಾನದ ವಿಜ್ಞಾನ ಮತ್ತು ತಂತ್ರಜ್ಞಾನದ ನಾಗಾಲೋಟದ ಬೆಳವಣಿಗೆಯ ಇಂಜಿನ್ ಆಗಿತ್ತು. ಅಣು ತಂತ್ರಜ್ಞಾನ ಸೇರಿದಂತೆ ಮುಂದುವರಿದ ವಿಜ್ಞಾನ, ತಂತ್ರಜ್ಞಾನದ ಕ್ಷೇತ್ರಗಳಲ್ಲಿ ಬಹುಸಂಖ್ಯಾತ ಕ್ಷೇತ್ರಗಳಲ್ಲಿ 80 ರ ದಶಕದಲ್ಲೂ ಸೋವಿಯತ್ ಒಕ್ಕೂಟ ಮುಂದಿದ್ದದ್ದು ಸಮಾಜವಾದಿ ವ್ಯವಸ್ಥೆಯ ಹೆಗ್ಗಳಿಕೆಯನ್ನು ತೋರಿಸಿತ್ತು. ಈ ಎಲ್ಲಾ ಸಾಧನೆಗಳು ನಡೆದದ್ದು ಜಗತ್ತಿನ ಪ್ರಬಲ ಸಾಮ್ರಾಜ್ಯಶಾಹಿ ದೇಶಗಳ ಸುತ್ತುವರಿಕೆ, ಆಕ್ರಮಕ ನೀತಿ, ಬೆದರಿಕೆಗಳ ನಡುವೆ ಎಂದು ಮರೆತು ಬಿಡಬಾರದು. ಅಲ್ಲದೆ ಈ ಎಲ್ಲವನ್ನು ಸಾಧಿಸಿದ್ದು ಸಾಮ್ರಾಜ್ಯಶಾಹಿ ದೇಶಗಳು ಮುನ್ನಡೆಗಳಂತೆ, ಆ ದೇಶದ ಜನರ ಉತ್ತಮ ಬದುಕಿನ ಸಾಧ್ಯತೆಗಳನ್ನು ಹೊಸಕಿ, ಬಡದೇಶಗಳನ್ನು ಶೋಷಣೆ ಮಾಡಿ ಅಲ್ಲ. ಸೋವಿಯತ್ ಒಕ್ಕೂಟದ ಜನತೆಯ ಜೀವನ ಮಟ್ಟ ನಾಗಾಲೋಟದಲ್ಲಿ ಏರುತ್ತಿದ್ದಂತೆ ಅವರ ಶ್ರಮದ ಫಲವಾಗಿ ಇದನ್ನು ಸಾಧಿಸಿದ್ದು ಇನ್ನೂ ಹೆಗ್ಗಳಿಕೆಯ ವಿಷಯ.

ಬಂಡವಾಳ ಶಾಹಿ ದೇಶಗಳಲ್ಲಿ ಸಾಮಾಜಿಕ ಸವಲತ್ತುಗಳಿಗೆ ಕಾರಣ

ಈ ಶತಮಾನದಲ್ಲಿ ಬಂಡವಾಳಶಾಹಿ ದೇಶಗಳಲ್ಲಿ ಜನ ಉತ್ತಮ ಜೀವನಮಟ್ಟ ಅನುಭವಿಸಿದರೆ ಅದು ಸೋವಿಯತ್ ಒಕ್ಕೂಟದ, ಅಕ್ಟೋಬರ್ ಕ್ರಾಂತಿಯ ಕೊಡುಗೆ ಎಂದು ಬಹಳ ಜನಕ್ಕೆ ಗೊತ್ತಿಲ್ಲ. ಅಕ್ಟೋಬರ್ ಕ್ರಾಂತಿಯ ಸಾಧ್ಯತೆಗಳಿಂದ ಬೆದರಿದ ಎಲ್ಲಾ ಬಂಡವಾಳ ದೇಶದ ಆಳುವ ವರ್ಗಗಳು, ಕಾರ್ಮಿಕರಿಗೆ 'ಸಮಾಜವಾದಿ ಕ್ರಾಂತಿ' ಮಾಡದಂತೆ ಆಮಿಷವಾಗಿ ಹಲವಾರು ಸವಲತ್ತುಗಳನ್ನು ಕೊಟ್ಟಿದ್ದರು. ಸಮಾಜವಾದಿ ಸೋವಿಯತ್ ಒಕ್ಕೂಟ ತನ್ನ ಜನತೆಗೆ ನೀಡಿದ ಸಾರ್ವತ್ರಿಕ ಉಚಿತ ಶಿಕ್ಷಣ, ಉಚಿತ ವೈದ್ಯಕೀಯ ಸೇವೆ, ನಿವೃತ್ತಿ ವೇತನ, ಸಾಮಾಜಿಕ ಸವಲತ್ತುಗಳಿಗೆ ಪೈಪೋಟಿಯಲ್ಲಿ ಅಷ್ಟಲ್ಲದಿದ್ದರೂ ಗಮನಾರ್ಹ ರೀತಿಯಲ್ಲಿ ಬಂಡವಾಳಶಾಹಿ ಪ್ರಭುತ್ವಗಳು ಇಂತಹುದೇ ಸವಲತ್ತುಗಳನ್ನು ಕೊಡಬೇಕಾಯಿತು. ಯಾರಿಗಾದರೂ ಈ ಬಗ್ಗೆ ಅನುಮಾನ ಇದ್ದರೆ 90 ರ ದಶಕದಲ್ಲಿ ಅಮೆರಿಕ ಮತ್ತು ಯುರೋಪಿನ ಅಭಿವೃದ್ಧಿ ಬಂಡವಾಳಶಾಹಿ ದೇಶಗಳಲ್ಲಿ ಸೋವಿಯತ್ ಒಕ್ಕೂಟದ ಪತನದ ನಂತರ ಈ ಸಾಮಾಜಿಕ ಸವಲತ್ತುಗಳ ಮೇಲೆ ನಡೆಯುತ್ತಿರುವ ಹಲ್ಲೆ, ಆ ಸವಲತ್ತುಗಳಗಳನ್ನು ಅನಾಮತ್ತಾಗಿ ನಿರ್ದಾಕ್ಷಿಣ್ಯವಾಗಿ ಕಸಿದುಕೊಳ್ಳುತ್ತಿರುವುದು ಇದಕ್ಕೆ ಅತ್ಯುತ್ತಮ ಪುರಾವೆ.

ಅಕ್ಟೋಬರ್ ಕ್ರಾಂತಿ, ಸೋವಿಯತ್ ಸ್ಫೂರ್ತಿಯಿಂದ ಮೂರನೇ ಜಗತ್ತಿನ ವಿಮೋಚನೆ, ಸ್ವಾತಂತ್ರ್ಯ.

ಶತಮಾನಗಳಿಂದ ಇತರ ಜನಾಂಗಗಳ ತುಳಿತ, ದಾಸ್ಯಕ್ಕೆ ಒಳಗಾಗಿದ್ದ ಹಲವು ದೇಶಗಳ ಜನ ಸ್ವಾತಂತ್ರ್ಯ ಪಡೆದ ಶತಮಾನ. ಪ್ರಮುಖ ಸಾಮ್ರಾಜ್ಯಶಾಹಿ ದೇಶಗಳಿಂದ ವಿಮೋಚನೆ, ಸ್ವಾತಂತ್ರ್ಯ ಇದರ ಪ್ರಮುಖ ಭಾಗ. ಇದರ ಹಿಂದೆಯೂ ಸೋವಿಯತ್ ಒಕ್ಕೂಟ ಆರ್ಥಿಕ-ಸಾಮಾಜಿಕ ಮಿಲಿಟರಿ ಶಕ್ತಿ ಸದಾ ಇತ್ತು. ಈ ಹಲವು ದೇಶಗಳಲ್ಲಿ (ಅತಿದೊಡ್ಡ ದೇಶಗಳಾದ ಇಂಡಿಯಾ, ಚೀನಾ ಸೇರಿ) ಸ್ವಾತಂತ್ರ್ಯ ಚಳುವಳಿ ಆರಂಭವಾದದ್ದು, ಮಹಾನ್ ಮುನ್ನಡೆ ಸಾಧಿಸಿದ್ದು, ಜನಪರ ತಿರುವ ಮತ್ತು ಶಕ್ತಿ ಪಡೆದದ್ದು ಅಕ್ಟೋಬರ್ ಕ್ರಾಂತಿಯ ಸ್ಫೂರ್ತಿಯಿಂದಾಗೇ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ಇದಲ್ಲದೆ ಫ್ಯಾಸಿಸಂ ಇಡೀ ಜಗತ್ತನ್ನು ಕೆಣಕಿ, ಈ ಶತಮಾನವನ್ನು ಕತ್ತಲ ಶತಮಾನ ಮಾಡ ಹೊರಟಾಗ ಅದನ್ನು ಹಿಮ್ಮೆಟ್ಟಿಸಿದ್ದು 2 ಕೋಟಿ ಸೋವಿಯತ್ ಸೈನಿಕರು, ಪ್ರಜೆಗಳ ಬಲಿದಾನ, ತ್ಯಾಗ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ವಿಜಯದಲ್ಲಿ ಸೋವಿಯತ್ ಒಕ್ಕೂಟದ ಅಗಾಧ ಪಾತ್ರ, ಜಗತ್ತಿನ ಬಹುಸಂಖ್ಯಾತ ದೇಶಗಳ ವಿಮೋಚನೆ, ವಸಾಹತುಶಾಹಿಯಿಂದ ಮುಕ್ತಿಗೆ ಕಾರಣವಾಯಿತು.

ಎರಡನೇ ಮಹಾಯುದ್ಧ ಮುಗಿದ ನಂತರ ಜಗತ್ತಿನ ಮೇಲೆ ತನ್ನ ಆಧಿಪತ್ಯ ಸ್ಥಾಪಿಸಲು ಯತ್ನಿಸಿದ ಅಮೆರಿಕ ಮತ್ತು ಅದರ ಸಾಮ್ರಾಜ್ಯಶಾಹಿ ಮತ್ತು ಮಿಲಿಟರಿ ಬಲಕ್ಕೆ ಸವಾಲು ಹಾಕಿ, ಮಿಲಿಟರಿ ಬಲದಲ್ಲಿ ಸಮಾನತೆ ಸಾಧಿಸಿದ್ದು ಎರಡನೇ ಮಹಾಯುದ್ಧನಂತರ ನಾಲ್ಕು ದಶಕಗಳಲ್ಲಿ ಇನ್ನಷ್ಟು ದೇಶಗಳು ಸ್ವಾತಂತ್ರ್ಯ, ಸಾಮ್ರಾಜ್ಯಶಾಹಿ-ಒತ್ತಡವಿಲ್ಲದ ಸ್ವತಂತ್ರ ಬೆಳವಣಿಗೆ ಸಾಧಿಸಲು ಸಾಧ್ಯ ಮಾಡಿದ ಮುಖ್ಯ ಕಾರಣ. ಭಾರತ ಕಳೆದ ಐದು ದಶಕಗಳಲ್ಲಿ ಸಾಧಿಸಿದ ಪ್ರಗತಿಯ ಹಿಂದೆ ಸೋವಿಯತ್ ಒಕ್ಕೂಟದ ಕೊಡುಗೆ ಅಪಾರ. ಅದರಲ್ಲೂ ನಮ್ಮ ಘನ ಕೈಗಾರಿಕೆ, ವಿಜ್ಞಾನ-ತಂತ್ರಜ್ಞಾನಗಳಲ್ಲಿ ಪ್ರಗತಿ ಸೋವಿಯತ್ ಒಕ್ಕೂಟದ ನೇರ ನೆರವಿನ ಫಲ. ಭಾರತ ಜಗತ್ತಿನಲ್ಲಿ ಆರಂಭಿಸಿದ ಅಲಿಪ್ತ ಚಳುವಳಿಯೂ ಸಾಮ್ರಾಜ್ಯಶಾಹಿಗೆ ಸರಿದೂಗಬಲ್ಲ ಸೋವಿಯತ್ ಒಕ್ಕೂಟದ ಬಲ ಇದ್ದದ್ದರಿಂದ ಮಾತ್ರ ಸಾಧ್ಯವಾದದ್ದು.

ಇಂತಹ ಸೋವಿಯತ್ ಒಕ್ಕೂಟದ ಮಿಲಿಟರಿ ಬಲಾಢ್ಯತೆಯ ನಡುವೆಯೂ ಸಾಮ್ರಾಜ್ಯಶಾಹಿ, ಬಡ ದೇಶಗಳ ಸ್ವಾತಂತ್ರ್ಯ, ಸ್ವತಂತ್ರ ಬೆಳವಣಿಗೆ ಮೇಲೆ ಆಕ್ರಮಣ ಮಾಡಿದಾಗ, ಈ ದೇಶಗಳು ಸಾಮ್ರಾಜ್ಯಶಾಹಿಗೆ ಸೆಡ್ಡು ಹೊಡೆದು ನಿಂತದ್ದು ಸಾಮ್ರಾಜ್ಯಶಾಹಿಯನ್ನು ಹಿಮ್ಮೆಟ್ಟಿಸಲು ಸಾಧ್ಯವಾದದ್ದು ಸೋವಿಯತ್ ಒಕ್ಕೂಟದ ಬಲಾಢ್ಯತೆಯ ಹಿನ್ನೆಲೆಯಲ್ಲೇ. ಚೀನಾಕ್ರಾಂತಿ, ಕ್ಯೂಬಾ ಕ್ರಾಂತಿ, ಅಲ್ಲಿನ ಕ್ರಾಂತಿಗಳ ರಕ್ಷಣೆ, ವಿಯೆಟ್ನಾಮ್ ಯುದ್ಧದಲ್ಲಿ ಜನತೆ ವಿಜಯ, ಆಫ್ರಿಕಾ-ಏಶ್ಯಾ-ದಕ್ಷಿಣ ಅಮೆರಿಕಾಗಳಲ್ಲಿ ಜನ-ಪರ ಚಳುವಳಿಗೆ ಬೆಳವಣಿಗೆಗೆ ಬೆಂಗಾವಲಾಗಿ ನಿಂತಿದ್ದು ಜಗತ್ತಿನ ಏಕಮಾತ್ರ ಜನ-ಪರ ಸೂಪರ್‌ಪವರ್ ಸೋವಿಯತ್ ಒಕ್ಕೂಟದಿಂದಾಗಿ.

ಸೋವಿಯತ್ ಒಕ್ಕೂಟದ ಪತನ ಶತಮಾನದ ಹಿನ್ನಡೆ

1991 ರಲ್ಲಿ ಸೋವಿಯತ್ ಒಕ್ಕೂಟದ ಪತನ, ಅಲ್ಲಿ ಸಮಾಜವಾದ ವ್ಯವಸ್ಥೆ ಕಳಚಿಬಿದ್ದದ್ದು ಈ ಶತಮಾನದ ಕಪ್ಪು ಚುಕ್ಕೆಗಳಲ್ಲೊಂದು. ಸೋವಿಯತ್ ಒಕ್ಕೂಟ, ಪೂರ್ವಯುರೋಪಿನ ದೇಶಗಳ ಜನತೆಗೆ ಮಾತ್ರವಲ್ಲ, ಇಡೀ ಜಗತ್ತಿನ ಜನರ ಪ್ರಗತಿ-ಯತ್ತ ಮುನ್ನಡೆಗೆ ತೀವ್ರ ಆಘಾತ ನೀಡಿದ ಘಟನೆ. ಇದು ಸಾಧ್ಯವಾದದ್ದು ಸಾಮ್ರಾಜ್ಯಶಾಹಿ ಸಮಾಜವಾದಿ ವ್ಯವಸ್ಥೆಯನ್ನು ನಾಶ ಮಾಡಲು ಸತತವಾಗಿ ಆಕ್ರಮಕ ನೀತಿ ಮತ್ತು ಬುಡಮೇಲು ಕಾರ್ಯಾಚರಣೆಗಳ, ಹಾಗೂ ಮಾರ್ಕ್ಸ್‌ವಾದವನ್ನು ಪ್ರತಿಯೊಂದು ದೇಶದ ವಿಶಿಷ್ಟತೆಗೆ ಅನ್ವಯಿಸುವುದರಲ್ಲಿ ಆದ ತಪ್ಪು. ಸಮಾಜವಾದಿ ನಿರ್ಮಾಣದಲ್ಲಿ ಆದ ಭಾರಿ ತಪ್ಪುಗಳು, ಸಾಮ್ರಾಜ್ಯಶಾಹಿ ಜತೆ ಮಿಲಿಟರಿ ಪೈಪೋಟಿಯಿಂದ ಸಾಮಾಜಿಕ, ಕೈಗಾರಿಕಾ ಬೆಳವಣಿಗೆಮೇಲೆ ಆದ ದುಷ್ಪರಿಣಾಮಗಳು, ಇವೆಲ್ಲದಕ್ಕಿಂತಲೂ ಹೆಚ್ಚಾಗಿ ಕಮ್ಯುನಿಸ್ಟ್ ಪಕ್ಷ ಮತ್ತು ದೇಶದಲ್ಲಿ ಸಮಾಜವಾದಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಿ, ಬೆಳೆಸುವಲ್ಲಿ ನಡೆದ ನಿರ್ಲಕ್ಷ್ಯ, ಭಾರೀ ತಪ್ಪುಗಳು ಇವುಗಳಿಂದ ಸಮಾಜವಾದಿ ವ್ಯವಸ್ಥೆ ಸ್ಥಾಪಿಸಹೊರಟಿರುವ ಜನತೆ, ಅದರ ಚಳುವಳಿ ಕಮ್ಯುನಿಸ್ಟ್ ಪಕ್ಷಗಳು, ದೇಶಗಳು ತಕ್ಕ ಪಾಠ ಕಲಿಯಬೇಕು, ಕಲಿಯುತ್ತಿವೆ.

ಕಳೆದ ಒಂದು ದಶಕದ ಘಟನೆಗಳು, ಬಂಡವಾಳಶಾಹಿ ವ್ಯವಸ್ಥೆ ಜನರ ಸಮಸ್ಯೆಗಳ ಪರಿಹಾರಕ್ಕೆ, ಆಶೋತ್ತರ ಈಡೇರಿಸಲು ಸರಿಯಾದ ವ್ಯವಸ್ಥೆ ಅಲ್ಲ ಎನ್ನುವುದು ಪುನಃ ತೋರಿಸಿಕೊಟ್ಟಿದೆ. ಸೋವಿಯತ್ ಒಕ್ಕೂಟ ದೇಶಗಳಲ್ಲಿ ಕೃಷಿ ಕೈಗಾರಿಕೆ, ಜನರ ಜೀವನಮಟ್ಟ ಸಾಮಾಜಿಕ ಸೇವೆಗಳ, ವಿಜ್ಞಾನ-ತಂತ್ರಜ್ಞಾನ ಎಲ್ಲಾ ಕ್ಷೇತ್ರಗಳಲ್ಲಿ ಆಗಿರುವ ಕುಸಿತ, ಇದನ್ನು ತೋರಿಸಿಕೊಡುತ್ತದೆ. ಈ ದೇಶಗಳಲ್ಲಿ ಮಾಫಿಯಾ ಆಡಳಿತ ಜಾರಿಗೆ ಬಂದಿದೆ. ಸೂಪರ್ ಪವರ್ ಆಗಿದ್ದ ರಶ್ಯಾ ಒಂದು ದಶಕದ ಒಳಗೆ ಏಳು ದಶಕಗಳ ಅಪಾರ ಪ್ರಗತಿ ಅಳಿಸಿ ಹಾಕಿ, ಐಎಂಎಫ್ ವಿಶ್ವಬ್ಯಾಂಕ್‌ನ ಎದುರು ಭಿಕ್ಷುಕನಾಗಿದೆ. ರಶ್ಯಾದ ಮಹಾನ್ ಕೈಗಾರಿಕೆ ಕುಸಿದಿದೆ. ಆಳುವ ವರ್ಗಗಳಿಂದ ಕಾರ್ಮಿಕರು ತಿಂಗಳುಗಟ್ಟಲೆ ವೇತನವಿಲ್ಲದೆ ದುಡಿಯಬೇಕಾಗಿದೆ. ಸುಭದ್ರ, ಜನ-ಪರ ಸಮಾಜವಾದಿ ವ್ಯವಸ್ಥೆಯಲ್ಲಿ

12ನೇ ಪುಟಕ್ಕೆ

ಕಾರ್ಲ್ ಮಾರ್ಕ್ಸ್ ಮತ್ತು ಪೋಪ್ ಜಾನ್ ಪಾಲ್

ನಟರಾಜ್ ಹುಳಿಯಾರ್

ಕೃಪೆ: ಲಂಕೇಶ್ ಪತ್ರಿಕೆ

ಈ ಶತಮಾನದ ಚಿಂತಕ ಯಾರು ಎಂಬುದನ್ನು ಕಂಡುಕೊಳ್ಳಲು ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೋರೇಷನ್ (ಬಿ.ಬಿ.ಸಿ) ಕೆಲವು ವಾರಗಳ ಕೆಳಗೆ ಒಂದು ಸರ್ವೆ ನಡೆಸಿತು. ಪ್ರಾಯಶಃ ಈ ನಡೆಸಿದವರೇ ಅಚ್ಚರಿಯಾಗುವಂತೆ 'ಶತಮಾನದ ಚಿಂತಕ ಕಾರ್ಲ್ ಮಾರ್ಕ್ಸ್' ಎಂದು ಬಹುತೇಕರು ಸೂಚಿಸಿದರು. ಮಾರ್ಕ್ಸ್‌ನ 'ದಾಸ್ ಕ್ಯಾಪಿಟಲ್' ಪ್ರಕಟವಾದದ್ದು 1867 ರಲ್ಲಿ.



ಮಾರ್ಕ್ಸ್ ತೀರಿಕೊಂಡಿದ್ದು 1883 ರಲ್ಲಿ. ಆದರೆ ಮಾರ್ಕ್ಸ್ ವಾದಕ್ಕೆ ಅಷ್ಟಾಗಿ ಒಲಿಯದ ಇಪ್ಪತ್ತನೆಯ ಶತಮಾನದಂಚಿನ ಇಂಗ್ಲಿಷ್ ಜನ ಕಾರ್ಲ್ ಮಾರ್ಕ್ಸ್‌ನ ಮಹತ್ವವನ್ನು ಅಂತು ಈ ನಿರ್ಣಯಕ್ಕೆ ಬಂದಿದ್ದರು. ಕಮ್ಯೂನಿಸ್ಟ್ ಲೀಗ್ ನ ಫ್ರೆಡ್ ಬ್ರ್ಯಾಂಡ್ ಅಗಿ ಫ್ರಾನ್ಸಿನಿಂದ ಓಡಿಸಲ್ಪಟ್ಟು ಜರ್ಮನಿ, ಸ್ವಿಟ್ಜರ್‌ಲ್ಯಾಂಡ್ ಗಳಲ್ಲಿ ನೆಲೆ ಸಿಗದ ಮಾರ್ಕ್ಸ್ ಕೊನೆಗೆ ಲಂಡನ್ನಿನಲ್ಲಿ ನೆಲೆ ಕಂಡ. ಇದೆಲ್ಲ ಈಗ ನೂರಕ್ಕೂ ಹೆಚ್ಚು ವರ್ಷಗಳು ಕಳೆದು. ಮಾರ್ಕ್ಸ್ ವಾದದ ಕತೆ ಮುಗಿಯಿತು ಎಂದು ಮಾರ್ಕ್ಸ್ ವಾದಿಗಳು ದಿಗ್ಭ್ರಾಂತರಾಗಿರುವಾಗ, ಬಂಡವಾಳವಾದಿಗಳು ವಿಜಯೋತ್ಸಾಹದಲ್ಲಿರುವಾಗ ಪ್ರಜ್ಞಾವಂತ ಇಂಗ್ಲೀಷ್ ಜನ ಮಾರ್ಕ್ಸ್ ವಾದದ ಪುನರ್‌ಮೌಲ್ಯೀಕರಣದ ಅಗತ್ಯದತ್ತ ಇಡೀ ವಿಶ್ವದ ಸೂಕ್ಷ್ಮಜ್ಞರ ಗಮನ ಸೆಳೆದಿದ್ದಾರೆ.


ಆದರೆ ಈ ಸುದ್ದಿಯನ್ನು ಕೆಲವಾಗಳ ಕೆಳಗೆ ಓದಿರಬಹುದಾದ ಭಾರತೀಯರಿಗೆ ಮೊನ್ನೆ ಒಂದು ವ್ಯಂಗ್ಯದ ಸನ್ನಿವೇಶ ಕಾದಿತ್ತು. ರಾಜ್ಯಸಭೆಯಲ್ಲಿ ಸಿಪಿಐ ನಾಯಕ ಗುರುದಾಸ್ ಗುಪ್ತಾ ಈ ಪ್ರಶ್ನೆಯನ್ನೆತ್ತದಿದ್ದರೆ ಇದು ಪ್ರಾಯಶಃ ಹೆಚ್ಚಿನವರ ಗಮನಕ್ಕೆ ಕೂಡ ಬರುತ್ತಿರಲಿಲ್ಲ. ಕೇಂದ್ರ ಸರ್ಕಾರದ ನಿರ್ವಹಣೆಯಲ್ಲಿರುವ ಸಿ.ಬಿ.ಎಸ್.ಇ. ಸ್ಕೂಲುಗಳ ಸಿಲಬಸ್‌ನಿಂದ ಮಾರ್ಕ್ಸ್ ವಾದ ಕುರಿತ ಅಧ್ಯಾಯವನ್ನು ಕೈಬಿಡಲಾಗಿರುವುದರ ಬಗ್ಗೆ ಗುರುದಾಸ್ ಗುಪ್ತಾ ಸರ್ಕಾರವನ್ನು ಪ್ರಶ್ನಿಸಿದ್ದರು.

ಅವತ್ತು ಪಿಳಿ ಪಿಳಿ ಕಣ್ಣು ಬಿಟ್ಟ ಸರ್ಕಾರ ಮಾರನೆಯ ದಿನ 'ಬೈಬೈಬೈ' ಎಂದಿತು. ಇಂಗ್ಲೀಷ್ ಸಿಲಬಸ್‌ನಲ್ಲಿ 'ಅಚ್ಚಿನ ದೋಷ'ದಿಂದಾಗಿ ಮಾರ್ಕ್ಸ್ ವಾದ ಬಿಟ್ಟು ಹೋಗಿದೆ ಎಂದು ಬೊಗಳೆ ಬಿಟ್ಟಿತು. ಈ ಪ್ರಶ್ನೆಗೆ ಉತ್ತರಿಸಿದ, ಬಿಜೆಪಿಗಳಲ್ಲೇ ಮಾಡರೇಟ್ ಎನ್ನಲಾಗುವ ವಿದೇಶಾಂಗ ಸಚಿವ ಜಸ್ವಂತ್ ಸಿಂಗರಿಗೆ ತಮ್ಮ ಮೂಗಿನ ಕೆಳಗೆ ನಡೆಯುತ್ತಿರುವ ಈ ಉದ್ದೇಶಪೂರ್ವಕ ಅಚ್ಚಿನ ದೋಷ ಯಾವ ಆಂತಕವನ್ನೂ ಹುಟ್ಟಿಸಲಿಲ್ಲ. ಅದು ಹಾಳಾಗಲೆಂದರೆ, ಕೆಳಮನೆಯಲ್ಲಿ ಈ ಎನ್.ಡಿ.ಎ ಕೂಟದ ಪಾಸ್ವಾನ್, ಶರದ್ ಯಾದವ್, ಜಾರ್ಜ್ ಫರ್ನಾಂಡಿಸ್‌ಗಳಿಗಾಗಲೀ, ವಿರೋಧ ಪಕ್ಷದ ಮುಲಾಯಂ ಹಾಗೂ ಕಾಂಗ್ರೆಸ್ ನವರಿಗಾಗಲೀ ಇದು ಯಾವ ಕಳವಳವನ್ನೂ ಹುಟ್ಟಿಸಿರಲಿಲ್ಲ.

ಆದರೆ ಮತೀಯವಾದಿಗಳ ವಿಕೃತ ನಡೆಗಳನ್ನು ಬಲ್ಲವರಿಗೆಲ್ಲ ಇದು ಕಳವಳ ಹುಟ್ಟಿಸಬೇಕು. ಮಾರ್ಕ್ಸ್ ವಾದವನ್ನು ಪಠ್ಯಪುಸ್ತಕದಿಂದ ಹೊರಗಿಡುವುದು ಅಚ್ಚಿನ ದೋಷವಾಗಿರದೆ ಮತೀಯ ವಾದಿಗಳ ಮತೀಯ ದೋಷವೆನ್ನುವುದು ಕೂಡ ಇವರ ಪಠ್ಯಪುಸ್ತಕ ರಾಜಕಾರಣ ಬಲ್ಲವರಿಗೆಲ್ಲ ಗೊತ್ತಿರುತ್ತದೆ. ಈ ಪ್ರಶ್ನೆ ಪಾರ್ಲಿಮೆಂಟಿನ ಗಮನಕ್ಕೆ ಬರದಿದ್ದರೆ ಇಂಥ ಅಚ್ಚಿನ ದೋಷಗಳು ನಿರಾತಂಕವಾಗಿ ಮುಂದುವರಿದಿ-ರುತ್ತಿದ್ದವು ಎಂಬುದರಲ್ಲಿ ಯಾರಿಗೂ ಸಂದೇಹ ಬೇಡ.

ಮಾರ್ಕ್ಸ್ ವಾದವನ್ನು ಸ್ಕೂಲು, ಕಾಲೇಜುಗಳಿಂದ ಉಚ್ಚಾಟಿಸಿ ಆದರ ಜಾಗದಲ್ಲಿ ತಮ್ಮ ದೇಶೀಕಸ ತುಂಬಿಬಿಟ್ಟರೆ ತಮ್ಮ ಸನಾತನ ಪತಾಕೆ ಹಾರಿಸುವುದು ಸುಲಭವೆಂದು ಈ ಮತೀಯವಾದಿಗಳು ನಂಬಿರುವಂತಿದೆ. ನಾಸ್ತ್ರೋದಾಮಸ್ ಎಂಬುವವನ ತಿಕ್ಕಲು ಮಾತುಗಳನ್ನು ತಮಗೆ ಬೇಕಾದಂತೆ ವ್ಯಾಖ್ಯಾನಿಸಿಕೊಂಡು ಭಾರತದುದ್ದಕ್ಕೂ ಓಡಾಡುತ್ತಿರುವವರೇ ಇವತ್ತು ಎಳೆಯ ವಿದ್ಯಾರ್ಥಿಗಳಲ್ಲಿ ವೈಚಾರಿಕತೆಯ ತಳಪಾಯ ಹಾಕಬಲ್ಲ ಮಾರ್ಕ್ಸ್ ವಾದವನ್ನು ಇಲ್ಲಿಂದ ಓಡಿಸಲೆತ್ನಿಸುತ್ತಿದ್ದಾರೆ. ಪ್ರಾಯಶಃ ಇಂಡಿಯಾದಲ್ಲಿ ಸನಾತನಿಗಳಿಗೆ ನಿಜಕ್ಕೂ ಸವಾಲಾಗಿರುವವರು ಮಾರ್ಕ್ಸ್ ವಾದಿಗಳು ಹಾಗೂ ಒಟ್ಟಾರೆಯಾಗಿ ಎಡ ಒಲವಿರುವ ಬುದ್ಧಿ ಜೀವಿಗಳು. ಕೇವಲ ಮಾರ್ಕ್ಸ್‌ವಾದದ ತಿರುಳಿನಿಂದಷ್ಟೇ ಪ್ರಭಾವಿತ ನಾಗಿರಬಹುದಾದ ಫ್ಯಾಕ್ಟರಿಯ ಸಾಮಾನ್ಯ ಕಾರ್ಮಿಕ ಕೂಡ ಜಾತೀಯ ಅಜೆಂಡಾಗಳನ್ನು ವಿರೋಧಿಸುತ್ತಿರುತ್ತಾನೆ.

ಸ್ವಾತಂತ್ರ್ಯೋತ್ತರ ಭಾರತದಲ್ಲಂತೂ ಇಲ್ಲಿನ ಬಹುಮುಖ್ಯ ವೈಚಾರಿಕ ಪ್ರಣಾಳಿಕೆಗಳನ್ನು ರೂಪಿಸಿದವರೇ ಮಾರ್ಕ್ಸ್ ವಾದ, ಲೋಹಿಯವಾದ ಹಾಗೂ ಅಂಬೇಡ್ಕರ್ ವಾದಗಳಿಂದ ರೂಪುಗೊಂಡ ಲೇಖಕರು, ಚಿಂತಕರು ಎಂಬುದು ಚಾರಿತ್ರಿಕ ಸತ್ಯ. ಇವರೆಲ್ಲರ ಪ್ರಯತ್ನದಿಂದಾಗಿ ಭಾರತದಲ್ಲಿ ಇವತ್ತು ಅಷ್ಟಿಷ್ಟಾದರೂ ಉಳಿದಿರುವ



ವೈಚಾರಿಕತೆಗೆ ಬೆಂಕಿಯಿಡಲು ಈ ಸನಾತನಿಗಳು ಒಂದು ಗೂಡಿರುವುದು ಯಾರಿಗೂ ಅಚ್ಚರಿ ಹುಟ್ಟಿಸಬೇಕಾಗಿಲ್ಲ. ವೈಚಾರಿಕತೆಯನ್ನು ಬಿತ್ತಬಲ್ಲ ಚಿಂತನೆಗಳನ್ನು ಓಡಿಸಿಬಿಟ್ಟರೆ ತಮ್ಮ ಮನುಧರ್ಮ ಶಾಸ್ತ್ರವನ್ನು ಜಾರಿಗೆ ತುರುಕುವುದು ಸುಲಭ! ಇದಕ್ಕೆಲ್ಲ ಪೂರ್ವಭಾವಿಯಾಗಿ ಪಠ್ಯಪುಸ್ತಕಗಳ ಮೂಲಕ ವಿಷಪ್ರಾಶನ ಮಾಡುವುದು ಈ ಅಜೆಂಡಾದ ಮೊದಲ ಹೆಜ್ಜೆ. ಎಳೆಯ ಮನಸ್ಸುಗಳಿಗೆ ಹೊರಗಿನ ಗಾಳಿಯೇ ಆಡದಂತೆ ಮಾಡಿಬಿಟ್ಟರೆ ಸಾಕು.ದೇಶೀ ಮೆಣಸಿನ ಹೊಗೆಯಲ್ಲಿ ಅವರನ್ನು ಉಸಿರುಕಟ್ಟಿಸುವುದು ಇನ್ನಷ್ಟು ಸುಲಭ. ಆದ್ದರಿಂದಲೇ ಮೊದಲು ಮಾರ್ಕ್ಸ್ ವಾದವನ್ನೂ ಮಾರ್ಕ್ಸ್ ವಾದಿ ಗಳನ್ನೂ ಓಡಿಸಲು ಸನಾತನಿಗಳು ಇಷ್ಟೊಂದು ಕಾತುರರಾಗಿರುವುದು.

ಇವತ್ತು ಪಾರ್ಲಿಮೆಂಟಿನ ಗಲಾಟೆಗೆ ಹೆದರಿದ ಸರ್ಕಾರ ಮಾರ್ಕ್ಸ್ ವಾದವನ್ನು ಪಠ್ಯ ಪುಸ್ತಕದಿಂದ ಕೈಬಿಡದಿರಬಹುದು. ಆದರೆ ಈಗ ಆರಂಭವಾಗಿರುವ ಬೆಳವಣಿಗೆ ಎಷ್ಟು ಅಪಾಯಕಾರಿ ಯಾದದ್ದೆಂದರೆ ನಾಳೆ ಅಂಬೇಡ್ಕರ್ ವಾದ ತನಗೆ ಅಡ್ಡಿಯಾಗಿದೆಯೆಂದು ಅದನ್ನು ಓಡಿಸುವವನೊಬ್ಬ ಖಂಡಿತಾ ಹುಟ್ಟಿಕೊಳ್ಳುತ್ತಾನೆ. ಬಸವಣ್ಣನವರ ವಚನಗಳು ಮಕ್ಕಳಿಗೆ ಒಗ್ಗುವುದಿಲ್ಲವೆಂದು ವಚನಗಳಿಗೆ ಗೇಟ್ ಪಾಸ್ ಕೊಡುವವನೊಬ್ಬ ಅವನ ಬೆನ್ನಿಗೇ ಹುಟ್ಟಿರುತ್ತಾನೆ. ಹಾಗೆಯೇ ಮತ್ತೊಬ್ಬ ದೇಶೀವಾದಿ ಮೂರ್ಖಿ ಆ ಶೇಕ್ಸ್‌ಪಿಯರ್, ಎಲಿಯಟ್ ಮುಂತಾದವರೆಲ್ಲ ವಿದೇಶಿಯರೆಂದು ಅವರನ್ನು ಪಠ್ಯಪುಸ್ತಕದಿಂದ ಕಿತ್ತೊಗೆಯಲೆತ್ನಿಸುತ್ತಾನೆ. ಆಗ ಈ ಸನಾತನಿಗಳಿಗೆ ಸಂಸತ ಪಾಠಗಳನ್ನು ಹೊತ್ತ ಪಠ್ಯಪುಸ್ತಕಗಳು ನಮ್ಮ ಎಳೆಯರ ಶವಗಳನ್ನು ಇಪ್ಪತ್ತೊಂದನೆಯ ಶತಮಾನಕ್ಕೆ ಹೊತ್ತೊಯ್ಯಲು ತುದಿಗಾಲಲ್ಲಿ ನಿಂತಿರುವ ದೃಶ್ಯ ಹೇಗಿರುತ್ತದೆಂದು ಈಗಲೇ ಕಲ್ಪಿಸಿಕೊಳ್ಳಬಹುದು.

ಬಿಜೆಪಿಯ ಪಠ್ಯಪುಸ್ತಕ ರಾಜಕಾರಣಗಳು ಈ ಸಿಲಬಸ್ ಹಜಾಮತಿಯ ಕೆಲಸದಲ್ಲಿ ತೊಡಗಿದ್ದಾಗಲೇ ನಡೆದ ಇನ್ನೊಂದು ಕುತೂಹಲಕರ ಬೆಳವಣಿಗೆ ಪ್ರಾಯಶಃ ಬಹುತೇಕರ ಗಮನಕ್ಕೆ ಬಂದಿರಲಿಕ್ಕಿಲ್ಲ. ಇನ್ಶೂರೆನ್ಸ್ ವಲಯಕ್ಕೆ ಬಹುರಾಷ್ಟ್ರೀಯ ಕಂಪನಿಗಳು ಪ್ರವೇಶಿಸಲು ಅನುವು ಮಾಡಿಕೊಡುವ ಮಸೂದೆಯನ್ನು ವಿರೋಧಿಸಿ ಮೊನ್ನೆ ಕಮ್ಯೂನಿಸ್ಟ್ ಪಕ್ಷಗಳು ಕರೆಕೊಟ್ಟವು. ವಿಶೇಷವೆಂದರೆ, ಕಮ್ಯೂನಿಸ್ಟರ ಈ ಮುಷ್ಕರದಲ್ಲಿ ಬಿಜೆಪಿಯ ಕಾರ್ಮಿಕ ಸಂಘವಾದ ಭಾರತೀಯ ಮಜ್ದೂರ್ ಯೂನಿಯನ್ ಕೂಡ ಪಾಲ್ಗೊಳ್ಳಲು ಮುಂದಾಯಿತು. ಭಾರತೀಯ ಮಜ್ದೂರ್ ಯೂನಿಯನ್ನಿನ ಮಾತೃಪಕ್ಷದ ಸದಸ್ಯರು ಮಾರ್ಕ್ಸ್‌ವಾದವನ್ನು ಭಾರತದ ಪಠ್ಯಪುಸ್ತಕಗಳಿಂದ ತೆಗೆದು ಹಾಕಲೆತ್ನಿಸುತ್ತಿದ್ದರೆ, ಇತ್ತ ಮಜ್ದೂರ್ ಯೂನಿಯನ್ ತನ್ನ ಸದಸ್ಯರಾದ ಕಾರ್ಮಿಕರ ಹಿತರಕ್ಷಣೆಗೆ ಹಿಂದೂ ಅಜೆಂಡಾದಲ್ಲಿ ಯಾವ ಮಾರ್ಗವೂ ಕಾಣದೆ ಕೊನೆಗೆ ಮಾರ್ಕ್ಸ್ ವಾದಿಗಳ ಹಾದಿಯನ್ನೇ ಹಿಡಿಯಬೇಕಾಯಿತು. ಇದಕ್ಕೆ ಬಹುಮುಖ್ಯ ಕಾರಣವೆಂದರೆ ಮಾರ್ಕ್ಸ್‌ವಾದದ ಮಹತ್ವ ಬೇರೆಲ್ಲರಿಗಿಂತ ಹೆಚ್ಚಾಗಿ ಶ್ರಮಿಕರಿಗೆ, ಕಾರ್ಮಿಕರಿಗೆ ಚೆನ್ನಾಗಿ ಮನದಟ್ಟಾಗಿರುತ್ತದೆ ಎನ್ನುವುದು. ಇವತ್ತು ಇಂಡಿಯಾದಲ್ಲಿ ಮಾರ್ಕ್ಸ್ ವಾದ ತನ್ನ ಸರಳ ರೂಪದಲ್ಲಾದರೂ ಇರದಿದ್ದರೆ, ಥರಹೇವಾರಿ ಫ್ಯೂಡಲ್ ಮೌಲ್ಯಗಳ ತವರಾದ ಇಲ್ಲಿ ಬಂಡವಾಳ ಶಾಹಿಗಳು, ಉದ್ಯಮಪತಿಗಳು ಎಷ್ಟು ಕೊಬ್ಬಿರುತ್ತಿದ್ದರು ಹಾಗೂ ಕಾರ್ಮಿಕರನ್ನು ಶ್ರಮಿಕರನ್ನು ಎಷ್ಟು ಉಸಿರುಗಟ್ಟಿಸಿರುತ್ತಿದ್ದರು ಎಂಬುದನ್ನು ಸುಲಭವಾಗಿ ಊಹಿಸಬಹುದು. ಇವತ್ತು ಮಾರ್ಕ್ಸ್‌ವಾದವನ್ನು ಪಠ್ಯಪುಸ್ತಕಗಳಿಂದ ಕಿತ್ತೊಗೆಯುವುದರ ವಿರುದ್ಧ ಮೊದಲು ದನಿಯೆತ್ತಬೇಕಾಗಿರುವವರು ಭಾರತದ ಕಾರ್ಮಿಕರು ಎಂಬುದನ್ನು ನಮ್ಮ ಟ್ರೇಡ್ ಯೂನಿಯನ್ ನಾಯಕಮಣಿ ಗಳಿಗೆ ಬಿಡಿಸಿ ಹೇಳಬೇಕಾಗಿರುವುದು ದುರದೃಷ್ಟಕರ.

ಈ ಕಾರ್ಲ್ ಮಾರ್ಕ್ಸ್ ಪಠ್ಯಪ್ರಕರಣವನ್ನೂ ಈಚೆಗೆ ಪೋಪ್ ಜಾನ್‌ಪಾಲ್‌ರ ಭಾರತದ ಭೇಟಿಗೆ ಮತೀಯ ವಾದಿಗಳು ವ್ಯಕ್ತಪಡಿಸುತ್ತಿರುವ ವಿರೋಧವನ್ನೂ ಒಟ್ಟಿಗೇ ಇಟ್ಟು ನೋಡಿದವರಿಗೆ ಇವೆರಡೂ ಒಂದೇ ವಿಷವೃಕ್ಷದ ಎರಡು ರೆಂಬೆಗಳೆಂಬುದು ತಕ್ಷಣ ಹೊಳೆಯುತ್ತದೆ. ಈ ಎರಡೂ ಕ್ರಿಯೆಗಳ ಹಿಂದೆ ಕೆಲಸ ಮಾಡುತ್ತಿರುವ ಮನಸ್ಸು ಒಂದೇ.

11ನೇ ಪುಟದಿಂದ

ಹುಟ್ಟಿ ಬೆಳೆದ ಅಲ್ಲಿನ ನಾಗರಿಕರಿಗೆ ಬಂಡವಾಳಶಾಹಿ ವ್ಯವಸ್ಥೆ ಏನೆಂದು ಅರ್ಥವಾಗಹತ್ತಿದೆ.

ಸಾಮ್ರಾಜ್ಯಶಾಹಿ 'ಜಂಗಲ್ ರಾಜ್'

ಅಂತರ್‌ರಾಷ್ಟ್ರೀಯ ಕ್ಷೇತ್ರದಲ್ಲೂ ಸಾಮ್ರಾಜ್ಯಶಾಹಿಗೆ ಸವಾಲು ಹಾಕುವ ಸೋವಿಯತ್ ಒಕ್ಕೂಟ ಇಲ್ಲವಾದ್ದರಿಂದ ಸಾಮ್ರಾಜ್ಯಶಾಹಿ ತನ್ನ ಎಂದಿನ ಅಧಿಪತ್ಯ, ಆಕ್ರಮಣತನ ಪ್ರದರ್ಶಿಸುತ್ತಿದೆ. ಇರಾಕ್ ಯುದ್ಧದಿಂದ ಆರಂಭಿಸಿ ಬೋಸ್ನಿಯಾ, ಸರ್ಬಿಯಾ, ಕೊಸೊವೊ, ಸೂಡಾನ್, ಅಫಘಾನಿಸ್ತಾನದ ಮೇಲೆ ದಾಳಿ ಜಗತ್ತಿನಲ್ಲಿ ಸಾಮ್ರಾಜ್ಯಶಾಹಿ 'ಜಂಗಲ್ ರಾಜ್' ತಾಂಡವವಾಡುತ್ತಿದೆ ಎಂದು ತೋರಿಸಿಕೊಟ್ಟಿದೆ. ಮೂರನೇ ಜಗತ್ತಿನ ಬಡ ದೇಶಗಳ ಸ್ವತಂತ್ರ ಬೆಳವಣಿಗೆ ಅಸಾಧ್ಯದ ಮಾತಾಗಿದೆ. ಎಲ್ಲ ದೇಶಗಳು ಐಎಂಎಫ್-ವಿಶ್ವಬ್ಯಾಂಕ್‌ನ ಎದುರು ಭಿಕ್ಷುಕರಂತಾಗಿವೆ. ಬಡದೇಶಗಳ ಬೆಳವಣಿಗೆಯ ಸಾಧನಗಳಾಗಿದ್ದ ವಿಶ್ವಸಂಸ್ಥೆ ಸಂಘಟನೆಗಳು ಸಾಮ್ರಾಜ್ಯಶಾಹಿ-ಸೊತ್ತಾಗಿವೆ.

ಈ ಶತಮಾನದ ಮಹಾನ್ ಘಟನೆಯಾದ ಆಕ್ಟೋಬರ್ ಕ್ರಾಂತಿಯ, ಸೋವಿಯತ್ ಒಕ್ಕೂಟದ ಸಾಧನೆಗಳು, ಅದರ ವಿಘಟನೆ, ಕುಸಿತದಿಂದ ಜನ ಪಾಠ ಕಲಿಯುತ್ತಾರೆ. ಈ ಶತಮಾನದ ಮಹಾನ್ ಸಾಧನೆಗಳನ್ನು, ಕಳೆದುಕೊಳ್ಳುವುದು ಜನ ಸಹಿಸಲ್ಲ. ಈ ಸಾಧನೆಗಳನ್ನು ಮತ್ತೆ ಗಳಿಸಿಕೊಳ್ಳಲು ಹೋರಾಡುತ್ತಾರೆ. ಸಾಮ್ರಾಜ್ಯಶಾಹಿಯ ಅಟಾಟೋಪ ಬಹಳ ದಿನ ನಡೆಯಲ್ಲ ಎಂದು ಈ ಶತಮಾನದ ಕೊನೆಯ ಅಕ್ಟೋಬರ್ ಕ್ರಾಂತಿ ವಾರ್ಷಿಕೋತ್ಸವ ಸಂದರ್ಭದಲ್ಲಿ ಹಾರೈಸಬೇಕಾಗಿದೆ.



ಇಂದಿನ ರಷ್ಯಾದಲ್ಲಿ ವೃದ್ಧ ಮಹಿಳೆಯೊಬ್ಬರು ಭಿಕ್ಷೆ ಬೇಡುತ್ತಿರುವ ದೃಶ್ಯ

Reg. No.17015/64 KRNM/BGS-405 MAG(2) PRB DECR 319-79/79 AIKYARANGA WEEKLY

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist) Karnataka State Committee. Editor : G.N. NAGARAJ